ದೇ. ಜವರೇಗೌಡ




...ರಾಟಗಾರರು
...ಚಂದ್ರ ಬುಕ್ ಡಿಪೋ
ಮೈಸೂರು

ದೇ. ಜವರೇಗೌಡ



ಬೆಂಗಳೂರು ಕೆಂಪೇಗೌಡ

" ಕೂಗುತಿವೆ ಕಲ್ಲು,
ಕಿವಿವೆತ್ತ ಕಿವುಡರಿರ, ಕೇಳಿ ಆ ಸೊಲ್ಲುಗಳ"
—ಕುವೆಂಪು



ಶಿವಗಂಗೆ

ಶ್ರೀ ರಾಮಚಂದ್ರ ಬುಕ್ ಡಿಪೋ
ಮೈಸೂರು
೧೯೫೨

ವಿಷಯಾನುಕ್ರಮಣಿಕೆ

ಮೊದಲನೆಯ ಮುದ್ರಣ—೧೯೫೦

ಎರಡನೆಯ ಮುದ್ರಣ—೧೯೫೨

ಪ್ರಕಾಶಕರು: ದೇ. ಜವರೇಗೌಡ

ಬೆಲೆ: ೦—೧೫—೦

ಮುದ್ರಕರು:

ಜಿ. ಎಚ್. ರಾಮರಾವ್, ಬಿ.ಎಸ್‌ಸಿ.,

ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್,

ಮೈಸೂರು

ಪೀಠಿಕೆ: ಕಾಳಿನಂತೆ ಬೆಳೆ

ಆರುನೂರು ವರ್ಷಗಳ ಹಿಂದಿನ ಸಂಗತಿ. ಪೂರ್ವಕಾಲದಿಂದ ದಕ್ಷಿಣದೇಶದ ಕಾಂಚೀಕ್ಷೇತ್ರ ಪುಣ್ಯಸ್ಥಳವೆಂದು ಪ್ರಸಿದ್ಧವಾಗಿದೆ. ಅದರ ನೆರೆಯಲ್ಲಿದ್ದ ಆಲೂರು ಗ್ರಾಮ ಶ್ರೀಮಂತರಿಂದಲೂ, ದಾನಿಗಳಿಂದಲೂ, ಧರ್ಮಿಷ್ಠರಿಂದಲೂ ಶೋಭಿಸುತ್ತಿತ್ತು. ರಣಭೈರೇಗೌಡ ಆ ಊರಿನ ಮುಖಂಡ, ಒಕ್ಕಲು ಮನೆತನಕ್ಕೆ ಸೇರಿದವನು. ಕರ್ತವ್ಯಪರಾಯಣತೆ, ಸತ್ಯ ನ್ಯಾಯನಿಷ್ಠೆಗಳಲ್ಲಿ ಅವನು ಆ ಸುತ್ತಮುತ್ತಣ ಪ್ರಾಂತ್ಯದಲ್ಲೆಲ್ಲ ಹೆಸರುಪಡೆದಿದ್ದನು. ಯಾವ ಕಡೆ ಏನು ತಿಕ್ಕಾಟ ನಡೆಯಲಿ, ಎರಡು ಪಕ್ಷದವರೂ ಇವನ ಹತ್ತಿರ ಬಂದು ತಮ್ಮ ವ್ಯವಹಾರಗಳನ್ನು ಪೂರೈಸಿಕೊಂಡು ಹೋಗುತ್ತಿದ್ದರು. ಅವನ ನಿಷ್ಪಕ್ಷಪಾತವಾದ ತೀರ್ಪಿಗೆ ಉಭಯಪಕ್ಷದವರೂ ತಲೆಬಾಗುತ್ತಿದ್ದರು. ಆದುದರಿಂದ ಅಲ್ಲಿಯ ಜನರಿಗೆ ಅವನು ಅಚ್ಚುಮೆಚ್ಚಾಗಿದ್ದನು.

ರಣಭೈರೇಗೌಡನಿಗೆ ಒಬ್ಬಳೇ ಮಗಳು. ಹೆಸರು ಕೆಂಪಮ್ಮ. ಹೆಸರಿಗೆ ತಕ್ಕಂತೆ ರೂಪವತಿ. ಅವಳ ಚೆಲುವನ್ನು ನೋಡಿ ಮೆಚ್ಚದವರೇ ಇರಲಿಲ್ಲ. ಬೀದಿಯಲ್ಲಿ ಆಟವಾಡುತ್ತಿದ್ದ ಮಗುವನ್ನು ಎತ್ತಿಕೊಂಡು ಮುದ್ದಾಡದೆ ಯಾರೂ ಮುಂದೆ ಸಾಗುತ್ತಿರಲಿಲ್ಲ. ವಯಸ್ಸು ಹೆಚ್ಚಿದಂತೆಲ್ಲ ಅವಳ ಸೌಂದರ್ಯದ ಜತೆಗೆ ನಡೆನುಡಿಗಳೂ ಆಕರ್ಷಣೀಯವಾದುವು. ಸರಿಗೆ ಪೇಟವನ್ನು ಧರಿಸಿದ ಹಣವಂತನಾಗಲಿ, ಚಿಂದಿಯನ್ನು ಹೊದೆದ ಕಡುಬಡವನಾಗಲಿ, ಯಾರು ಮನೆಗೆ ಬಂದರೂ ಅವರನ್ನು ಒಂದೇ ಸ[illegible]ರಿಸುತ್ತಿದ್ದಳು; ಬಾಯಿತುಂಬ ಮಾತಾ[illegible] ಬಂದರಂತು



ಮನೆಯಲ್ಲಿ ಹೇಳದೆ ಕೇಳದೆ ಅವರ ಜೋಳಿಗೆಗೆ ಅರೆಮೊರ ಅಕ್ಕಿಯನ್ನೋ ರಾಗಿಯನ್ನೋ ಸುರಿದುಬಿಡುತ್ತಿದ್ದಳು.

ಊರಿನ ಮಧ್ಯದಲ್ಲೊಂದು ಭೈರವದೇವಾಲಯವಿತ್ತು. ಅದೇ ರಣಭೈರೇಗೌಡನ ಮನೆದೇವರು. ಹತ್ತು ವರ್ಷದ ಕೆಂಪಮ್ಮನ ಗಮನ ಆ ದೇವರ ಕಡೆಗೆ ಹರಿಯಿತು. ಬೆಳಗ್ಗೆ ಎದ್ದು ಹಟ್ಟಿಯನ್ನು ಗುಡಿಸಿ, ಸಗಣಿ ಹಾಕಿ, ಮುಖ ಕೈಕಾಲುಗಳನ್ನು ತೊಳೆದುಕೊಂಡು ದೇವಾಲಯದ ಕಡೆಗೆ ನಡೆಯುತ್ತಿದ್ದಳು. ದೇವಾಲಯವನ್ನೆಲ್ಲ ಚೊಕ್ಕಟವಾಗಿ ಗುಡಿಸಿ ತೊಳೆದು, ಪಕ್ಕದ ತೋಟದಲ್ಲಿ ಹೂವುಗಳನ್ನು ಕೊಯ್ದು ತಂದು ಪೂಜೆಯಲ್ಲಿ ನಿರತಳಾಗುತ್ತಿದ್ದಳು. ಪೂಜೆ ಮುಗಿಸಿಕೊಂಡು ಮನೆಗೆ ಬರುವ ಹೊತ್ತಿಗೆ ಮಧ್ಯಾಹ್ನದ ಸಮಯವಾಗುತ್ತಿತ್ತು. ಅವಳ ಗುಣಶೀಲ, ಸೌಂದರ್ಯಸ್ವಭಾವ, ದೈವಭಕ್ತಿಗಳಿಗೆ ತಲೆತೂಗುತ್ತಿದ್ದ ಜನರು ಅವಳನ್ನು 'ದೊಡ್ಡಮ್ಮ' ಎಂದು ಕರೆಯುತ್ತಿದ್ದರು. ಮಗಳನ್ನು ನೋಡುತ್ತ ನೋಡುತ್ತ ತಂದೆ ಅಪರಿಮಿತವಾದ ಸಂತೋಷದಿಂದ ಹಿಗ್ಗುತ್ತಿದ್ದನು.

ಕ್ರಮೇಣ ದೊಡ್ಡಮ್ಮನ ಹೆಸರು ಎಲ್ಲೆಲ್ಲೂ ಹರಡಿತು ; ಆ ಪ್ರಾಂತ್ಯದ ಪಾಳೆಯಗಾರನ ಕಿವಿಯನ್ನು ತಾಕಿತು. ಪಾಳೆಯಗಾರನಾದರೋ ಧೂರ್ತ, ದುಷ್ಟ, ದುರಹಂಕಾರಿ. ತನಗೆ ಯಾರೂ ಇದಿರಿಲ್ಲವೆಂದು ತಿಳಿದು ದುರುದುಂಬಿತನದಿಂದ ವರ್ತಿಸುತ್ತಿದ್ದನು. ಅವನಿಂದ ಬಡಬಗ್ಗರಿಗಂತು ಉಳಿವಿರಲಿಲ್ಲ. ಯಾರ ಹತ್ತಿರ ಒಳ್ಳೆಯ ವಸ್ತುವಿದೆಯೆಂದು ಸುದ್ದಿ ಬಂದರೆ ಸಾಕು, ಅದು ತನ್ನದೆಂದು ದೋಚಿಕೊಳ್ಳುತ್ತಿದ್ದನು. ರಾತ್ರಿಯಕಾಲ ತನ್ನ ಪಡೆಯೊಂದಿಗೆ ನೆರೆಹೊರೆಯ ಪ್ರಾಂತ್ಯಗಳಿಗೆ ನುಗ್ಗಿ ಅಲ್ಲಿ ಸಿಕ್ಕಿದುದನ್ನೆಲ್ಲ ಕೊಳ್ಳೆಹೊಡೆದು ತರುತಿದ್ದನು. ಆದರೆ ಅವನ ಕೈ ಎಂದೂ ಭೈರೇಗೌಡನ ಮುಂದೆ ನಡೆಯುತ್ತಿರಲಿಲ್ಲ. ಗೌಡನ ಹಿರಿಯತನದ ಮುಂದೆ

ಅವನ ಧೂರ್ತತನ ಸಾಗುತ್ತಿರಲಿಲ್ಲ. ದೊಡ್ಡಮ್ಮನ ಹೆಸರು ಕೇಳಿದ ಮೇಲೆ ಆ ವಿಷಯಲಂಪಟ ಕೆಲವು ದಿನಗಳು ತೆಪ್ಪಗಿದ್ದನು. ಸೊಕ್ಕೇರಿದ ಆ ಮೂರ್ಖ ಎಷ್ಟು ದಿನ ತಾನೆ ಸುಮ್ಮನಿದ್ದಾನು! ಗೌಡ ಮಗಳನ್ನು ತನಗೆ ಮದುವೆಮಾಡಿಕೊಡಬೇಕೆಂದೂ, ತಪ್ಪಿದರೆ ಅವನನ್ನೂ ಅವನ ಕಡೆಯವರನ್ನೂ ಸದೆಬಡಿದು, ಅವಳನ್ನು ವಶಪಡಿಸಿಕೊಳ್ಳುವುದಾಗಿಯೂ ತನ್ನ ಕಡೆಯುವರ ಮೂಲಕ ಗೌಡನಿಗೆ ಹೇಳಿ ಕಳುಹಿಸಿದನು.

ಅಂದಿನ ರಾತ್ರಿ ಅವನಿಗೆ ನಿದ್ದೆ ಹತ್ತಲಿಲ್ಲ. ಸದ್ಗುಣಾಭರಣೆಯಾದ ದೊಡ್ಡಮ್ಮನನ್ನು ಅಂತಹ ನೀಚನಿಗೆ, ಕಾಮಾಂಧನಿಗೆ ಕೊಡುವುದೆ? ಮಗಳಾದರೂ ಆ ಸಂಬಂಧಕ್ಕೆ ಒಪ್ಪುವಳೆ? ಎಂದು ಬಗೆಬಗೆಯಾಗಿ ಆಲೋಚಿಸಿದನು. ಅನೇಕ ವಿಚಾರತರಂಗಗಳ ಸುಳಿಯಲ್ಲಿ ಸಿಕ್ಕಿ ಸೊರಗಿದನು. ಆ ವಿಪತ್ತಿನಿಂದ ಪಾರಾಗುವ ಉಪಾಯವನ್ನು ಈಡೇರಿಸಿಕೊಳ್ಳುವವನಾಗಿದ್ದನು. ಗೌಡನಿಗೆ ಜನರ ಬೆಂಬಲವಿತ್ತು. ಆದರೆ ಅವರು ಅವನ ಧೂರ್ತಸೈನಿಕರ ಮುಂದೆ ನಿಂತು ಯುದ್ಧಮಾಡುವುದು ಕಷ್ಟವಾಗಿತ್ತು. ಸ್ವಾರ್ಥಕ್ಕಾಗಿ, ಸ್ವಕ್ಷೇಮಕ್ಕಾಗಿ ಅಷ್ಟು ಮಂದಿಯನ್ನು ಬಲಿಗೊಡುವುದು ಗೌಡನಿಗೆ ಸರಿದೋರಲಿಲ್ಲ. ರಕ್ತದ ಕೋಡಿಯಲ್ಲಿ ಮುಳುಗುವುದಕ್ಕಿಂತ ತಾನು ಮಾತ್ರ ತನ್ನ ಸಂಸಾರದೊಡಗೂಡಿ ದುಷ್ಟನ ಸಂಗವನ್ನೇ ತ್ಯಜಿಸಿ ದೂರದೇಶಕ್ಕೆ ಹೊರಟುಹೋಗುವುದೆಂದು ನಿರ್ಧರಿಸಿಕೊಂಡನು.

ಮಾರನೆಯ ಬೆಳಗ್ಗೆ ಗೌಡ ಮಗಳಿಗೆ ಪಾಳೆಯಗಾರನ ವೃತ್ತಾಂತವನ್ನೂ, ತನ್ನ ನಿರ್ಧಾರವನ್ನೂ ವಿವರಿಸಿದನು. ತನ್ನಿಂದ ತಾಯಿತಂದೆಯರಿಗೆ ಸಂಕಟ ಒದಗಿದುದಕ್ಕಾಗಿ ಮಗಳು ಮರುಗಿದಳು. ತನ್ನ ಏಳುಮಂದಿ ತಮ್ಮಂದಿರನ್ನೂ, ಕೆಲವರು ಆಪ್ತೇಷ್ಟ

ರನ್ನೂ ಕೂಡಿಕೊಂಡು ಗೌಡ ಮಂತ್ರಾಲೋಚನೆ ನಡೆಸಿದನು. ಗೌಡನಿಂದ ಅಗಲುವುದಕ್ಕೆ ಆಪ್ತೇಷ್ಟರು ಸಮ್ಮತಿಸಲಿಲ್ಲ. ತಮ್ಮ ತನುಮನಧನಗಳನ್ನೆಲ್ಲ ಬಲಿಗೊಟ್ಟು ಒದಗಿದ್ದ ವಿಪತ್ತನ್ನು ಪರಿಹರಿಸುವುದಾಗಿ ಆಣೆಯಿಟ್ಟು ಹೇಳಿದರು. ತನ್ನಿಂದ ಊರಿಗೆ ಊರೇ ಪಾಳೆಯಗಾರನ ಕೋಪಕ್ಕೆ ತುತ್ತಾಗಬಹುದೆಂದೂ, ಅದನ್ನು ತಪ್ಪಿಸಲು ತಾನು ಊರುಬಿಡಬೇಕಾಗಿದೆಯೆಂದೂ ಗೌಡ ನುಡಿದನು. ಅತಿ ಪ್ರಯಾಸದಿಂದ ಅವರನ್ನು ಒಪ್ಪಿಸಿದನು. ಊರಿನವರಿಗೆ ಆ ಸಂಗತಿ ತಿಳಿದರೆ ತಮ್ಮ ನಿರ್ಧಾರಕ್ಕೆ ಭಂಗ ಸಂಭವಿಸಬಹುದೆಂದು ಊಹಿಸಿ ಅದನ್ನು ಗೋಪ್ಯವಾಗಿಟ್ಟನು.

ಕಡೆಗೊಂದುದಿನ ಕಾರ್ಗಾಲದ ಕಗ್ಗತ್ತಲಲ್ಲಿ ಗೌಡನ ಪರಿವಾರವೆಲ್ಲ ಪ್ರಯಾಣಕ್ಕೆ ಸನ್ನದ್ಧವಾಯಿತು. ಏಳು ಬಂಡಿಗಳಲ್ಲಿ ಸಾಧ್ಯವಾದಷ್ಟು ಸಾಮಾನುಗಳನ್ನು ಹೇರಿಕೊಂಡು ತಮ್ಮಂದಿರೊಡಗೂಡಿ ಗೌಡ ಊರುಬಿಟ್ಟನು. ಮೊದಲ ಮೂರು ದಿನಗಳು ಪ್ರಯಾಣ ಸುಗಮವಾಗಿ ಸಾಗಿತು. ಇರುಳು ಮರದಡಿಯಲ್ಲಿ ತಂಗಿ ವಿಶ್ರಮಿಸಿಕೊಂಡು ಹಗಲೆಲ್ಲ ಪ್ರಯಾಣವನ್ನು ಮುಂದುವರಿಸುತ್ತಿದ್ದರು. ನಾಲ್ಕನೆಯ ದಿನ ಮಳೆಯ ರಭಸ ಅತಿಯಾಯಿತು. ಕೆರೆಕುಂಟೆಗಳು ತುಂಬಿದುವು. ಹೊಳೆ ಕಾಲುವೆಗಳು ಉಕ್ಕಿ ಹರಿದುವು; ನೆಲವೆಲ್ಲ ಜಲಮಯವಾಯಿತು. ಅವರು ಕಾಡಿನಲ್ಲಿಯೇ ತಂಗಿದ್ದು ಮಳೆ ಕಡಮೆಯಾದ ಮೇಲೆ ಮುಂದುವರಿದರು. ಆ ಕಡೆ ಗೌಡನಿಂದ ಇನ್ನೂ ವರ್ತಮಾನ ಬಾರದಿದ್ದುದಕ್ಕಾಗಿ ಕೋಪೋದ್ದೀಪಿತನಾದ ಪಾಳೆಯಗಾರ ತನ್ನ ದಂಡಿನೊಡನೆ ಆಲೂರಿಗೆ ದಾಳಿಯಿಟ್ಟನು. ಗೌಡನ ಮನೆ ಬರಿದಾಗಿದ್ದುದನ್ನು ಕಂಡು ರೋಷಾವೇಶದಿಂದ ಆರ್ಭಟಿಸಿದನು. ಪ್ರತಿಯೊಂದು ಮನೆಯನ್ನೂ ಹುಡುಕಿದನು. ನಿರ್ದೋಷಿಗಳಾದ ಜನರನ್ನು ಹಿಂಸಿಸಿ

ವನು. ಕಡೆಗೆ ಗೌಡನ ಪರಿವಾರ ಹೊರಟ ಜಾಡನ್ನು ಹಿಡಿದು ಅತಿ ತ್ವರೆಯಿಂದ ಸಾಗಿದನು. ಗೌಡ ಮತ್ತು ಗೌಡನ ಪರಿವಾರ ವೆಲ್ಲ ವಿಪತ್ತಿನಿಂದ ಪಾರಾದೆವೆಂದು ಸಮಾಧಾನಗೊಂಡು ಪಾಲಾರ್ ನದಿಯ ದಡದಲ್ಲಿ ಬೀಡುಬಿಟ್ಟು ದಣಿವಾರಿಸಿಕೊಳ್ಳುತ್ತಿದ್ದರು. ಹೊಳೆ ಉಕ್ಕಿ ಹರಿಯುತ್ತಿದ್ದುದರಿಂದ ಅದು ಇಳಿಯಲೆಂದು ಕಾದಿದ್ದರು. ಅಷ್ಟರಲ್ಲಿಯೆ ಆ ರಾಕ್ಷಸನ ಸೈನ್ಯ ಕಣ್ಣಿಗೆ ಬಿದ್ದಿತು. ಗೌಡನ ಪರಿವಾರ ತಳಮಳಗೊಂಡಿತು. ಪಾಳೆಯಗಾರನ ಪಾಲಾಗುವುದು ಅಥವಾ ಗಂಗೆಯ ಪಾಲಾಗುವುದು, ಎರಡೇ ಅವರಿಗಿದ್ದ ದಾರಿ. ದೊಡ್ಡಮ್ಮನಾದರು ಸುಮ್ಮನಿರಲಿಲ್ಲ. ತನ್ನಿಂದ ತನ್ನವರಿಗೊದಗಿದ್ದ ಕಂಟಕವನ್ನು ನೆನೆದು ಹಂಬಲಿಸಿದಳು, ತನ್ನ ಒಡೆಯನಾದ ಭೈರವನನ್ನು ಮತ್ತೆ ಮತ್ತೆ ನೆನೆದಳು, ಕಡೆಗೆ ನೆಟ್ಟಗೆ ಹೊಳೆಗಿಳಿದಳು. ಪಾಪಿಯಿಂದ ಪಾರಾಗುವ ಉಪಾಯ ಕಾಣದ ಗೌಡನ ಪರಿವಾರ ಅವಳನ್ನು ಹಿಂಬಾಲಿಸಿತು. ತಾಯಿ ಗಂಗೆಯ ಉರುಬು ತಗ್ಗಿತು. ದೊಡ್ಡಮ್ಮ ಮುಂದೆ, ಪರಿವಾರ ಹಿಂದೆ, ಎಲ್ಲರೂ ಸರಾಗವಾಗಿ ಆಚೆಯ ದಡವನ್ನು ತಲುಪಿದರು. ಕೂಡಲೆ ನದಿಯ ಪ್ರವಾಹ ಉಕ್ಕಿತು. ಬೇಟೆ ಸಿಕ್ಕಿತೆಂದು ನಾಗಾಲೋಟದಿಂದ ಬಂದ ಪಾಳೆಯಗಾರನ ಸೈನ್ಯ ಹೊಳೆಯನ್ನು ದಾಟಲಾರದೆ ಹಿಂದೆಯೇ ನಿಲ್ಲಬೇಕಾಯಿತು. ಶತ್ರುವಿನ ಭಯದಿಂದ ಪಾರಾದ ಗೌಡ ಪುನಃ ಪುನಃ ತನ್ನ ಮಗಳನ್ನು ನೆನೆಯುತ್ತ ತನ್ನ ಪರಿವಾರದೊಡನೆ ಮುಂದೆ ಸಾಗಿ ಈಗ ದೇವನಹಳ್ಳಿ ತಾಲ್ಲೂಕಿನಲ್ಲಿ ಆವತಿಗ್ರಾಮವಿರುವ ಪ್ರದೇಶದಲ್ಲಿ ಬಂದು ನಿಂತನು. ಆ ಪ್ರದೇಶ ಸಾರವತ್ತಾಗಿದ್ದು ಜಲ ಸಮೃದ್ಧವಾಗಿದ್ದುದರಿಂದ ಅವರು ಅಲ್ಲಿಯೇ ವಸತಿಗಳನ್ನು ಏರ್ಪಡಿಸಿಕೊಂಡರು.

ಆ ಕಾಲದಲ್ಲಿ ಭರತಖಂಡದ ಪರಿಸ್ಥಿತಿ ಅತಿ ಶೋಚನೀಯ

ವಾಗಿತ್ತು. ವಿಂಧ್ಯಪರ್ವತದ ಉತ್ತರ ಭಾಗವೆಲ್ಲ ಮಹದೀಯರ ಆಳ್ವಿಕೆಗೊಳಗಾಗಿತ್ತು. ಆಗಾಗ್ಗೆ ದಕ್ಷಿಣಕ್ಕೂ ನುಗ್ಗಿ ಊರು ಕೇರಿಗಳನ್ನು ಕೊಳ್ಳೆಹೊಡೆದು ಜನರನ್ನು ಹಿಂಸಿಸುತ್ತಿದ್ದರು. ದೇವಗಿರಿಯ ಯಾದವರೂ, ಓರಂಗಲ್ಲಿನ ಕಾಕತೀಯರೂ, ದ್ವಾರಸಮುದ್ರದ ಹೊಯ್ಸಳರೂ ಕೆಲವು ಕಾಲ ಅವರನ್ನು ಪ್ರತಿಭಟಿಸಿದರು. ಆದರೆ ಅವರಲ್ಲಿ ಒಗ್ಗಟ್ಟಿರಲಿಲ್ಲವಾದುದರಿಂದ ತುರುಕರ ಖಡ್ಗಕ್ಕೆ ಮಣಿಯಬೇಕಾಯಿತು. ಸಮಯವನ್ನು ಕಾದುಕೊಂಡಿದ್ದ ಕೆಲವರು ಪಟಿಂಗರು ಹಲವಾರು ಹಳ್ಳಿಗಳನ್ನು ತಮ್ಮ ಅಧೀನಪಡಿಸಿಕೊಂಡು ಪ್ರಜೆಗಳಿಗೆ ಕಂಟಕಪ್ರಾಯರಾಗಿ ಸ್ವತಂತ್ರರಾಗಿ ಮೆರೆಯುತ್ತಿದ್ದರು. ಎಲ್ಲೆಲ್ಲೂ ಅಶಾಂತಿ ಕಳವಳ ಕ್ಷಾಮಡಾಮರಗಳು ತಾಂಡವವಾಡುತ್ತಿದ್ದುವು. ಅಲ್ಲಲ್ಲಿ ಈ ಹಿಂದೂ ಧರ್ಮದ ಉದ್ಧಾರಕ್ಕಾಗಿ, ಜನಾಂಗದ ಸಂಘಟನೆಗಾಗಿ ಒಬ್ಬಿಬ್ಬರು ಯುಗಪುರುಷರು ನಿರಂತರ ಪ್ರಯತ್ನದಲ್ಲಿ ತೊಡಗಿಗಿದ್ದರು. ರಣಭೈರೇಗೌಡನೂ ಅವನ ತಮ್ಮಂದಿರೂ ಅವರಿಗೆ ಬೆಂಬಲವಾಗಿ ನಿಂತರು. ಇವರ ಸದ್ಗುಣಗಳನ್ನು ಕರ್ಣಪರಂಪರೆಯಿಂದ ಕೇಳಿದ ಜನರು ತಾವಾಗಿಯೇ ಇವರಲ್ಲಿಗೆ ಬರಲಾರಂಭಿಸಿದರು. ಬಂದವರನ್ನು ಸಮಾಧಾನಗೊಳಿಸಿ ಅವರ ಹೃದಯವನ್ನು ಆವರಿಸಿದ್ದ ಭೀತಿ ನಿರಾಶೆ ಕಳವಳಗಳನ್ನು ಹೋಗಲಾಡಿಸಿ ಅವರ ಜೀವನಕ್ಕೆ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಿದ್ದರು. ಪ್ರತಿನಿತ್ಯ ಸುತ್ತಮುತ್ತಣ ಪ್ರದೇಶಗಳನ್ನು ಸುತ್ತಿ, ಅಲ್ಲಿಯ ಜನರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿದರು. ಕಡೆಗೆ ಎಲ್ಲರೂ ಇವರ ಒಡೆತನವನ್ನು ಸ್ವೀಕರಿಸಿದರು. ಸಾಹಸಪ್ರಿಯರಾದ ಗೌಡನ ತಮ್ಮಂದಿರು ತಮ್ಮ ತಮ್ಮ ಮಕ್ಕಳೊಡನೆ ಬೇರೆ ಬೇರೆ ಊರುಗಳಲ್ಲಿ ನೆಲಸಿ ರಾಜ್ಯಕಟ್ಟಲನುವಾದರು. ಅಷ್ಟರಲ್ಲಿ ಭೈರವನೇ ತನ್ನ ಪತ್ನಿ

ತನ್ನ ಸುಖ, ತನ್ನ ಸರ್ವಸ್ವವೆಂದು ನಂಬಿಕೊಂಡಿದ್ದ ದೊಡ್ಡಮ್ಮ ಶಿವಸಾಯುಜ್ಯವನ್ನು ಹೊಂದಿದಳು, ಗೌಡರ ಕುಲದೇವತೆ ಯಾದಳು. ಗೌಡ ಅವಳಿಗಾಗಿ ಆವತಿಯಲ್ಲಿ ಒಂದು ಗುಡಿಯನ್ನು ಕಟ್ಟಿಸಿದನು. ರಣಭೈರೇಗೌಡನ ಮರಣಾನಂತರ ಅವನ ಮಗ ಜಯಗೌಡ ಇತಿಹಾಸ ಪ್ರಸಿದ್ಧವಾದ ಯಲಹಂಕಕ್ಕೆ ಬಂದು ನೆಲಸಿ, ವಿಜಯನಗರದ ಅರಸುಗಳಿಂದ ಮಾನ್ಯನಾದನು; ಅವನ ಅನಂತರ ಗಿಡ್ಡೇಗೌಡ ಹದಿನಾಲ್ಕು ವರ್ಷಗಳ ಕಾಲ ರಾಜ್ಯಭಾರ ಮಾಡಿ ತನ್ನ ಮಗ ಕೆಂಪನಂಜೇಗೌಡನಿಗೆ ರಾಜ್ಯವನ್ನು ವಹಿಸಿ ತೀರಿಕೊಂಡನು.

ಕೆಂಪನಂಜೇಗೌಡ ವಿಜಯನಗರದ ಅರಸುಗಳಿಗೆ ಅಧೀನ ನಾಗಿದ್ದುಕೊಂಡೇ ಯಲಹಂಕನಾಡನ್ನು ವಿಸ್ತರಿಸಿದನು. ಸುಮಾರು ಇಪ್ಪತ್ತು ಸಾವಿರ ಹೊನ್ನು ಉತ್ಪತ್ತಿಯಾಗುವಷ್ಟು ದೊಡ್ಡ ರಾಜ್ಯ ವನ್ನು ಅವನು ಧರ್ಮದಿಂದ ಸಂಪಾದಿಸಿದನೇ ಹೊರತು ಕತ್ತಿ ಯಿಂದಲ್ಲ. ಅವನ ಹತ್ತಿರ ದೊಡ್ಡ ಪಡೆಯೂ ಇರಲಿಲ್ಲ. ತುಂಟ ರಾದ ಪಾಳೆಗಾರರ ಹಾವಳಿಯನ್ನು ತಡೆಯದೆ ಅನೇಕ ಜನರು ಇವನನ್ನು ಮರೆಹೊಕ್ಕರು. ಅರಿರಾಯರ ಕಾಟವಿಲ್ಲದೆ ತಮ್ಮ ಜಮೀನುಗಳನ್ನು ನಿರಾತಂಕವಾಗಿ ಸಾಗುವಳಿ ಮಾಡುವುದಕ್ಕೂ, ಉತ್ಪತ್ತಿಯಾದ ಧಾನ್ಯವನ್ನು ನಿರ್ಭಯವಾಗಿ ಅನುಭವಿಸುವು ದಕ್ಕೂ ಸ್ವಲ್ಪ ಶಾಂತಿ ಸಿಕ್ಕಿದರೆ ಜನರು ಸಂತುಷ್ಟರಾಗುತ್ತಿದ್ದರು. ಕೆಂಪನಂಜೇಗೌಡ ಎಂದೂ ದುರುದುಂಬಿತನದಿಂದ ವರ್ತಿಸಿದವ ನಲ್ಲ. ಪರರಾಯರ ಆಸ್ತಿಪಾಸ್ತಿಗಳನ್ನು ಆಕ್ರಮಿಸಿಕೊಳ್ಳಬೇಕೆಂಬ ಹೊಟ್ಟೆಬಾಕತನವೂ ಅವನಿಗಿರಲಿಲ್ಲ. ಆದರೆ ಏನೂ ಅರಿಯದ ರೈತರಿಗೆ ಇತರರು ಅನ್ಯಾಯವಾಗಿ ಕೊಡುತ್ತಿದ್ದ ಕಾಟಗಳನ್ನು ಸಹಿಸುತ್ತಿರಲಿಲ್ಲ. ತನ್ನ ಪ್ರಾಣವನ್ನಾದರೂ ಬಲಿಗೊಟ್ಟು ದುಷ್ಟ

ರನ್ನು ತಡೆಯಬೇಕೆಂಬುದೇ ಅವನ ಹಂಬಲವಾಗಿತ್ತು. ತನ್ನ ಆಪ್ತಮಿತ್ರನೂ, ಮುಖ್ಯಮಂತ್ರಿಯೂ ಆದ ಶೇಷಭಟ್ಟನೊಡಗೂಡಿ ಇರುಳಲ್ಲಿ ಊರು ಊರುಗಳನ್ನು ಅಲೆದು ಜನರ ನೆಮ್ಮದಿಯನ್ನು ಕಾಪಾಡುತ್ತಿದ್ದನು. ಎಲ್ಲೆಲ್ಲೂ ದೇವಾಲಯ ತಟಾಕಗಳನ್ನೂ, ವ್ಯವಸಾಯಕ್ಕನುಕೂಲವಾಗುವಂತೆ ವಿಸ್ತಾರವಾದ ಕೆರೆಗಳನ್ನೂ ಕಟ್ಟಿಸಿದನು. ಹೀಗೆ ಸುಮಾರು ಮೂವತ್ತು ವರ್ಷಗಳಕಾಲ ತನಗನುರೂಪಳೂ ಅನುಕೂಲೆಯೂ ಆದ ಲಿಂಗಮಾಂಬಾ ಪತ್ನಿಯೊಡನೆ ಸುಖವಾಗಿ ರಾಜ್ಯವಾಳುತ್ತಿದ್ದನು.

೧

ಬೆಳೆಯ ಸಿರಿ ಮೊಳೆಯಲ್ಲಿಯೇ

ಶರತ್ಕಾಲದ ಸುಪ್ರಭಾತ. ಭಗವಾನ್ ಸೂರ್ಯದೇವನು ಉದಯಗಿರಿಯನ್ನಡರಿ ಅರಮನೆಯ ಉದ್ಯಾನವನದ ಹೂತಳಿರುಗಳಿಗೆ ಕಚಗುಳಿಯಿಟ್ಟು ನಗಿಸುತ್ತಿದ್ದನು. ಅರುಣ ಕಿರಣಗಳ ಕೆನ್ನೀರಿನಲ್ಲಿ ಮಿಂದ ಹೂಗಳು ಮಗಮಗಿಸುತ್ತಿದ್ದುವು. ತಂಗಾಳಿಯ ಮಧುರ ಸ್ನೇಹಕ್ಕೆ ತಲೆಬಾಗಿ ಹೂಗಳು ತಮ್ಮ ಕಂಪನ್ನು ಕಾಣಿಕೆಯಾಗಿ ಎರಚುತ್ತಿದ್ದುವು. ಅಲ್ಲಿಯೇ ಕೊಳವಲ್ಲೊಂದು ಹಂಸ ತನ್ನ ಮರಿಗಳನ್ನು ಆಡಿಸುತ್ತಿತ್ತು. ಆ ಕೊಳದ ಪಕ್ಕದಲ್ಲಿ ಜಿಂಕೆಯೊಂದು ತನ್ನ ಮರಿಗೆ ಹಾಲುಕುಡಿಸುತ್ತಾ, ಆಡಿಸುತ್ತಾ ನಲಿಯುತ್ತಿತ್ತು. ಆಕಾಶದಲ್ಲಿ ಬಿಳಿಯ ಮೋಡಗಳು ಚಿತ್ರವಿಚಿತ್ರವಾದ ಆಕಾರಗಳನ್ನು ತಾಳಿ ಒಂದನ್ನೊಂದು ಅಟ್ಟುತ್ತಾ ವಿಹರಿಸುತ್ತಿದ್ದುವು. ಹಕ್ಕಿಗಳು ಸುಮಧುರವಾಗಿ ಗಾನಗೈಯುತ್ತಾ ಜೊತೆ

ಜೊತೆಯಾಗಿ, ಹಿಂಡುಹಿಂಡಾಗಿ ಹಾರಿಹೋಗುತ್ತಿದ್ದುವು. ಅರ ಮನೆಯ ಉತ್ತರದಕ್ಷಿಣ ದ್ವಾರಗಳಲ್ಲಿದ್ದ ಭೈರವಾಲಯ ಮತ್ತು ಕೆಂಪಮ್ಮನ ಗುಡಿಗಳಿಂದ ಎಂದಿನಂತೆ ಮಂಗಳರವ ಕೇಳಿ ಬಂದಿತು. ರಾಜರಾಣಿಯರು ಅರಮನೆಯ ಪ್ರಾಸಾದದಲ್ಲಿ ಕುಳಿತು, ಪ್ರಭಾತದ ರಮ್ಯದೃಶ್ಯಗಳನ್ನು ನೋಡಿ ತಣಿಯುತ್ತ ಪ್ರಸಾದ ನಿರೀಕ್ಷಣೆಯಲ್ಲಿದ್ದರು. ಅಷ್ಟರಲ್ಲಿಯೇ ಮಡಿಯಿಂದ ಮುಚ್ಚಿದ ಬೆಳ್ಳಿಯ ತಟ್ಟೆಯಲ್ಲಿ ಪೂಜಾರಿ ಪ್ರಸಾದವನ್ನು ತೆಗೆದುಕೊಂಡು ಬಂದನು. ಅವನ ಹಿಂದೆಯೇ ಮೂರುವರ್ಷದ ಅವನ ಗಂಡು ಮಗುವೂ ಓಡಿಬಂದಿತು. ತಂದೆ ಮಗುವನ್ನು ಗದರಿಸತೊಡಗಿ ದನು. ರಾಣಿಯ ದೃಷ್ಟಿ ಮಗುವಿನ ಕಡೆಗೆ ಒಲೆಯಿತು. ಆ ಮುದ್ದನನ್ನು ನೋಡಿದ ಕೂಡಲೇ ಆಕೆಯ ಮುಖದಮೇಲೆ ಗಹನ ವಾದ ಚಿಂತೆ ಸುಳಿದಾಡಿದಂತಾಯಿತು. ಕೂಡಲೆ ಚಿಂತೆಯನ್ನು ಓಸರಿಸಿ ಮಗುವನ್ನು ಪಕ್ಕದಲ್ಲಿ ನಿಲ್ಲಿಸಿಕೊಂಡು ಆತನ ಗಲ್ಲವನ್ನು ನೇವರಿಸಿ ಮುದ್ದಾಡಿದಳು.

ಪ್ರಸಾದವನ್ನು ಸ್ವೀಕರಿಸಿದನಂತರ ರಾಜ ನಿತ್ಯಕ್ರಮದಂತೆ ರಾಜಕೀಯ ವ್ಯವಹಾರಗಳನ್ನು ಪರ್ಯಾಲೋಚಿಸಿ ಹೊಲಗದ್ದೆ ಗಳನ್ನು ನೋಡಲು ಹೊರಟನು. ರಾಣಿ ಅಂತಃಪುರವನ್ನು ಸೇರಿ ದಳು. ಅಂದಿನ ಮಧ್ಯಾಹ್ನ ಅವಳಿಗೆ ಊಟ ಬೇಡವಾಯಿತು. ಹತ್ತಿರ ಊಳಿಗದವರು ಬೇಡವಾದರು. ಉದ್ಯಾನದಲ್ಲಿ ಮರಿಗೆ ಹಾಲುಕೊಡುತ್ತಿದ್ದ ಜಿಂಕೆಯನ್ನೂ, ಕೊಳದಲ್ಲಿ ಮರಿಗಳನ್ನಾಡಿಸು ತ್ತಿದ್ದ ಹಂಸವನ್ನೂ ನೆನೆದುಕೊಂಡಳು. ಪೂಜಾರಿಯ ಮಗನ ಸುಂದರವಾದ ವದನ ಆಕೆಯ ನೆನಹುಗಣ್ಣಿನ ಮುಂದೆ ನಿಲ್ಲುತ್ತಿತ್ತು. ಆ ಜಿಂಕೆ, ಆ ಹಂಸ, ಆ ಪೂಜಾರಿ, ಅವರಿಗಿರುವ ಭಾಗ್ಯ ತನಗಿಲ್ಲದೆ ಹೋಯಿತೆ? ಪ್ರಪಂಚದಲ್ಲಿ ಮಕ್ಕಳಿಗಿಂತ ಬೇರೆ ಭಾಗ್ಯ ಯಾವು

ದಿದೆ? ಎಂದು ಪರಿಪರಿಯಾಗಿ ದುಃಖಿಸುತ್ತಿದ್ದಳು. ರಾಜಕಾರ್ಯ ವನ್ನು ಮುಗಿಸಿಕೊಂಡು ಅರಮನೆಗೆ ಹಿಂತಿರುಗಿದ ಪತಿಗೆ ಪತ್ನಿಯ ಪರಿಸ್ಥಿತಿ ಭಯಚಕಿತರಾದ ಸೇವಕಿಯರಿಂದ ತಿಳಿಯಿತು. ರಾಜ ನೆಟ್ಟನೆ ಅಂತಃಪುರಕ್ಕೆ ನಡೆದನು. ಒತ್ತಾಯದಿಂದ ಸತಿಯ ಮನೋಭೀಷ್ಟವನ್ನು ಹೊರಪಡಿಸಿದನು. ಅದನ್ನು ಕೇಳಿ ಅವನ ಎದೆಯೂ ಕಲಕಿತು. ಅಂದಿನವರೆಗೆ ಮೂವತ್ತು ವರ್ಷಗಳ ದೀರ್ಘವಾದ ರಾಜ್ಯಭಾರವನ್ನು ನಿರ್ವಹಿಸಿದ್ದನು. ಎಂತಹ ವಿಷಮ ಪರಿಸ್ಥಿತಿಯಲ್ಲಿಯ ಆತನು ಚಿಂತೆಗೊಳಗಾಗಿರಲಿಲ್ಲ. ಪ್ರಜೆಗಳೇ ತನ್ನ ಮಕ್ಕಳೆಂದು ಭಾವಿಸಿದ್ದ ಅವನಿಗೆ ಮಕ್ಕಳ ವ್ಯಾಮೋಹವೇ ಸುಳಿದಿರಲಿಲ್ಲ. ಅಂದು ತಾನು ವೃದ್ಧಾಪ್ಯದ ಕಡೆಗೆ ಕಾಲಿಡು ತ್ತಿದ್ದೇನೆಂದು ಅರಿವಾಯಿತು. ತನ್ನ ವಂಶ ತನ್ನಲ್ಲಿಗೆ ಮುರುಟ ಹೋಗುವುದೇ ಎಂದು ಚಿಂತಿಸಿದನು. ಹೃದಯದಲ್ಲಿ ಚಿಂತೆಯ ಚಿತೆ ಉರಿಯುತ್ತಿದ್ದರೂ ಅದನ್ನು ಮುಖದಲ್ಲಿ ತೋರ್ಪಡಿಸಿಕೊಳ್ಳದೆ ಹೆಂಡತಿಯನ್ನು ಸಮಾಧಾನಪಡಿಸಲಸುವಾದನು. ತಮ್ಮ ಮನೆ ದೇವರಾದ ಭೈರವೇಶ್ವರನನ್ನೂ, ಕುಲದೇವತೆಯಾದ ಕೆಂಪಮ್ಮ ನನ್ನೂ ಆರಾಧಿಸಿದರೆ ತಮ್ಮ ಇಷ್ಟಾರ್ಥ ಸಿದ್ಧಿಸದೆ ಇರಲಾರದೆಂದು ಹೇಳಿದನು.

ಅಂದು ಮೊದಲುಗೊಂಡು ರಾಣಿ ನಿತ್ಯವೂ ಭೈರವೇಶ್ವರನ ಸನ್ನಿಧಿಯಲ್ಲಿ, ಕೆಂಪಮ್ಮನ ಗುಡಿಯಲ್ಲಿ ಕಾಲ ಕಳೆಯಲಾರಂಭಿಸಿ ದಳು. ರಾಮಾಯಣ ಭಾರತ ಭಾಗವತ ಪುರಾಣಗಳನ್ನು ಓದಿಸಿ ಕೇಳಿ ಮನಸ್ಸಿನ ಸೆಳೆತವನ್ನು ಹತೋಟಿಗೆ ತಂದುಕೊಂಡಳು. ಬಡ ಬಗ್ಗರಿಗೆ ನಿತ್ಯವೂ ದೇವಸ್ಥಾನದ ಮುಂದಣ ಅರವಟ್ಟಿಗೆಯಲ್ಲಿ ಊಟ ಹಾಕುವ ಏರ್ಪಾಡು ಮಾಡಿ ತಾನೇ ಮೇಲ್ವಿಚಾರಣೆಗೆ ನಿಂತಳು. ಕಾರ್ತಿಕಮಾಸದಲ್ಲಿ ಪ್ರತಿ ಸೋಮವಾರವೂ ಆವತಿಗೆ

ಹೋಗಿ ಕೆಂಪಮ್ಮನನ್ನು ಪೂಜಿಸಿಕೊಂಡು ಬರುತ್ತಿದ್ದಳು. ತಾನು ಕಂಡಿದ್ದ ಕೇಳಿದ್ದ ತೀರ್ಥಕ್ಷೇತ್ರಗಳನ್ನೆಲ್ಲಾ ಹಸಿವೆನ್ನದೆ ಬಳಲಿಕೆಯೆನ್ನದೆ ತಿರುಗಿಬಂದಳು. ರಾಜನಾದರೋ ಎದೆಯ ನೋವನ್ನು ನುಂಗಿಕೊಂಡು ಪ್ರಜೆಗಳೇ ತನ್ನ ಸರ್ವಸ್ವವೆಂದು ಭಾವಿಸಿ ಅವರ ಕಲ್ಯಾಣವನ್ನು ಸಾಧಿಸುವುದರಲ್ಲಿ ನಿರತನಾದನು.

ಮಹತ್ಕಾರ್ಯಕ್ಕೆ ಮಹತ್ಕಾರಣವಿರಲೇಬೇಕು. ಸೃಷ್ಟಿಗೆ ತಪಶ್ಶಕ್ತಿಯೇ ಮೂಲ; ಆ ತಪಶ್ಶಕ್ತಿಗೆ ಮಣಿಯದ ಶಕ್ತಿಯಿಲ್ಲ, ಸಾಧ್ಯವಾಗದ ಕಾರ್ಯವಿಲ್ಲ. ಹಣ್ಣಿನ ತೂಕ ಗಾತ್ರ ರುಚಿಗಳು ತಾಯಿ ಗಿಡದ ಅಂತಶ್ಶಕ್ತಿಯನ್ನವಲಂಬಿಸಿರುತ್ತವೆ. ಹಾಗೆಯೇ ಮಾನವನ ಪ್ರತಿಯೊಂದು ಕೃತಿಯೂ ಆತನ ಶಕ್ತಿಯ ಪ್ರಮಾಣಕ್ಕನುಗುಣವಾಗಿರುತ್ತದೆ. ಲಿಂಗಮಾಂಬೆಯ ತಪಸ್ಸು ಪರಿಪೂರ್ಣವಾಗಿ ಅವಳ ಬಯಕೆ ಈಡೇರುವ ಕಾಲ ಸಮೀಪಿಸಿತು. ಕೆಲವು ತಿಂಗಳುಗಳಲ್ಲಿಯೇ ಆಕೆ ಗಂಡುಮಗುವನ್ನು ಹೆತ್ತಳು. ಗೌಡನ ಸಂತೋಷಕ್ಕೆ ಪಾರವೇ ಇರಲಿಲ್ಲ. ಮಗು ಹುಟ್ಟಿದ ದಿನ ಯಾಚಕರು ನಲಿದರು. ಬ್ರಾಹ್ಮಣರು ಸಂತುಷ್ಟರಾದರು, ಬಡವರು ತೃಪ್ತಿ ಹೊಂದಿದರು. ನಾಡಿಗೆ ನಾಡೇ ಸಂತೋಷಸಾಗರದಲ್ಲಿ ಓಲಾಡಿತು. ಶುಭದಿನ ಶುಭಮುಹೂರ್ತದಲ್ಲಿ ಮಗುವಿಗೆ ನಾಮಕರಣವಾಯಿತು. ಕುಲದೇವತೆ ಕೆಂಪಮ್ಮನ ಹರಕೆಯಿಂದ ಹುಟ್ಟಿದ ಅವನಿಗೆ ಕೆಂಪೇಗೌಡನೆಂದೇ ಹೆಸರು ಪ್ರಸಿದ್ಧವಾಯಿತು. ಕುಲಪುರೋಹಿತರಾದ ಮಾಧವಭಟ್ಟರು ಆ ಮಗುವಿನ ಅಂಗರೇಖೆಗಳನ್ನೂ, ಆತನ ಜಾತಕವನ್ನೂ ಪರೀಕ್ಷಿಸಿ, ಅವನು ಹಿರಿಯ ದೊರೆಯಾಗಿ ಅಪಾರವೂ ಶಾಶ್ವತವೂ ಆದ ಕೀರ್ತಿಯನ್ನು ಗಳಿಸುವನೆಂದು ಭವಿಷ್ಯ ನುಡಿದರು.

ಕೆಂಪೇಗೌಡನು ಶುಕ್ಲಪಕ್ಷದ ಚಂದ್ರನಂತೆ, ಮುದ್ದಿನ

ಮುದ್ದೆಯಂತೆ ಬೆಳೆಯುತ್ತಿದ್ದನು. ಆತನ ಬಾಲಚೇಷ್ಟೆಗಳನ್ನು ಕಂಡು ತಂದೆತಾಯಿಯರು ಹಿಗ್ಗಿದರು. ತಾಯಿ ಮಗನನ್ನು ಒಂದು ಕ್ಷಣವಾದರೂ ಬಿಟ್ಟಿರುತ್ತಿರಲಿಲ್ಲ. ದಾದಿಯ ವಶಕ್ಕೆ ಅವನನ್ನು ಬಿಡುತ್ತಿರಲಿಲ್ಲ. ಅವನಿಗೆ ತಾನೇ ಸ್ನಾನಮಾಡಿಸ ಬೇಕು, ಮಡಿ ತೊಡಿಸಬೇಕು; ತಾನೇ ತಿಂಡಿಯೂಟಗಳನ್ನು ಕೊಟ್ಟು ಉಪಚರಿಸಬೇಕು. ಅಷ್ಟೇ ಅಲ್ಲ; ಅವನು ಸದಾ ತನ್ನ ಕಣ್ಮುಂದೆಯೇ ಆಡಬೇಕೆಂಬುದೇ ಅವಳ ಇಷ್ಟವಾಗಿತ್ತು. ಆದರೆ ಮಗುವಿಗೆ ತಾಯಿಯ ತೊಡೆ ತೊಟ್ಟಿಲಲ್ಲಿ ಯಾವಾಗಲೂ ಕುಳಿತಿರಲು ಇಷ್ಟವಿರಲಿಲ್ಲ. ಹೇಗಾದರೂ ನುಸುಳಿಕೊಂಡು ಓಡಿ ಹೋಗಿ ಅರಮನೆಯ ಮುಂದಣ ಬಯಲಿನಲ್ಲಿ, ಉದ್ಯಾನವನದಲ್ಲಿ ಆಟಪಾಟಗಳಲ್ಲಿ ತಲ್ಲೀನನಾಗುತ್ತಿದ್ದನು. ಉದ್ಯಾನವನದ ಜಿಂಕೆ ಮತ್ತು ಪಕ್ಷಿಗಳೇ ಅವನ ಸಂಗಾತಿಗಳು. ಜಿಂಕೆಯ ಮರಿಗಳನ್ನು ಹಿಡಿದು ಅವುಗಳ ಬಾಯಿಗೆ ಹಸುರುಹುಲ್ಲು ತುರುಕುವುದು, ಗೂಡು ಗಳಲ್ಲಿದ್ದ ಹಕ್ಕಿಗಳನ್ನು ಹೊರಗೆ ಬಿಟ್ಟು ಹಾರಿಸುವುದು ಅವನ ನಿತ್ಯದ ಕೆಲಸಗಳಾಗಿದ್ದುವು. ಒಮ್ಮೊಮ್ಮೆ ಗೋಶಾಲೆಗೆ ಹೋಗಿ ಕರು ಗಳೊಡನೆ ಸರಸವಾಡುತ್ತಿದ್ದನು. ದಿನಗಳು ಕಳೆದಂತೆಲ್ಲಾ ಮಗು ತಾಯಿಯಿಂದ ದೂರವಾಗತೊಡಗಿದನು. ತಾಯಿ ದೂರದಿಂದಲೇ ಮಗನನ್ನು ನೋಡಿ ಹಿಗ್ಗುತ್ತಿದ್ದಳು.

ತಂದೆ ಮಗನ ಆಟಪಾಟಗಳನ್ನು ನೋಡಿ ಜೊತೆ ಹುಡುಗ ರಿದ್ದರೆ ಮೇಲೆಂದು ಯೋಚಿಸಿ, ಪೂಜಾರಿಯ ಆರುವರ್ಷದ ಮಗ ನನ್ನೂ, ತನ್ನ ಮಗನ ಓರಗೆಯ ಮತ್ತಿಬ್ಬರು ಮಕ್ಕಳನ್ನೂ ಅರಮನೆಯಲ್ಲಿಯೇ ಇರಿಸಿಕೊಂಡನು. ಜೊತೆಗಾರರು ದೊರಕಿದ ನಂತರ ಕೆಂಪೇಗೌಡನ ಚಟುವಟಿಕೆ ಉತ್ಸಾಹಗಳು ಮತ್ತಷ್ಟು ಅಧಿಕವಾದುವು. ಹಗಲೆಲ್ಲಾ ಉದ್ಯಾನವನವನ್ನು ಬಿಟ್ಟು ಮನೆಗೆ

ಬರುತ್ತಿರಲಿಲ್ಲ. ಕುಣಿತ, ನೆಗೆತ, ಮರ ಹತ್ತುವುದು ಬೀಳುವುದು ಏಳುವುದು ಇವೇ ಅವರ ನಿತ್ಯಕರ್ಮಗಳಾದುವು.

ಕ್ರಮೇಣ ಬಾಲಕ ಕೆಂಪೇಗೌಡನ ಆಟಪಾಟಗಳಿಗೆ ಅರ ಮನೆಯ ಮುಂದಿನ ಬಯಲು ಸಾಲದಾಯಿತು. ಅವನು ತನ್ನ ಜೊತೆಯವರೊಡಗೂಡಿ ಊರಮುಂದಣ ಕೆರೆಯ ತೋಪಿನಲ್ಲಿ ಕಾಲ ಕಳೆಯಲಾರಂಭಿಸಿದನು. ಅಲ್ಲಿಗೆ ಆ ಊರಿನ ಹುಡುಗ ರೆಲ್ಲರೂ ಬರುತ್ತಿದ್ದರು. ಮಕ್ಕಳ ಶೀಲ ನಿಷ್ಕಲ್ಮಷವಾದುದು, ಅವರ ಸ್ವಭಾವ ನಿಷ್ಕಳಂಕವಾದುದು. ವಯಸ್ಸು ಬೆಳೆದಂತೆಲ್ಲ ಸಮಾಜದ ಪ್ರಭಾವ ಹೆಚ್ಚಿದಂತೆಲ್ಲಾ, ಅವರ ಮುಗ್ಧತೆ ಮಾಯ ವಾಗುತ್ತದೆ. ಕೆಂಪೇಗೌಡ ತಾನು ದೊರೆಯ ಮಗನೆಂದು ಆಡಂ ಬರವಿಲ್ಲದೆ, ಬಡವಬಲ್ಲಿದನೆಂಬ ಭೇದ ಭಾವವನ್ನು ತೋರದೆ ಎಲ್ಲ ರೊಡನೆಯೂ ಸಲಗೆಯಿಂದ ವರ್ತಿಸುತ್ತಿದ್ದನು. ಅವರೊಡನೆ ತಾನೂ ಕಣ್ಣುಮುಚ್ಚಾಲೆ ಮರಕೋತಿಯಾಟ ಲಗ್ಗೆ ಮೊದಲಾದ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದನು. ಕುದುರೆಯಾಟವಾಡುವಾಗ ತನ್ನನ್ನು ಇತರ ಮಕ್ಕಳು ಹೊತ್ತಂತೆ ತಾನೂ ಅವರನ್ನು ಬೆನ್ನ ಮೇಲೆ ಕೂರಿಸಿಕೊಂಡು ಹೊರುತ್ತಿದ್ದನು. ಚೆಂಡಾಟದಲ್ಲಿ ಸೋತ ವನು ಗೆದ್ದವನನ್ನು ಹೊತ್ತು ಒಂಟಿಕಾಲಿನಲ್ಲಿ ಕುಪ್ಪಳಿಸುವ ಶಿಕ್ಷೆ ಯನ್ನು ಅನುಭವಿಸಬೇಕಾಗುತ್ತಿತ್ತು. ಒಮ್ಮೊಮ್ಮೆ ರಾಜಕುಮಾರ ಸೋತಾಗ ಅವನ ಪಾಲಿನ ಶಿಕ್ಷೆಯನ್ನು ಅನುಭವಿಸಲು ಅನೇಕ ಹುಡುಗರು ನಾನು ತಾನೆಂದು ಮುನ್ನುಗ್ಗುತ್ತಿದ್ದರು. ಆದರೆ ಅವರನ್ನು ಹಿಂದಕ್ಕೆ ತಳ್ಳಿ ತಾನೇ ಆ ಶಿಕ್ಷೆಯನ್ನು ಅನುಭವಿಸಲು ಸಿದ್ಧನಾಗುತ್ತಿದ್ದನು. ಅವನ ವಿನಯ ಗಾಂಭೀರ್ಯಗಳಿಗೆ ಮುಗ್ಧ ರಾದ ಇತರ ಮಕ್ಕಳು ಅವನಿಗೆ ವಿಶೇಷವಾಗಿ ಗೌರವನ್ನು ತೋರಿಸುತ್ತಿದ್ದರು. ಆ ಮಕ್ಕಳಲ್ಲಿ ಆಗಾಗ್ಗೆ ತಲೆದೋರುತ್ತಿದ್ದ

ವ್ಯಾಜ್ಯಗಳನ್ನು ಇವನೇ ನಿವಾರಿಸುತ್ತಿದ್ದನು. ಆಟವಾಡುವಾಗ ಮಕ್ಕಳಿಗೆ ಏಟು ಬಡಿದು ನೋವುಂಟಾದರೆ ತಾನೇ ಅವರನ್ನು ಕರೆದುಕೊಂಡು ಹೋಗಿ ಅವರವರ ಮನೆಗಳಿಗೆ ಬಿಡುತ್ತಿದ್ದನು. ಆಗಾಗ್ಗೆ ಮನೆಯಿಂದ ತಿಂಡಿಯನ್ನು ತೆಗೆದುಕೊಂಡುಹೋಗಿ ಬೀದಿಯ ಮಕ್ಕಳಿಗೆಲ್ಲಾ ಹಂಚುವನು. ಅವನ ಸದ್ಗುಣಗಳನ್ನು ಮೆಚ್ಚಿದ ಪಟ್ಟಣಿಗರು ಅವನನ್ನು "ಚಿಕ್ಕರಾಯ," "ಕೆಂಪರಾಯ" ಎಂದು ಕರೆಯಲಾರಂಭಿಸಿದರು. ಆದರೆ ಮಗನ ಈ ವರ್ತನೆ ತಾಯಿ ಲಿಂಗಮಾಂಬೆಗೆ ಸರಿಬೀಳುತ್ತಿರಲಿಲ್ಲ. ತನ್ನ ಕಣ್ಮುಂದೆ ಅವನು ಆಡುತ್ತಿರಲಿಲ್ಲವೆಂಬುದು ಒಂದು ಕಾರಣ. ಜತೆಗೆ ಎಲ್ಲಿ ತನ್ನ ಮಗ ಸಾಮಾನ್ಯರ ಜೊತೆಯಲ್ಲಿ ಸೇರಿ ಸಾಮಾನ್ಯನಾಗುತ್ತಾನೋ ಎಂಬ ಹೆದರಿಕೆ. ಬೇಡವೆಂದು ಎಷ್ಟು ಹೇಳಿದರೂ ಅವನು ಕೇಳುತ್ತಿರಲಿಲ್ಲ—"ಅವರೇನು ನನ್ನಂತೆಯೇ ಮಕ್ಕಳಲ್ಲವೆ, ಅಮ್ಮ. ಅವರ ಜೊತೆಯಲ್ಲಿ ನಾನು ಏಕೆ ಆಡಬಾರದು," ಎಂದು ತಾಯಿಯನ್ನು ಒಮ್ಮೊಮ್ಮೆ ಕೇಳುತ್ತಿದ್ದನು. ತಿಂಡಿ ಕೊಡುವುದಿಲ್ಲವೆಂಬ ಹೆದರಿಕೆಗೂ ಜಗ್ಗುತ್ತಿರಲಿಲ್ಲ. ಆದರೆ ಕತೆ ಹೇಳುತ್ತೇನೆಂದು ಕರೆದಾಗ ಸದ್ದಿಲ್ಲದೆ ಓಡಿಹೋಗಿ ತಾಯಿಯ ತೊಡೆಯ ಮೇಲೆ ಮಂತ್ರಮುಗ್ಧನಾದವನಂತೆ ಕುಳಿತುಬಿಡುತ್ತಿದ್ದನು. ವೀರಾಂಜನೇಯ, ವೀರ ಅಭಿಮನ್ಯು ಮೊದಲಾದ ಕತೆಗಳೆಂದರೆ ಅವನಿಗೆ ಬಹಳ ಇಷ್ಟ. ಕತೆ ಕೇಳುತ್ತ ಕೇಳುತ್ತ ಒಮ್ಮೊಮ್ಮೆ ಅವನ ಮುಖದ ಕಳೆ ಏರುತ್ತಿತ್ತು, ಒಮ್ಮೊಮ್ಮೆ ಕುಂದುತ್ತಿತ್ತು; ಒಮ್ಮೊಮ್ಮೆ ಅವನ ಕಣ್ಣುಗಳು ಅರಳುತ್ತಿದ್ದುವು. ತನ್ನ ಕುಲದೇವತೆ ಕೆಂಪಮ್ಮನ ಕತೆ ಕೇಳಿದಾಗಲಂತೂ ಪುಳಕಿತನಾಗುತ್ತಿದ್ದನು. ಎಷ್ಟು ಸಾರಿ ಕೇಳಿದರೂ ಅವನಿಗೆ ತಣಿಯದು. ಆಗಾಗ್ಗೆ ಕೆಂಪಮ್ಮನ ಗುಡಿಗೆ ಹೋಗಿ ಅಲ್ಲಿಯೇ ಕುಳಿತುಬಿಡುತ್ತಿದ್ದನು.

ಕೆಂಪರಾಯನಿಗೆ ಐದು ವರ್ಷಗಳು ತುಂಬಿ ಆರನೆಯ ವರ್ಷ ಕಾಲಿಟ್ಟಿತು. ಆಗಲೇ ಅವನ ಅಕ್ಷರಾಭ್ಯಾಸವೂ ಆರಂಭ ವಾಯಿತು. ಮಗನಿಗೂ, ಅವನ ಓರಗೆಯ ಇಬ್ಬರು ಗೆಳೆಯ ರಿಗೂ ದೊರೆ ಅರಮನೆಯಲ್ಲಿಯೇ ಒಂದು ಶಾಲೆಯನ್ನೇರ್ಪಡಿ ಸಿದನು. ಆದರೆ ಕೆಲವು ದಿನಗಳಲ್ಲಿ ಆ ಕೇರಿಯ ಮಕ್ಕಳನ್ನೆಲ್ಲ ಕೂಡಿಕೊಂಡನು. ಉಪಾಧ್ಯಾಯ ಬೇಡವೆಂದರೂ ಕೇಳಲಿಲ್ಲ. ಅವನು ದೊರೆಗೆ ದೂರು ಹೇಳಿದನು. ದೊರೆ ಆ ದೂರಿಗೆ ಕಿವಿ ಗೊಡಲಿಲ್ಲ. ರಾಯನಿಗೆ ಬಯಲಿನ ಆಟಪಾಟಗಳಲ್ಲಿ ಇದ್ದಷ್ಟು ಆವರ ಶಾಲೆಯೊಳಗಣ ವಿದ್ಯಾಭ್ಯಾಸದಲ್ಲಿರಲಿಲ್ಲ. ಕುದುರೆಯ ಏರಾಟವೆಂದರೆ ಅವನಿಗೆ ಬಹಳ ಇಷ್ಟ. ಬೆಳಗ್ಗೆ ಹಾಸುಗೆ ಬಿಟ್ಟ ಕೂಡಲೇ ಅಶ್ವಶಾಲೆಯ ಕಡೆಗೆ ಓಡಿಹೋಗುತ್ತಿದ್ದನು. ತಂದೆ ಹೇಳಿ ಕಳುಹಿಸುವತನಕ ಕುದುರೆಯಿಳಿದು ಬರುತ್ತಿರಲಿಲ್ಲ. ಸಾಯಂಕಾಲವಾಗುತ್ತಲೆ ಅರಮನೆಯ ಗರಡಿ ಅವನ ಕ್ರೀಡಾರಂಗ ವಾಗುತ್ತಿತ್ತು. ಒಮ್ಮೊಮ್ಮೆ ಹೊರಗಡೆ ಹೋದಾಗ ರೈತರು ಹೊಲಗದ್ದೆಗಳಲ್ಲಿ ಕೆಲಸಮಾಡುವುದನ್ನೇ ನೋಡುತ್ತಾ ನಿಂತುಬಿಡು ತ್ತಿದ್ದನು. ಆಗಾಗ್ಗೆ ತನ್ನ ಜತೆಯ ಹುಡುಗರೊಡನೆ ಹಗಲೆನ್ನದೆ ಇರುಳೆನ್ನದೆ ಮಳೆಯೆನ್ನದೆ ಬಿಸಿಲೆನ್ನದೆ ಸುತ್ತಮುತ್ತಣ ಕಾಡುಮಲೆ ಗಳನ್ನು ಸುತ್ತುತ್ತಿದ್ದನು. ಈ ರೀತಿ ಅವನಿಗೆ ಹತ್ತು ವರ್ಷಗಳು ತುಂಬಿದರೂ ವಿದ್ಯಾಭ್ಯಾಸ ಸರಿಯಾಗಿ ಸಾಗಲಿಲ್ಲ. ತಂದೆ ಮಗನ ಕ್ರೀಡಾಸಕ್ತಿಯನ್ನು ಮೆಚ್ಚಿದನು; ಆದರೆ ವಿದ್ಯೆಯ ಕಡೆಗೆ ಅವನಿ ಗಿದ್ದ ಅಸಡ್ಡೆಯನ್ನು ಕಂಡು ಮರುಗಿದನು.

ರಾಯನ ಹನ್ನೆರಡನೆಯ ವರ್ಷದ ಜನ್ಮೋತ್ಸವಕ್ಕೆ ಕುಲ ಗುರುವಾದ ಮಾಧವಭಟ್ಟರೂ ಆಹ್ವಾನಿತರಾಗಿ ಬಂದಿದ್ದರು. ಅವರು ರಾಯನ ಯೋಗ್ಯತೆಯನ್ನರಿಯಲು ಅನೇಕ ಪ್ರಶ್ನೆಗಳನ್ನು

ಕೇಳಿದರು. ಅವನ ಶಕ್ತಿ ಸಾಮರ್ಥ್ಯಗಳನ್ನು ಕಂಡು ಹರ್ಷಗೊಂಡರು; ಅವನ ವಿದ್ಯಾಭ್ಯಾಸ ತೃಪ್ತಿಕರವಾಗಿ ನಡೆದಿಲ್ಲವೆಂದು ತಿಳಿದು, ಅತಿ ವಿಸ್ಮಿತನಾಗಿ ದೊರೆಯನ್ನು ಕುರಿತು, "ಎಲೈ ರಾಜನೆ, ಚಿಕ್ಕರಾಯನ ವಿದ್ಯಾಭ್ಯಾಸದ ಕಡೆಗೆ ನಿನ್ನ ಗಮನ ಹರಿಯದಿರುವುದು ನನಗೆ ಸೋಜಿಗವನ್ನುಂಟುಮಾಡಿದೆ. ಅವನ ಭವಿಷ್ಯ ಅತ್ಯಂತ ಆಶಾದಾಯಕವಾಗಿದೆ. ಅವನು ಸ್ವಾಭಾವಿಕವಾಗಿ ಬುದ್ಧಿವಂತ, ವಿನಯಶಾಲಿ, ಚಟುವಟಿಕೆಯುಳ್ಳವನು, ನಿಜ. ಆದರೆ ಬೀಜ ಎಷ್ಟೇ ಉತ್ತಮವಾದರೂ ಹದನಾದ ಮಳೆ ಸಾಕಾದಷ್ಟು ಗೊಬ್ಬರಗಳಿಲ್ಲದಿದ್ದರೆ, ಅದು ಸಸಿಯಾಗಿ ಮರವಾಗುವತನಕ ಕಾಡುಪ್ರಾಣಿಗಳಿಂದ ಅದನ್ನು ರಕ್ಷಿಸದಿದ್ದರೆ ಹಾಳಾಗುವುದಿಲ್ಲವೆ? ಆದುದರಿಂದ ರಾಜಯೋಗ್ಯವಾದ ವಿದ್ಯೆಗಳನ್ನು ಈಗಿನಿಂದಲೇ ಕಲಿಸಬೇಕಾಗುತ್ತದೆ" ಎಂದು ಹೇಳಿದರು. ಮಗನ ಬಾಲಲೀಲೆಯಲ್ಲಿಯೇ ತಲ್ಲೀನನಾಗಿದ್ದ ದೊರೆಗೆ ಆಗ ಎಚ್ಚರವಾಯಿತು. ಗುರುವನ್ನುದ್ದೇಶಿಸಿ, "ಆರ್ಯರೇ, ಹಿಂದಿನಿಂದ ನಮ್ಮ ವಂಶದ ಖ್ಯಾತಿಗೆ ಕುಲಗುರುಗಳಾದ ನೀವು ಬಹುಮಟ್ಟಿಗೆ ಕಾರಣರಾಗಿದ್ದೀರಿ. ವಿಜಯನಗರ ಸಾಮ್ರಾಜ್ಯಕ್ಕೆ ವಿದ್ಯಾರಣ್ಯರು ಹೇಗೋ ನಮ್ಮ ಈ ರಾಜ್ಯಕ್ಕೆ ನೀವು ಹಾಗೆಯೇ ಇದ್ದೀರಿ, ಹೀಗಿರುವಾಗ ಕುಮಾರನಿಗೆ ಗುರುವಾಗಲು ನೀವಲ್ಲದೆ ಮತ್ತಾರು ಅರ್ಹರು" ಎಂದು ಹೇಳಿದನು. ಗುರು ಕ್ಷಣಕಾಲ ಆಲೋಚಿಸಿ ರಾಯನನ್ನು ತನ್ನ ಹಿಂದೆ ಕಳುಹಿಸುವಂತೆ ದೊರೆಯನ್ನು ಕೇಳಿದನು. ದೊರೆ ಕೂಡಲೇ ಒಪ್ಪಿದನು. ರಾಯನೂ ಸಂತೋಷದಿಂದ ಗೆಳೆಯರೊಡಗೂಡಿ ಗುರುವಿನ ಹಿಂದೆ ಹೊರಟನು.

ಮಾಧವಭಟ್ಟರು ಬಹುಕಾಲದ ಹಿಂದೆಯೇ ಯಲಹಂಕವನ್ನು ಬಿಟ್ಟು ಊರಿಗೆ ದಕ್ಷಿಣ ದಿಕ್ಕಿನಲ್ಲಿ ಸುಮಾರು ಹದಿನೈದು

ಮೈಲಿ ದೂರದಲ್ಲಿದ್ದ ಐಗಂಡಪುರದ ಬಳಿಯ ಸಣ್ಣ ಕಾಲುವೆಯ ತೀರದಲ್ಲಿ ಆಶ್ರಮವನ್ನು ಏರ್ಪಡಿಸಿಕೊಂಡಿದ್ದರು. ಆಗಿನ ಕಾಲಕ್ಕೆ ಅವರ ಆಶ್ರಮ ಬಹಳ ಪ್ರಸಿದ್ಧವಾಗಿದ್ದು ಅನೇಕ ರಾಜಕುಮಾರರು ವಿದ್ಯಾರ್ಜನೆಗಾಗಿ ಬಂದು ಅಲ್ಲಿಯೇ ನೆಲಸುತ್ತಿದ್ದರು. ಆದರೆ ಭಟ್ಟರ ಕಠಿಣ ನಿಯಮಗಳನ್ನೂ ಆಶ್ರಮದ ಶಿಸ್ತನ್ನೂ ಪಾಲಿಸಲಾರದ ಮೈಗಳ್ಳರು ಕೆಲವು ದಿನಗಳಿದ್ದು ಮನೆಯ ರುಚಿಭಕ್ಷ್ಯಗಳನ್ನೂ, ಸುಪ್ಪತ್ತಿಗೆಗಳನ್ನೂ ನೆನೆದು ಹೊರಟು ಹೋಗುತ್ತಿದ್ದರು. ಹಿಂದಿನ ಕಾಲದಲ್ಲಿ ರಾಜಕುಮಾರರ ವಿದ್ಯಾಭ್ಯಾಸ ಸುಂದರವಾದ ಮಹಲಿನಲ್ಲಿ ಮೆತ್ತನೆಯ ಹಾಸುಗೆಯ ಮೇಲೆ ಜರುಗುತ್ತಿರಲಿಲ್ಲ ; ಅರಣ್ಯದ ನಡುವೆ ಬಿಸಿಲ ಬೇಗೆಯಲ್ಲಿ ಮಳೆಯ ಹೊಡೆತದಲ್ಲಿ ಚಳಿಯ ಕೊರೆತದಲ್ಲಿ ಸಾಗುತ್ತಿತ್ತು. ಕೆಂಪರಾಯನೂ ಆತನ ಗೆಳೆಯರೂ ಆಶ್ರಮವನ್ನು ಸೇರಿದರು. ಆಶ್ರಮದ ಕಠೋರ ವಿಧಿಗಳು ಅವನಿಗೆ ಕಷ್ಟಕರವಾಗಿ ಕಾಣಲಿಲ್ಲ. ಬಯಲೆಂದರೆ ಅವನಿಗೆ ಮೊದಲಿಂದಲೂ ಬಹಳ ಇಷ್ಟ. ಆದುದರಿಂದ ಅಲ್ಲಿಯ ವಾತಾವರಣ ಅವನಿಗೆ ಸುಲಭವಾಗಿ ಒಗ್ಗಿಕೊಂಡಿತು.

ರಾಯನ ಆಗಮನದಿಂದ ಆಶ್ರಮದಲ್ಲಿ ಹೊಸ ಬೆಳಕು ಮೂಡಿದಂತಾಯಿತು. ಸುಪುಷ್ಟವಾಗಿ ಬೆಳೆದ ದೇಹವುಳ್ಳ, ತೇಜಸ್ಸಿನಿಂದ ಕೂಡಿದ ಮುಖವುಳ್ಳ ಆ ಬಾಲಕನ ಕಡೆಗೆ ವಿದ್ಯಾರ್ಥಿಗಳ ದೃಷ್ಟಿ ಒಲೆಯಿತು. ಅವನ ವಿನಯ ಗಾಂಭೀರ್ಯಗಳಿಗೆ ಅವನ ನಡೆನುಡಿಗಳಿಗೆ ಅವರು ಸೋತರು. ಗುರುಗಳು ಸಹ ರಾಯನ ವರ್ಚಸ್ಸಿಗೆ ಮೊದಲೇ ಮರುಳಾಗಿದ್ದರು. ಆದರೆ ಅದನ್ನು ಹೊರಗಡೆ ವ್ಯಕ್ತಪಡಿಸುತ್ತಿರಲಿಲ್ಲ. ಹಿರಿಯ ವಿದ್ಯಾರ್ಥಿಗಳ ನಡುವೆ ಕುಳಿತು ಗುರು ಚರ್ಚಾವ್ಯಾಸಂಗಗಳಲ್ಲಿ ಮಗ್ನನಾಗಿರುತ್ತಿದ್ದನೇ ಹೊರತು ಕೊನೆಯಲ್ಲಿ ಕುಳಿತಿದ್ದ ಕೆಂಪರಾಯನ

ಕಡೆ ಒಮ್ಮೆಯೂ ನೋಡುತ್ತಿರಲಿಲ್ಲ. ಗುರು ಅಂತಹ ವಿನಯ ಶೀಲನನ್ನು ಮಾತಾಡಿಸದೆ ಇದ್ದುದನ್ನು ನೋಡಿ ಸಹಪಾಠಿಗಳು ಆಶ್ಚರ್ಯಪಡುತ್ತಿದ್ದರು. ಸಾಯಂಕಾಲದ ಹೊತ್ತು ನಿತ್ಯವೂ ಗುರುಗಳು ಹುಡುಗರನ್ನೆಲ್ಲ ಕಾಡಿನೊಳಕ್ಕೆ ಕರೆದುಕೊಂಡು ಹೋಗಿ ಸುತ್ತಾಡುತ್ತಿದ್ದರು. ದಾರಿಯಲ್ಲಿ ಹಲವಾರು ವಿಷಯ ಗಳನ್ನು ಚರ್ಚಿಸುತ್ತ, ಕತೆಗಳನ್ನು ಹೇಳುತ್ತ, ರಮ್ಯದೃಶ್ಯಗಳನ್ನು ವರ್ಣಿಸುತ್ತ, ಮನಸ್ಸಿಗೆ ಬಂದ ವಿದ್ಯಾರ್ಥಿಯನ್ನು ಹತ್ತಿರಕ್ಕೆ ಕರೆದು ಅವನ ಹೆಗಲ ಮೇಲೆ ಕೈಯಿಟ್ಟುಕೊಂಡು ಮಾತಾಡುತ್ತ ಹೋಗುತ್ತಿದ್ದರು. ರಾಯನು ಅವರನ್ನು ಹಿಂಬಾಲಿಸುತ್ತಿದ್ದನು. ಗುರು ಒಮ್ಮೆಯಾದರು ಅವನನ್ನು ಹತ್ತಿರಕ್ಕೆ ಕರೆಯುತ್ತಿರಲಿಲ್ಲ.

ಹೀಗೆಯೇ ಅನೇಕ ಪಕ್ಷಗಳು ಉರುಳಿದುವು. ಇನ್ನೂ ತನಗೆ ಗುರುಕೃಪೆ ಲಭಿಸದಿದ್ದುದಕ್ಕಾಗಿ ರಾಯ ಪ್ರತಿನಿತ್ಯವೂ ಕೊರಗುತ್ತಿದ್ದನು. ಆದರೆ ಅವನಿಗೆ ಇದರಿಂದ ಅಧೈರ್ಯ ಮೂಡಲಿಲ್ಲ. ನಿತ್ಯಕರ್ಮಗಳನ್ನು ಚಾಚೂ ತಪ್ಪದೆ ಆಚರಿಸು ತ್ತಿದ್ದನು. ಆಶ್ರಮದ ಕಟ್ಟು ಕಟ್ಟಳೆಗಳನ್ನೆಂದೂ ಮೀರು ತ್ತಿರಲಿಲ್ಲ. ಗುರು ತನ್ನ ಕಡೆ ನೋಡಲಿಲ್ಲವೆಂದು ಖೇದಗೊಳ್ಳು ತ್ತಿರಲಿಲ್ಲ. ಗುರು ಕೃಪೆಗೆ ಒಳಗಾಗಿದ್ದ ಇತರ ಸಹಪಾಠಿಗಳ ವಿಷಯದಲ್ಲಿ ಹೊಟ್ಟೆಕಿಚ್ಚು ಹುಟ್ಟಲಿಲ್ಲ. ಗುರು ಕೃಪೆವೊದಗಲು ಸಮಯಬೇಕು, ಅರ್ಹತೆ ಬೇಕು, ಎಂದುಕೊಂಡಿದ್ದನು. ಅದ ಕ್ಕಾಗಿ ಎಡೆಬಿಡದೆ ಶ್ರಮಿಸುತ್ತಿದ್ದನು. ಗುರುಗಳು ಹೇಳಿಕೊಟ್ಟದ್ದ ನ್ನೆಲ್ಲ ಶ್ರದ್ಧೆಯಿಂದ ಕಲಿತುಕೊಳ್ಳುತ್ತಿದ್ದನು. ಪಾಠಪ್ರವಚನಗಳ ಜತೆಗೆ ಮಲ್ಲಯುದ್ಧ, ಕತ್ತಿವರಸೆ ದೊಣ್ಣೆವರಸೆ ಮೊದಲಾದುವು ಗಳ ಅಭ್ಯಾಸವೂ ನಡೆಯುತ್ತಿತ್ತು.

ಆಶ್ರಮದ ವಿದ್ಯಾರ್ಥಿಗಳಲ್ಲೆಲ್ಲಾ ವೀರಣ್ಣನೆಂಬವನು

ಗುರುವಿಗೆ ಅಚ್ಚುಮೆಚ್ಚಾಗಿದ್ದನು. ಅವನು ಒಬ್ಬ ಬಡರೈತನ ಮಗ. ಎಲ್ಲಿಯೋ ದಾರಿಯಲ್ಲಿ ಸಿಕ್ಕಿದ ಆರುವರ್ಷದ ಆ ಹುಡುಗನನ್ನು ನೋಡಿ, ಅವನ ಪ್ರತಿಭೆಗೆ ಮೆಚ್ಚಿ ಕರೆದುತಂದು ಆಶ್ರಮದಲ್ಲಿಯೇ ಗುರುಗಳು ಸಾಕುತ್ತಿದ್ದರು. ಇತರ ರಾಜಕುಮಾರರಂತೆ ಅವನಿಗೂ ಕ್ಷತ್ರಿಯೋಚಿತವಾದ ವಿದ್ಯೆಗಳನ್ನು ಕಲಿಸುತ್ತಿದ್ದರು. ಆದರೆ ಜೊತೆಯ ಹುಡುಗರಿಗೆ ಅವನನ್ನು ಕಂಡರೆ ಆಗುತ್ತಿರಲಿಲ್ಲ. ತಮ್ಮನ್ನು ಪ್ರೀತಿಸುತ್ತಿದ್ದುದಕ್ಕಿಂತ ಹೆಚ್ಚಾಗಿ ಗುರು ಅವನನ್ನು ಪ್ರೀತಿಸುತ್ತಿದ್ದುದು, ಆಳಿನಂತಿರಬೇಕಾಗಿದ್ದ ಅವನಿಗೂ ತಮಗೆ ಕಲಿಸುತ್ತಿದ್ದ ವಿದ್ಯೆಗಳನ್ನೇ ಕಲಿಸುತ್ತಿದ್ದುದೂ ಅವರಿಗೆ ಸರಿಬೀಳದೆ ಒಳಗೊಳಗೇ ಕುದಿಯುತ್ತಿದ್ದರು. ಆಶ್ರಮವನ್ನು ಸೇರಿದ ಕೆಲವು ದಿನಗಳಲ್ಲಿಯೇ ರಾಯನಿಗೆ ಅವನ ವಿಷಯದಲ್ಲಿ ವಿಶೇಷವಾದ ಗೌರವ ಮೊಳೆಯಿತು. ಯಾವಾಗಲೂ ಅವನ ಜೊತೆಯಲ್ಲಿಯೇ ಇರಲು ಅಪೇಕ್ಷಿಸುತ್ತಿದ್ದನು. ವೀರಣ್ಣನ ಹೃದಯವೂ ರಾಯನ ಕಡೆಗೆ ಬಾಗಿತು; ಅವನ ವಿನಯ ಗಾಂಭೀರ್ಯಗಳಿಗೆ ಮಣಿಯಿತು, ಕೊನೆ ಕೊನೆಗೆ ಅವನ ಮೆಚ್ಚಿನ ಹಿಂಬಾಲಕನಾದನು. ಒಂದು ಕ್ಷಣವಾದರೂ ಒಬ್ಬನನ್ನು ಬಿಟ್ಟು ಮತ್ತೊಬ್ಬ ಅಲುಗಾಡುತ್ತಿರಲಿಲ್ಲ. ಊಟ ತಿಂಡಿಗಳು ಜೊತೆಯಲ್ಲಿ, ಆಟಪಾಟಗಳು ಜೊತೆಯಲ್ಲಿ, ಸಾಹಸ ಕೃತ್ಯಗಳು ಜೊತೆಯಲ್ಲಿ, ಮಲಗುತ್ತಿದ್ದುದು ಒಂದೆಡೆಯಲ್ಲಿ. ದೇಹಗಳು ಎರಡಾದರೂ ಅವರ ಆತ್ಮಗಳು ಒಂದಾಗಿದ್ದುವು. ಅವರ ಮಧುರ ಬಾಂಧವ್ಯವನ್ನು ನೋಡಿದ ಗುರು ತನ್ನ ಆಶಯ ನೆರವೇರಿದುದಕ್ಕಾಗಿ ಒಳಗೊಳಗೆ ಹಿಗ್ಗುತ್ತಿದ್ದನು.

ಆಶ್ರಮದ ಪದ್ಧತಿಯ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದೊಂದು ದಿನ ಗುರುವಿನ ಮನೆಯ ಕೆಲಸಕ್ಕೆ

ಹೋಗಬೇಕಾಗುತ್ತಿತ್ತು. ಜೊತೆಗೆ ಆಶ್ರಮದ ಸುತ್ತಮುತ್ತಣ ಶುದ್ಧೀಕರಣ ಕಾರ್ಯವೂ ಅವನಿಗೇ ಗಂಟುಬೀಳುತ್ತಿತ್ತು. ಕೆಂಪರಾಯ ಹೊಸಬನಾದುದರಿಂದ ಮೊದಮೊದಲು ಅವನಿಗೆ ಆ ಹೊರೆ ಇರಲಿಲ್ಲ. ಆದರೆ ತನಗೂ ಅಂತಹ ಸಮಯ ಒದಗುವುದೇ ಎಂದು ಕಾದಿರುತ್ತಿದ್ದನು. ಎಂದಾದರೊಂದು ದಿನ ಯಾವನಾದರೂ ಹುಡುಗ ಆಲಸ್ಯದಿಂದ ಮಲಗಿದರೆ ಅಂದು ಅವನ ಕೆಲಸವನ್ನು ತಾನೇ ಮಾಡುವುದಾಗಿ ಮುಂದೆ ಬರುತ್ತಿದ್ದನು. ಅವನು ಕೈಗೊಂಡ ಕಾರ್ಯ ಹಿರಿಯದಾಗಲಿ ಕಿರಿಯದಾಗಲಿ, ಅದನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸುತ್ತಿದ್ದನು. ಅವನ ಈ ಅಚ್ಚುಕಟ್ಟನ್ನು ನೋಡಿ ಗುರು ಒಳಗೊಳಗೆ ಹರ್ಷಿಸುತ್ತಿದ್ದರು.

ಒಂದು ದಿನ ಸಾಯಂಕಾಲದ ಸಮಯ. ಆಚಾರ್ಯರು ದೇಹಾಲಸ್ಯದಿಂದ ಮನೆಯಿಂದ ಹೊರಗೆ ಬರಲಾಗಲಿಲ್ಲ. ಶಿಷ್ಯರೆಲ್ಲರು ವಿಹಾರಕ್ಕಾಗಿ ಅರಣ್ಯಾಭಿಮುಖವಾಗಿ ಹೊರಟರು. ಅಂದು ಅವರ ಸಂಭ್ರಮ ಅಷ್ಟಿಷ್ಟಲ್ಲ. ಪಂಜರದಿಂದ ಬಿಡುಗಡೆ ಹೊಂದಿದ ಹಕ್ಕಿಗಳಂತೆ ಕೂಗಾಡುತ್ತ, ಆ ಕಡೆ ಈ ಕಡೆ ಅಲೆದಾಡುತ್ತ, ತಮ್ಮ ಇಚ್ಛೆಗೆ ಬಂದಂತೆ ಹರಟುತ್ತ ಹೋಗುತ್ತಿದ್ದರು. ಕೆಂಪರಾಯ ಮತ್ತು ಅವನ ಗೆಳೆಯರಿಬ್ಬರೂ ಅಂದಿನ ದಿನದ ಪಾಠಗಳ ವಿಷಯವಾಗಿ ಚರ್ಚಿಸುತ್ತ ಹಿಂದೆ ಬರುತ್ತಿದ್ದರು. ದಾರಿಯ ಬದಿಯಲ್ಲೊಬ್ಬ ಅನಾಥನಾದ ಕುಷ್ಠರೋಗಿ ನರಳುತ್ತಾ ಕುಳಿತಿದ್ದನು; ಹೊಟ್ಟೆಗೆ ಹಿಟ್ಟಿಲ್ಲದೆ ಕಂಗೆಟ್ಟು ಕಂಗಾಲಾಗಿದ್ದನು; ಹರಕು ಬಟ್ಟೆಯನ್ನುಟ್ಟು ಗಾಳಿಯಲ್ಲಿ ನಡುಗುತ್ತಿದ್ದನು; ಹಿಡಿ ಕೂಳಿಗಾಗಿ ಹಳ್ಳಿಯಿಂದ ಹಳ್ಳಿಗೆ ಸುತ್ತುತ್ತಿದ್ದನು. ಮುಂದೆ ನಡೆದ ಶಿಷ್ಯರ ಗುಂಪು ಅವನ ಅವಸ್ಥೆಯನ್ನು ನೋಡಿ ನಗುತ್ತ

ಅವಹೇಳನ ಮಾಡುತ್ತ ಹೊರಟಿತು. ಅವರಲ್ಲಿ ಕೆಲವರು ವೇದಾಂತಿಗಳು ಅವನ ಕರ್ಮ ಅದು, ಅದನ್ನು ಅನುಭವಿಸುತ್ತಿದ್ದಾನೆ, ಅವಕ್ಕೆ ಯಾರೇನು ಮಾಡುತ್ತಾರೆ, ವಿಧಿಯ ಬರಹ ಅನುಭವಿಸಲೇ ಬೇಕು, ಎಂದು ವಾಗ್ಧಾರೆಯನ್ನು ಹರಿಸಿದನು. ಮತ್ತೊಬ್ಬ, ಇಂತಹವರು ಭೂಮಿಗೆ ಭಾರ, ಸಮಾಜಕ್ಕೆ ಹೊರೆ, ಅವರನ್ನು ಕಾಡು ಮೃಗಗಳಿಗಾದರೂ ಕೊಟ್ಟರೆ ಪುಣ್ಯ ಲಭಿಸುತ್ತದೆಯೆಂದು ತನ್ನ ಸಂದೇಶವನ್ನು ಸಾರಿದನು. ಆಮೇಲೆ ಬಂದ ಕೆಂಪರಾಯ ಆ ದೃಶ್ಯವನ್ನು ನೋಡಿದ ಕೂಡಲೆ ಅವನ ಎದೆ ಇರಿದಂತಾಯಿತು. ಒಂದೆರಡು ಕ್ಷಣಗಳು ತುಟಿಪಿಟಕ್ಕೆನ್ನದೆ, ಉಸಿರು ಸಹ ಆಡಿಸದೆ ನಿಂತನು. ಮರುಮಾತಾಡಲಿಲ್ಲ. ಆತನನ್ನು ಎಬ್ಬಿಸಿ ತನ್ನ ಭುಜಕ್ಕೆ ಅವನ ದೇಹವನ್ನು ಆತುಕೊಂಡು ಆಶ್ರಮದ ಕಡೆಗೆ ಹಿಂದಿರುಗಿದನು. ಅತಿಥಿ ಗೃಹದಲ್ಲಿ ಅವನನ್ನು ಇರಿಸಿ ತಾನು ಹೊದೆಯುತ್ತಿದ್ದ ಬಟ್ಟೆಯನ್ನೆ ತಂದುಕೊಟ್ಟನು. ತನ್ನ ಪಾಲಿನ ಊಟವನ್ನೆ ಅವನಿಗೂ ಬಡಿಸಿದನು. ಕುಷ್ಠರೋಗ ಎಲ್ಲರಿಗೂ ಅಂಟಲೆಂದು ರೋಗಿಯನ್ನು ಕರೆತಂದಿರುವನೆಂದು ಕೆಲವರು ಶಿಷ್ಯರು ಗುರುವಿಗೆ ದೂರು ಹೊತ್ತರು. ಗುರು ತೆಪ್ಪಗಿದ್ದರು. ಮಾರನೆಯ ದಿನ ಬೆಳಗ್ಗೆ ಕೆಂಪರಾಯ ಆ ರೋಗಿಗೆ ಮಜ್ಜನ ಮಾಡಿಸಿ ಮಡಿ ಉಡಿಸಿದನು. ತಿಂಡಿಯುಪಚಾರ ನಡೆದ ಮೇಲೆ ಅವನನ್ನು ಬೀಳ್ಕೊಟ್ಟನು. ಆಚಾರ್ಯರು ಸಂತೃಪ್ತರಾದರು.

ಅಲ್ಲಿಗೆ ಕೆಂಪರಾಯ ಆಶ್ರಮವನ್ನು ಸೇರಿ ಆರು ವರ್ಷಗಳು ಸಂದುವು. ಅಷ್ಟು ಹೊತ್ತಿಗೆ ಅವನ ತಮ್ಮಂದಿರಾದ ಬಸವಯ್ಯ ಕೆಂಪಸೋಮಣ್ಣರಿಬ್ಬರೂ ಆಶ್ರಮವನ್ನು ಸೇರಿ ಅಣ್ಣನ ಹೆಜ್ಜೆಯನ್ನೇ ಹಿಂಬಾಲಿಸುತ್ತಿದ್ದರು. ವಿಜಯನಗರದಲ್ಲಿ ನಡೆಯುತ್ತಿದ್ದ ನಾಡಹಬ್ಬದ ಸಮಯದಲ್ಲೊಂದು ದಿನ ಆಚಾರ್ಯರು ತಮ್ಮ

ಶಿಷ್ಯರ ಬುದ್ಧಿ ಪರಾಕ್ರಮಗಳನ್ನು ಪರೀಕ್ಷಿಸಬೇಕೆಂದು ಸ್ಪರ್ಧೆ ಏರ್ಪಡಿಸಿದರು. ಪಾಠಪ್ರವಚನಗಳಲ್ಲಿ, ಮಲ್ಲಗಾಳಗ, ಕತ್ತಿವರಸೆ ಮೊದಲಾದುವುಗಳಲ್ಲೆಲ್ಲ ಕೆಂಪರಾಯ ಮತ್ತು ವೀರಣ್ಣರಿಬ್ಬರೇ ಮೊದಲಿಗರಾದರು. ಅಂದು ಎಲ್ಲರೆದುರಿಗೆ ಗುರು ತಮ್ಮ ಎದೆ ಬಿಚ್ಚಿ ರಾಯನನ್ನು ಹೊಗಳಿದರು. ರಾಯ ತಲೆ ತಗ್ಗಿಸಿದನು. ಇದರಿಂದ ಇತರ ಹುಡುಗರಿಗೆ ಇವರಿಬ್ಬರ ಮೇಲೆ ವೈಷಮ್ಯ ಹುಟ್ಟಿದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಬೆಳೆಯ ಸಿರಿ ಮೊಳೆಯಲ್ಲಿಯೇ ತೋರುತ್ತದೆಂಬ ಹಿರಿಯರ ವಚನ ಸತ್ಯವಾದುದು. ರಾಯನ ಸತ್ತ್ವ ಪರೀಕ್ಷೆಯ ಕಾಲ ಒದಗಿತು. ಒಂದು ದಿನ ಇರುಳು ಕಳ್ಳರು ಆಶ್ರಮಕ್ಕೆ ನುಗ್ಗಿ ತುರುಗಳನ್ನು ಹೊಡೆದುಕೊಂಡು ಓಡುತ್ತಿದ್ದರು. ಕರುಗಳ ಅಂಬಾ ಎಂಬ ಧ್ವನಿ ಆಶ್ರಮವಾಸಿಗಳನ್ನು ಎಬ್ಬಿಸಿತು. ಕೂಡಲೆ ಕೊಟ್ಟಿಗೆಗೆ ಹೋಗಿ ನೋಡಿದರು. ದನಗಳಿರಲಿಲ್ಲ. ತುರುಗಳೆಂದರೆ ಗುರುವಿಗೆ ಪ್ರಾಣಾಧಿಕ. ಶಿಷ್ಯರೆಲ್ಲ ಪರಸ್ಪರ ಮುಖಗಳನ್ನು ನೋಡಿಕೊಳ್ಳುತ್ತ ಮಿಳ್ ಮಿಳನೆ ಕಣ್ಣುಬಿಟ್ಟರು. ಅಷ್ಟು ಹೊತ್ತಿನಲ್ಲಿ ಕಳ್ಳರನ್ನು ಹಿಂಬಾಲಿಸುವ ಕೆಚ್ಚು ಬಲ್ಮೆಗಳು ಒಬ್ಬನಿಗಾದರೂ ಇರಲಿಲ್ಲ. ಮುಂದೆ ಏನು ಮಾಡಬೇಕೆಂಬುದು ತೋಚದೆ ಒಂದೆರಡು ಕ್ಷಣ ಎಲ್ಲರೂ ಮೌನವಾಗಿದ್ದರು. ಅಷ್ಟರಲ್ಲಿಯೇ ನಡುವಿಗೆ ಕಾಸೆ ಕಟ್ಟಿದ, ಕೈಯಲ್ಲಿ ಬಡಿಗೆ ಹಿಡಿದ ರಾಯ, ಆತನ ತಮ್ಮಂದಿರು ಮತ್ತು ವೀರಣ್ಣ, ಈ ನಾಲ್ವರೂ ಆ ಗುಂಪಿನ ಮುಂದೆ ಕಾಣಿಸಿಕೊಂಡು ಕಳ್ಳರು ಹೋದ ದಾರಿಯಲ್ಲಿ ಓಡಿದರು. ಗುರು ಬೆರಗಾದರು, ಕಳವಳಗೊಂಡರು. ಕಳ್ಳರ ಪಡೆ ದೊಡ್ಡದಿರಬಹುದೇನೋ? ಈ ನಾಲ್ವರ ಕೈಯಿಂದ ಆ ಕಾರ್ಯ ಸಾಧ್ಯವೇ? ಎಂದು ನಾನಾ ವಿಧವಾಗಿ ಯೋಚಿಸತೊಡಗಿದರು.

ಅತ್ತ ಕಳ್ಳರ ಪಡೆ ಕಾಡನ್ನು ಸೇರಿತು. ಆ ಪಡೆಯಲ್ಲಿ ಸುಮಾರು ಹತ್ತು ಹದಿನೈದು ಮಂದಿ ಇದ್ದಿರಬಹುದು. ಈ ನಾಲ್ವರು ಶೂರರೂ ಕಾಡನ್ನು ಹೊಕ್ಕು ಕಳ್ಳರನ್ನು ಸಂಧಿಸಿದರು. ಬಹಳ ಹೊತ್ತು ಹೋರಾಡಿದನಂತರ ಕಳ್ಳರ ಪಡೆ ಪಲಾಯನ ಮಾಡಿತು. ಬೆಳಕು ಹರಿಯುವ ಹೊತ್ತಿಗೆ ಹಸುಗಳ ಸಮೇತ ರಾಯನೂ, ಅವನ ಗೆಳೆಯರೂ ಆಶ್ರಮಕ್ಕೆ ಹಿಂತಿರುಗಿದರು. ಆಚಾರ್ಯರು ಕಣ್ಣಿನಲ್ಲಿ ನೀರು ಸುರಿಸುತ್ತ ರಾಯನನ್ನು ಬಿಗಿಯಾಗಿ ಅಪ್ಪಿದರು. ತಾನು ಕಲಿಸಿದ ವಿದ್ಯೆ ಸಾರ್ಥಕವಾಯಿತು. ಈ ಸಾರ್ಥಕತೆಗಿಂತ ಬೇರೆ ಗುರುಕಾಣಿಕೆ ಉಂಟೆ ಎಂದುಕೊಂಡರು.

೨

ಯಲಹಂಕನಾಡಿನ ಸಂಭ್ರಮ

ವಿಜಯನಗರ ಸಾಮ್ರಾಜ್ಯವಿಲ್ಲದಿದ್ದರೆ ಭರತಖಂಡದಲ್ಲಿ ಹಿಂದೂ ಮತ ಹೆಸರಿಲ್ಲದಂತೆ ಅಳಿದು ಹೋಗುತ್ತಿತ್ತು. ಆ ಸಾಮ್ರಾಜ್ಯವನ್ನು ಬೆಳಗಿದ ರಾಜರಲ್ಲಿ ಕೃಷ್ಣದೇವರಾಯ ಪುರುಷೋತ್ತಮನು. ಅವನ ನಿಲವಿಗೆ ನಿಲ್ಲತಕ್ಕ ವ್ಯಕ್ತಿಗಳು ಇತಿಹಾಸದಲ್ಲಿ ಅಪರೂಪ. ವಿಜಯನಗರ ಸಾಮ್ರಾಜ್ಯಸ್ಥಾಪನೆಯ ಮೂಲೋದ್ದೇಶ ಅವನ ಕಣ್ಣಿನಲ್ಲಿ ಬರೆದಿಟ್ಟಂತಿತ್ತು. ಪರಕೀಯರ ಆಕ್ರಮಣದಿಂದ ಅವರ ನೀಚ ಕೃತ್ಯಗಳಿಂದ ದೇಶದಲ್ಲಿ ಉಂಟಾಗಿದ್ದ ಅನಾಹುತಗಳನ್ನು ನೆನೆದುನೆನೆದು ಆಗಾಗ್ಗೆ ಉದ್ರೇಕಗೊಳ್ಳುತ್ತಿದ್ದನು. ಭರತಖಂಡದ ಹಿಂದಿನ ವೈಭವವನ್ನು ಮತ್ತೆ ಕಾಣಬೇಕೆಂಬುದೇ

ಅವನ ಹಂಬಲಾಗಿತ್ತು ಭರತಖಂಡಕ್ಕೆ ಮತ್ತೆ ದುರ್ದೆಸೆ ಬಾರದಿರಲೆಂಬುದೇ ಅವನ ನಿತ್ಯದ ಚಿಂತೆಯಾಗಿತ್ತು. ಆದುದರಿಂದ ಪಾಳೆಯಗಾರರಲ್ಲಿ ಅವನಿಗೆ ಅತುಲವಾದ ವಿಶ್ವಾಸವಿತ್ತು. ಆದರೂ ದಕ್ಷಿಣದಲ್ಲಿ ಸೀರ್ಯ ಚನ್ನಪಟ್ಟಣ ಸೋಲೂರು ಮೊದಲಾದ ಸೀಮೆಗಳ ಪಾಳೆಯಗಾರರು ಸ್ವತಂತ್ರರಾಗಲು ಹವಣಿಸುತ್ತಿದ್ದರು. ಯಲಹಂಕದ ಪ್ರಭುಗಳು ಮಾತ್ರ ಆ ಹಿಂದೂ ಸಾಮ್ರಾಜ್ಯಕ್ಕೆ ಎಂದೂ ಭಂಗ ಬರದಿರುವಂತೆ ಕಾವಲು ಕಾಯುತ್ತಿದ್ದರು. ಕೃಷ್ಣರಾಯನಂತು ಇವರಲ್ಲಿ ವಿಶೇಷವಾದ ಆದರ ಗೌರವಗಳನ್ನು ಇಟ್ಟಿದ್ದನು. ತನ್ನ ಬೇಹುಗಾರರಿಂದ ಆಶ್ರಮದಲ್ಲಿ ಬೆಳೆಯುತ್ತಿದ್ದ ಕೆಂಪರಾಯನ ಶೌರ್ಯ ಪರಾಕ್ರಮದ ಕತೆಗಳನ್ನು ಕೇಳಿದಾಗ ಬಹುವಾಗಿ ಹಿಗ್ಗಿದನು. ತನ್ನ ರಾಜ್ಯಕ್ಕೆ ಅವನೊಂದು ಆಧಾರಸ್ತಂಭವಾಗುವನೆಂದು ಬಗೆದನು. ಕೆಂಪನಂಜೇಗೌಡನಿಗೆ ತನ್ನ ದೂತರ ಮೂಲಕ ತನ್ನ ಮೆಚ್ಚಿಕೆಯನ್ನು ಸೂಚಿಸಿದನು. ಹಿರಿಯಪ್ರಭುವಾದವನು ಮಾಂಡಲಿಕನಾದ ತನ್ನ ಮಗನನ್ನು ಹೊಗಳುವಾಗ ಗೌಡನ ಹಿಗ್ಗು ಅಷ್ಟಿಷ್ಟೇ. ತಾನೇ ಧನ್ಯ ಎಂದುಕೊಂಡನು, ಕೆಂಪನಂಜೇಗೌಡ.

ಅಲ್ಲಿಗೆ ಕೆಂಪರಾಯನಿಗೆ ಇಪ್ಪತ್ತು ವರ್ಷಗಳು ಸಂದುವು. ವೃದ್ಧಾಪ್ಯದಲ್ಲಿ ಆಡಳಿತದ ಭಾರವನ್ನು ಹೊರಲಾರದೆ ಮಗನ ಬರವನ್ನೇ ನಿರೀಕ್ಷಿಸುತ್ತಿದ್ದನು. ಕುಲಗುರು ಸಹ ರಾಯನಿಗೆ ವಿದ್ಯಾಭ್ಯಾಸ ಸಾಂಗವಾಗಿ ನೆರವೇರಿದುದರಿಂದ ಮುಂದೆ ಆತನಿಂದ ಮಹತ್ಕಾರ್ಯಗಳು ನಡೆಯುವುವೆಂದು ಹಿಗ್ಗಿ, ಆತನಿಂದ ವಿಜಯನಗರಸಾಮ್ರಾಜ್ಯದ ಕೀರ್ತಿ ಮತ್ತಷ್ಟು ವರ್ಧಿಸಲೆಂದು ಆಶೀರ್ವದಿಸಿ ಕಳುಹಿಸಿಕೊಟ್ಟನು. ಆತನನ್ನು ಬೀಳ್ಕೊಡುವ ದಿನವಂತು ಆಶ್ರಮದ ಸಹಪಾಠಿಗಳೆಲ್ಲ ಅತ್ತರು. ಮಕ್ಕಳೆಲ್ಲ

ದವನೂ ವಿರಕ್ತನೂ ಸಂಯಮಿಯೂ ಆದ ಆಚಾರ್ಯರ ಕಣ್ಣು ಗಳಲ್ಲೂ ನೀರು ಬೊಟ್ಟಿಡುತ್ತಿತ್ತು.

ರಾಯ ಮನೆಗೆ ಹಿಂದಿರುಗಿದ ದಿನ ಪಟ್ಟಣದ ಸಂಭ್ರಮ ವನ್ನು ಕೇಳಬೇಕೆ? ಅಂದು ಯಲಹಂಕದಲ್ಲಿ ಹಬ್ಬ. ತಮ್ಮ ಪ್ರಭು, ತಮ್ಮ ಕಣ್ಮಣಿ, ತಮ್ಮ ಸುಖದ ನಿಧಿ, ತಮ್ಮ ಆಪ್ತ ಬಂಧು ಬರುವನೆಂದು ಪಟ್ಟಣಿಗರೆಲ್ಲ ಹಿಗ್ಗಿ ತಂತಮ್ಮ ಮನೆ ಗಳನ್ನು ಸಿಂಗರಿಸಿದರು. ತನ್ನ ಮಕ್ಕಳಿಂದ ಬಹುಕಾಲ ಅಗಲಿದ್ದ ಲಿಂಗಮಾಂಬೆಯ ಕಣ್ಣುಗಳಲ್ಲಿ ಆನಂದಾಶ್ರು ಧಾರಾಕಾರವಾಗಿ ಹರಿಯುತ್ತಿತ್ತು. ಇನ್ನೂ ಮಗ ಬರಲಿಲ್ಲವೆ, ಇನ್ನೂ ಮಗ ಬರಲಿಲ್ಲವೆ ಎಂದು ಪ್ರಾಸಾದದ ಗವಾಕ್ಷಿಗಳಿಂದ ಆಗಾಗ್ಗೆ ಹೊರಗೆ ಇಣಿಕಿಣಿಕಿ ನೋಡುತ್ತಿದ್ದಳು. ಅವಳು ಒಂದು ಕಡೆ ಕುಳಿತಿರು ತ್ತಿರಲಿಲ್ಲ. ಅಡುಗೆಮನೆಯಲ್ಲಂತು ವಿಶೇಷವಾಗಿ ಭಕ್ಷಭೋಜ್ಯ ಗಳನ್ನು ಮಾಡಿಸಿಟ್ಟಳು. ಮಂತ್ರಿ ಸೇನಾಧಿಪತಿಯೊಡಗೂಡಿ ದೊರೆ ಕಳಶಕನ್ನಡಿ ಹಿಡಿದ ಸುಮಂಗಲಿಯರನ್ನು ಮುಂದಿಟ್ಟು ಕೊಂಡು ಮಗನನ್ನು ಎದುರುಗೊಳ್ಳಲು ಹೊರಟನು.

ಅಂದು ಪಾದಚಾರಿಗಳಾಗಿ ಆಶ್ರಮಕ್ಕೆ ಹೊರಟ ಮಕ್ಕಳು ಇಂದು ಅಶ್ವಾರೋಹಿಗಳಾಗಿ ಮನೆಗೆ ಹಿಂತಿರುಗಿದರು. ಮುಪ್ಪಿನ ತಂದೆ ತನ್ನ ತೋಳುಗಳಿಂದ ಮಕಳನ್ನು ಬಿಗಿಯಪ್ಪಿದನು. ಹಿಂದೆಂದೂ ಚಿಕ್ಕ ರಾಯನ ಮೇಲೆ ಅವನು ಅಷ್ಟು ವಾತ್ಸಲ್ಯ ವನ್ನು ಸುರಿದಿರಲಿಲ್ಲ. ಮಂತ್ರಿ ಸೇನಾಧಿಪತಿಗಳು ಗಾಢಸ್ನೇಹ ದಿಂದ ರಾಜಕುಮಾರನನ್ನು ಅಪ್ಪಿಕೊಂಡರು. ಕೆಂಪರಾಯ ತನ್ನ ತಂದೆಗೂ ವೃದ್ಧರಿಗೂ ವೀರಣ್ಣನನ್ನು ಪರಿಚಯಮಾಡಿಕೊಟ್ಟನು. ಅಂದು ರಾಜಧಾನಿಯಲ್ಲಿ ಸುತ್ತಮುತ್ತಣ ಊರಿನವರೆಲ್ಲ ಬಂದು ನೆರೆದಿದ್ದರು. ದಾರಿಯುದ್ದಕ್ಕೂ ನಿಂತಿದ್ದ ಜನದ ಸಂದಣಿಯನ್ನು

ನೋಡಿ ರಾಜಕುಮಾರ ಮುಗುಳ್ನಗೆಯ ಹೊನಲನ್ನು ಅವರ ಮೇಲೆ ಹರಿಸಿ ಮುಂದುವರಿಯುತ್ತಿದ್ದನು. ಅಲ್ಲಲ್ಲಿ ಮುತ್ತೈದೆಯರು ಆರತಿಗಳನ್ನು ನಿವಾಳಿಸುತ್ತಿದ್ದರು. ಹಿಂದೆ ಕೆರೆಯ ಮುಂದಿನ ತೋಪಿನಲ್ಲಿ ಓರಗೆಯ ಮಕ್ಕಳೊಡನೆ ಆಡುತ್ತಿದ್ದ ಬಾಲಕನಿಂದು ಗಾಂಭೀರ್ಯದಿಂದ ಅಶ್ವಾರೋಹಿಯಾಗಿ ಬರುತ್ತಿದ್ದುದನ್ನು ನೋಡಿ ಪ್ರಜೆಗಳು ಹಿಗ್ಗಿದರು.

ಮೆರೆವಣಿಗೆ ಅರಮನೆಯ ಬಾಗಿಲನ್ನು ಸೇರಿದುದೆ ತಡ, ತಾಯಿ ಪ್ರಾಸಾದವನ್ನು ಅವಸರವಾಗಿ ಇಳಿದು ಬರುತ್ತಿದ್ದಳು. ರಾಯನೂ ಸಹ ಕುದುರೆಯನ್ನಿಳಿದಕೂಡಲೆ ತಾಯಿಯನ್ನು ನೋಡುವ ಕುತೂಹಲದಿಂದ ಮುನ್ನುಗ್ಗುತ್ತಿದ್ದನು. ತಮ್ಮಂದಿರೂ ವೀರಣ್ಣನೂ ಅವನನ್ನೆ ಹಿಂಬಾಲಿಸುತ್ತಿದ್ದರು. ತಾಯಿ ಮಗನನ್ನು ಎವೆಯಿಕ್ಕದೆ ನೋಡಿದಳು ; ಅಪ್ಪಿಕೊಂಡಳು ; ಕಣ್ಣುಗಳಲ್ಲಿ ನೀರು ಮಡುಗಟ್ಟಿತು. ಮತ್ತೆ ಮತ್ತೆ ನೋಡಿದಳು. ದೃಷ್ಟಿಯಾದೀತೆಂದು ಕಣ್ಣುಗಳನ್ನು ಬೇರೆ ಕಡೆಗೆ ತಿರುಗಿಸಿ, ಕೈಗಳಿಂದ ಅವನ ಮೈಯನ್ನು ಸವರಿದಳು. ಅವನಿಂದು ಐದುವರ್ಷದ ಹಸುಳೆಯಾಗಿರಲಿಲ್ಲ. ಆತನ ಅಂಗಾಂಗಗಳಲ್ಲಿ ಅಂದಿನ ಮೃದುತ್ವವಿರಲಿಲ್ಲ ; ಕರ್ಕಶತೆ ಅದರ ಸ್ಥಾನವನ್ನಾಕ್ರಮಿಸಿತ್ತು ; ವಿಶಾಲವಾದ ಎದೆ, ದೀರ್ಘವೂ ಪುಷ್ಟವೂ ಆದ ಬಾಹು ಯುಗ, ಸುಸ್ಥಿರವಾದ ನೇತ್ರಗಳು, ತುಪ್ಪುಳಂತಿರುವ ಕೆಮ್ಮಾಸೆ ಇವುಗಳಿಂದ ಶೋಭಾಯಮಾನನಾಗಿ ಮುಂದೆ ನಿಂತಿದ್ದ ಮಗನನ್ನು ನೋಡಿ ತಾಯಿಯ ಎದೆಯಲ್ಲಿ ವಾತ್ಸಲ್ಯ ಉಕ್ಕಿತು. ಮಗ ಬೆಳೆದರೆ ಏನು–ಅವಳಿಗೆ ಮಗುವೆ! ತಲೆಯನ್ನು ನೇವರಿಸಿ ಮುಂಡಾಡಿದಳು. ಕಿರಿಯ ಮಕ್ಕಳನ್ನು ಹತ್ತಿರಕ್ಕೆ ಸೆಳೆದು ಅಪ್ಪಿಕೊಂಡಳು. ವೀರಣ್ಣನನ್ನು ಸ್ನೇಹದಿಂದ ವಿಚಾರಿಸಿಕೊಂಡಳು. ನೆಟ್ಟಗೆ

ಅಡುಗೆಯ ಕೋಣೆಗೆ ಅವರನ್ನು ಕರೆದುಕೊಂಡುಹೋಗಿ ಮಣೆಯ ಮೇಲೆ ಕುಳ್ಳಿರಿಸಿ ತಾನೇ ತಿಂಡಿ ತಿನಿಸುಗಳನ್ನು ಬಡಿಸಿದಳು. ಅವರು ತಿನ್ನುವುದನ್ನೇ ನೋಡುತ್ತ ಕುಳಿತಳು. ಆಶ್ರಮದ ವಿದ್ಯಮಾನಗಳನ್ನು, ಅಲ್ಲಿನ ವ್ಯಾಸಂಗದ ರೀತಿ ನೀತಿಗಳನ್ನು ಕೇಳಿದಳು. ಅಲ್ಲಿನ ಕಠೋರನಿಯಮಗಳನ್ನು, ಕಠಿಣವಾದ ಬಾಳ್ವೆಯನ್ನು ಕೇಳಿ ಖೇದಗೊಂಡಳು. ಅಂತಹ ಕಷ್ಟನಿಷ್ಟುರಗಳಿಗೆ ತನ್ನ ಮಕ್ಕಳು ಗುರಿಯಾಗಬೇಕಾಯಿತೆ ಎಂದು ಬೆಚ್ಚಿದಳು, ಮರುಗಿದಳು. ರಾಯ ತಾನು ರಾಜಕುಮಾರನೆಂಬುದನ್ನು ತಾಯಿಗೆ ನೆನೆಸಿಕೊಟ್ಟು ಸಮಾಧಾನಪಡಿಸಿದನು. ಅವರು ತಾಯಿಗೆ ಎಂದಿದ್ದರೂ ಮಕ್ಕಳೇ ಹೊರತು ರಾಜಕುಮಾರರಲ್ಲ, ರಾಜರಲ್ಲ. ಮಾತೃವಾತ್ಸಲ್ಯಕ್ಕಿಂತ ಅಧಿಕವಾದ ವಸ್ತು ಪ್ರಪಂಚದಲ್ಲಿ ಬೇರೊಂದು ಉಂಟೆ?

ಮಾರನೆಯ ದಿನವೇ ಕೆಂಪನಂಜೇಗೌಡ ಆಶ್ರಮದಿಂದ ಕುಲಗುರುವನ್ನು ಬರಮಾಡಿಕೊಂಡು, ಅವರ ಸಮ್ಮುಖದಲ್ಲಿ ಮಂತ್ರಿವೃದ್ಧ ಪ್ರಮುಖರೊಡನೆ ತನ್ನ ವೃದ್ಧಾಪ್ಯದ ವಿಷಯವನ್ನು ಎತ್ತಿದನು. ಇನ್ನು ಮುಂದೆ ರಾಜ್ಯದ ಸೂತ್ರಗಳನ್ನು ಹಿಡಿಯುವ ಶಕ್ತಿ ತನಗಿಲ್ಲವೆಂದೂ ಆದುದರಿಂದ ಅವರೆಲ್ಲರೂ ಒಪ್ಪುವುದಾದರೆ ಜಾಗ್ರತೆಯಾಗಿ ರಾಜಕುಮಾರನಿಗೆ ಪಟ್ಟಕಟ್ಟುವುದಾಗಿಯೂ ತಿಳಿಸಿದನು. ಆಗ ಮಂತ್ರಿಗಳಲ್ಲೊಬ್ಬನು ಎದ್ದು ನಿಂತು ರಾಜನಿಗೆ ವಂದಿಸಿ "ಚಿಕ್ಕರಾಯರಿಗೆ ಪಟ್ಟ ಕಟ್ಟುವ ವಿಷಯದಲ್ಲಿ ಯಾರದೂ ಅಡ್ಡಿಯಿಲ್ಲ. ಪ್ರಜೆಗಳೆಲ್ಲರು ಅಂತಹ ಭಾಗ್ಯ ಒದಗುವುದೇ ಎಂದು ಕಾದಿದ್ದಾರೆ. ವಿಜಯನಗರದ ಅರಸುಗಳಾದ ಕೃಷ್ಣದೇವರಾಯರಿಗೂ ಈ ವಿಷಯದಲ್ಲಿ ತುಂಬ ಸಂತೋಷವೇ. ಕುಲಗುರುಗಳ ಅಪ್ಪಣೆಯಾದರೆ ಕುಮಾರರ ವಿವಾಹ ರಾಜ್ಯಾಭಿಷೇಕ

ಗಳಿಗೆ ಕೂಡಲೆ ತಕ್ಕ ಏರ್ಪಾಡುಗಳನ್ನು ಮಾಡಲಾಗುವುದು" ಎಂದು ನುಡಿದನು. ಸಹಜಮೌನಿಯಾದ ಗುರುಗಳು ರಾಯನ ಆಶ್ರಮದ ಜೀವನವನ್ನೆಲ್ಲ ವರ್ಣಿಸಿ ಸಂಪೂರ್ಣವಾದ ಒಪ್ಪಿಗೆಯನ್ನು ಸೂಚಿಸಿದರು. ಅಷ್ಟರಲ್ಲಿ ವೀರಣ್ಣನನ್ನೂ ತಮ್ಮಂದಿರನ್ನೂ ಕೂಡಿಕೊಂಡು ಕೆಂಪರಾಯ ಸಭೆಯನ್ನು ಪ್ರವೇಶಿಸಿದನು. ಪ್ರಧಾನಿ ಅವನ ಕೈಹಿಡಿದು ಕರೆತಂದು ಉತ್ತಮಾಸನದ ಮೇಲೆ ಕುಳ್ಳಿರಿಸಿದನು. ವೃದ್ಧರು ಅಂದಿನ ಮಾತುಕತೆಗಳ ಸಾರಾಂಶವನ್ನು ರಾಯನಿಗೆ ತಿಳಿಸಿ, ರಾಜ್ಯಾಭಿಷೇಕಕ್ಕೆ ಒಪ್ಪಬೇಕೆಂದು ನಿವೇದಿಸಿಕೊಂಡರು. ರಾಯ ಕ್ಷಣಕಾಲ ಮೌನದಿಂದಿದ್ದು ಎದ್ದು ಗುರುಗಳಿಗೂ ತಂದೆಗೂ ವೃದ್ಧರಿಗೂ ವಂದಿಸಿ "ಅಪ್ಪಾಜಿಯವರು ಹೊತ್ತಿದ್ದ ಭಾರವಾದ ಹೊರೆಯನ್ನು ಇಳಿಸುವುದು ಮಕ್ಕಳಾದ ನಮ್ಮ ಕರ್ತವ್ಯವೇ ಸರಿ. ಗುರುಗಳ ಮಂತ್ರಿಗಳ ಮತ್ತು ವೃದ್ಧರ ಬುದ್ಧಿವಾದವನ್ನು ನಿರಾಕರಿಸುವಷ್ಟು ಅಟ್ಟಹಾಸ ನನಗಿಲ್ಲ. ನನ್ನ ಪ್ರಾಣಮಿತ್ರನ, ನನ್ನ ತಮ್ಮಂದಿರ ಶಕ್ತಿಸಾಮರ್ಥ್ಯಗಳಲ್ಲಿ ನನಗೆ ಸಂಪೂರ್ಣವಾದ ಭರವಸೆಯಿದೆ. ಆದರೂ ಸದ್ಯಕ್ಕೆ ನನ್ನನ್ನು ಈ ಹೊರೆಯಿಂದ ಪಾರುಮಾಡಬೇಕಾಗಿ ಬೇಡುತ್ತೇನೆ. ನಾನು ನನ್ನ ತಮ್ಮಂದಿರೊಡನೆ ಕಾಡುಮೇಡುಗಳನ್ನು ಸುತ್ತಿ ಪ್ರಶಸ್ತವಾದ ಸ್ಥಳಗಳಲ್ಲಿ ಕುಳಗಳನ್ನಿಟ್ಟು ಉತ್ತಮವಾದ ಬೀಡುಗಳನ್ನು ಸ್ಥಾಪಿಸಬೇಕೆಂದಿದ್ದೇನೆ. ದುರ್ಗಮವಾದ ದುರ್ಗಗಳನ್ನು ಹುಡುಕಿ ರಾಜ್ಯದ ರಕ್ಷಣೆಗೆ ತಕ್ಕ ಯೋಜನೆಗಳನ್ನು ತಯಾರಿಸಬೇಕೆಂದಿದ್ದೇನೆ. ನಮ್ಮ ರಾಜ್ಯದ ಅಭಿವೃದ್ಧಿಯನ್ನು ಸಹಿಸಲಾರದ ಕೆಲವರು ಪುಂಡರು ನಮ್ಮ ಮೇಲೆ ಎಂದಾದರೂ ಬೀಳಬಹುದೆಂಬ ಸಂದೇಹವಿದೆ. ಅದಕ್ಕಾಗಿ ಮೊದಲೇ ಎಚ್ಚರಿಕೆಯ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆ. ಆಡಳಿತದ ಹೊರೆಯನ್ನು

ಹೊತ್ತುಕೊಂಡರೆ ಆ ಕಾರ್ಯಗಳನ್ನು ಸಾಧಿಸುವುದು ಕಷ್ಟವಾದೀತು.'' ಎಂದು ನುಡಿದನು. ಕುಮಾರನ ಧೀರವಾಣಿಯನ್ನು ಕೇಳಿ ಎಲ್ಲರೂ ಕ್ಷಣಕಾಲ ಗರಹೊಡೆದವರಂತೆ ಸ್ತಂಭೀಭೂತರಾದರು. ಮಂತ್ರಿ ವೃದ್ಧರು ಮತ್ತೆ ಮತ್ತೆ ಕೇಳಿಕೊಂಡರು. ಯೌವರಾಜ್ಯಾಭಿಷೇಕವಾದರೂ ನಡೆಯಲೆಂದು ಗುರು ಸೂಚಿಸಿದರು. ಕಡೆಗೆ ಆ ಸಲಹೆಯೇ ಉತ್ತಮವಾದುದೆಂದೂ ವಿವಾಹದ ಜೊತೆಯಲ್ಲಿಯೇ ಯೌವರಾಜ್ಯಾಭಿಷೇಕವೂ ನಡೆಯಬೇಕೆಂದು ಎಲ್ಲರೂ ಒಪ್ಪಿಕೊಂಡರು. ಅಲ್ಲಿಗೆ ಅಂದಿನ ಸಭೆ ಮುಕ್ತಾಯವಾಯಿತು.

ರಾಯನಿಗೆ ಹೆಣ್ಣು ಕೊಡುವವರು ಕಡಿಮೆಯಿರಲಿಲ್ಲ. ಆದರೆ ಹೆಣ್ಣು ಗೊತ್ತುಮಾಡುವುದು ಕಷ್ಟವಾಗಿತ್ತು. ತಮ್ಮ ಸ್ಥಾನಮಾನಗಳಿಗೆ ತಕ್ಕಂತೆ ಪಾಳೆಯಗಾರರ ಮನೆಯಲ್ಲಿಯೇ ಹೆಣ್ಣು ತರಬಹುದಾಗಿತ್ತು. ಅವರ ರಾಜ್ಯಕ್ಕೆ ರಾಯನೇ ಉತ್ತರಾಧಿಕಾರಿಯಾಗಬಹುದಾಗಿತ್ತು; ಅಥವಾ ರಾಜ್ಯವನ್ನು ವಿಸ್ತರಿಸಲು ಅವರ ಬೆಂಬಲ ದೊರೆಯುತ್ತಿತ್ತು; ಆದರೆ ರಾಯನಿಗೆ ಅದು ಇಷ್ಟವಿರಲಿಲ್ಲ. ಏಕೆಂದರೆ ಅವರಲ್ಲಿ ಹಲವರು ವಿಜಯನಗರ ಸಾಮ್ರಾಜ್ಯದ ವಿರೋಧಿಗಳು; ಅದರ ಪತನವನ್ನೇ ಹಾರೈಸುತ್ತಿದ್ದವರು; ಕೆಲವರು ಯಲಹಂಕನಾಡಿನ ಅಭ್ಯುದಯವನ್ನು ಕಂಡರೆ ಆಗದವರು. ಕಡೆಗೆ ತಾಯಿ ಲಿಂಗಮಾಂಬೆಯೇ ಮಗನಿಗೆ ಹೆಣ್ಣು ಗೊತ್ತುಮಾಡಬೇಕಾಯಿತು. ತನ್ನ ಅಣ್ಣನ ಮಗಳು ಚೆನ್ನಾಂಬೆಯನ್ನು ಚಿಕ್ಕಂದಿನಿಂದಲೂ ನೋಡಿದ್ದಳು. ಅವಳು ಆಗಾಗ್ಗೆ ಯಲಹಂಕಕ್ಕೆ ಬಂದು ಹೋಗುತ್ತಿದ್ದಳು. ಬಂದಾಗ ಅತ್ತೆ ಮಾವಂದಿರಲ್ಲಿ ಬಹಳ ಭಕ್ತಿಗೌರವಗಳಿಂದ ನಡೆದುಕೊಳ್ಳುತ್ತಿದ್ದಳು. ಅವಳ ಅಂದಚೆಂದಗಳು ಲಿಂಗಮಾಂಬೆ

ಯನ್ನು ಆಕರ್ಷಿಸಿದ್ದಂತೆಯೇ ಅವಳ ನೇರವಾದ ನಡೆನುಡಿಗಳೂ ಆಕರ್ಷಿಸಿದ್ದುವು. ಅವಳು ಕೈಗೊಂಡ ಪ್ರತಿಯೊಂದು ಕಾರ್ಯ ದಲ್ಲಿಯೂ ಒಪ್ಪಓರಣಗಳು ಎದ್ದುಕಾಣುತ್ತಿದ್ದುವು. ಮೊದ ಮೊದಲು ಕೆಂಪನಂಜೇಗೌಡನಿಗೆ ಈ ಸಂಬಂಧ ಸಂಪೂರ್ಣ ವಾಗಿ ಒಪ್ಪಿಗೆಯಾಗಲಿಲ್ಲ. ಮಗನ ಅಭ್ಯುದಯಾಕಾಂಕ್ಷೆಯೇ ಅದಕ್ಕೆ ಕಾರಣವಾಗಿತ್ತು. ಆದರೆ ಮಗ ಒಪ್ಪಿದ ವಿಷಯ ತಿಳಿದ ಕೂಡಲೆ ಅವನೂ ತನ್ನ ಸಮ್ಮತಿಯನ್ನು ಸೂಚಿಸಿದನು; ಆಪ್ತೇ ಷ್ಟರೂ ಅದಕ್ಕೆ ಸಹಿಹಾಕಿದರು.

ಚೆನ್ನಾಂಬೆಗಂತು ತಾನು ರಾಣಿಯಾಗುತ್ತೇನೆಂಬ ನಂಬಿಕೆ ಸ್ವಲ್ಪವೂ ಇರಲಿಲ್ಲ. ಅಂತಹ ಆಶೆ ಕನಸಿನಲ್ಲಿಯೂ ಸುಳಿದಿರ ಲಿಲ್ಲ. ಯಾವ ಜ್ಯೋತಿಷ್ಕನೂ ಭವಿಷ್ಯ ನುಡಿದಿರಲಿಲ್ಲ; ಯಾವ ಕೊರವಂಜಿಯೂ ಕಣಿ ಹೇಳಿರಲಿಲ್ಲ. ಹಾಗೆಯೆ ಅವಳ ತಾಯಿ ತಂದೆಯರಿಗೂ ಆ ಹಂಬಲವಿರಲಿಲ್ಲ. ರಾಜಕುಮಾರ ರಾಜ ಕುಮಾರಿಯನ್ನೇ ಅಪೇಕ್ಷಿಸಬಹುದು, ತಮ್ಮಂತಹ ಬಡವರ ಮನೆಗೆ ಕನ್ಯಾರ್ಥಿಯಾಗಿ ಬರುವುದುಂಟೆ ಎಂದುಕೊಂಡಿದ್ದರು. ಚೆನ್ನಾಂಬೆಯ ಊರಾದ ಬೆಂಗಳೂರು ಯಲಹಂಕಕ್ಕೆ ಎಂಟು ಮೈಲಿ ದೂರದಲ್ಲಿತ್ತು. ಹೆಬ್ಬಾಳದ ಒಳಗೆರೆಗೆ ದಕ್ಷಿಣದಲ್ಲಿದ್ದ ಆ ಊರು ಒಂದು ಸಣ್ಣ ಹಳ್ಳಿ. ಅದೇನೂ ಹಣವಂತರ ಹಳ್ಳಿ ಯಾಗಿರಲಿಲ್ಲ. ಎಲ್ಲಿ ನೋಡಿದರೂ ಗುಡಿಸಲುಗಳೇ. ನಡು ನಡುವೆ ಒಂದೊಂದು ಮಾಳಿಗೆಯ ಮನೆಗಳು ಕಾಣಿಸುತ್ತಿದ್ದುವು. ಒಂದು ದಿನ ಅಕಸ್ಮಾತ್ತಾಗಿ ಬೋವಿಗಳು ಹೊತ್ತ ಪಲ್ಲಕ್ಕಿ ಯೊಂದು ಆ ಊರಿನ ಕೇರಿಯಲ್ಲಿ ಹಾದು ಚೆನ್ನಾಂಬೆಯ ಮನೆಯ ಮುಂದೆ ನಿಂತಿತು. ಯಾರೋ ರಾಜನ ಕಡೆಯವರು ಬಂದರೆಂದು ಊರಿನವರಿಗೆಲ್ಲ ವಿಸ್ಮಯವಾಯಿತು. ಚೆನ್ನಾಂಬೆಯ

ಮನೆಯವರು ದಿಗಿಲುಗೊಂಡರು, ಬೆರಗುವಡೆದರು, ಆನಂದದಿಂದ ಕುಣಿದಾಡಿದರು.

ರಾಣಿ ಬಂದ ಸಮಾಚಾರವನ್ನು ಕೇಳಿದ ಮೇಲಂತು, ಅದು ನಿಜವೋ ಸುಳ್ಳೋ ಅಣಕವೋ ಅಥವಾ ನಮ್ಮ ಕಿವಿ ಕಿವುಡೋ ಎಂದು ಯೋಚನೆ ಮಾಡತೊಡಗಿದರು. ತಮ್ಮನ್ನು ತಾವೇ ನಂಬದಂತಾದರು; ಹುಚ್ಚರಂತಾದರು. ಲಿಂಗಮಾಂಬೆ ಯನ್ನಲ್ಲಿಗೆ ತಂದ ದೈವವನ್ನು ಕೊಂಡಾಡಿದರು. ಸೇವಕರ ಮೂಲಕ ಸಮಾಚಾರ ಕಳುಹಿಸಿದ್ದರೆ ಆಗುತ್ತಿರಲಿಲ್ಲವೆ, ಇದಕ್ಕೆ ಮಹಾರಾಣಿಯವರೇ ಬರಬೇಕಾಗಿತ್ತೆ ಎಂದು ಹೇಳಿಕೊಂಡರು. 'ಹಾಗಾದರೆ ಒಂದು ಹೊತ್ತು ಅನ್ನ ಹಾಕಲಾರದಷ್ಟು ಜಿಪುಣರೇ ನೀವು' ಎಂದು ಅತ್ತಿಗೆಯೊಡನೆ ಲಿಂಗಮಾಂಬೆ ನಗೆಯಾಡಿದಳು. ಮನೆಯ ಹೊಸ್ತಿಲನ್ನು ದಾಟಿಬಂದ ಭಾಗ್ಯದ ಬಳ್ಳಿಯನ್ನು ಬೆಪ್ಪನು ಸಹ ಕಿತ್ತು ಬಿಸುಡುವನೆ? ಕೂಡಲೇ ಹೆಣ್ಣಿನ ಕಡೆಯ ವರು ಲಿಂಗಮಾಂಬೆಯನ್ನು ಕುರಿತು "ಚೆನ್ನಾಂಬೆ ಎಂದಿದ್ದರೂ ನಿಮ್ಮವಳೆ ಅಲ್ಲವೆ. ಅವಳನ್ನು ರಾಯರಿಗೆ ಮದುವೆ ಮಾಡಿ ಕೊಳ್ಳುವ ವಿಷಯದಲ್ಲಿ ನಮ್ಮನ್ನು ಕೇಳಬೇಕೆ. ಅಂತಹ ಮಗ ಳನ್ನು ಪಡೆದು ನಾವಿಂದು ಧನ್ಯರಾಗಿದ್ದೇವೆ" ಎಂದು ದೈನ್ಯದಿಂದ ನುಡಿದರು. 'ಅಳಿಯನಿಗೇನು ಬಳುವಳಿ ಕೊಡುತ್ತೀರಿ' ಎಂದು ರಾಣಿ ನಗುತ್ತ ಅತ್ತಿಗೆಯನ್ನು ಕೇಳಿದಳು. "ಬಡವರಾದ ನಮ್ಮಲ್ಲಿ ಏನಿದೆ. ತಮ್ಮಿಂದ ಇಂದು ನಾವು ಪುಣ್ಯವಂತರಾಗುತ್ತಿದ್ದೇವೆ. ನಮ್ಮ ಪ್ರೇಮ, ನಮ್ಮ ವಿಶ್ವಾಸ, ನಮ್ಮ ಭಕ್ತಿ ಇವೇ ನಾವು ಕೊಡಬಹುದಾದ ಬಳುವಳಿ" ಎಂದು ಅತ್ತಿಗೆ ವಿನಯದಿಂದ ನುಡಿದಳು. ಅಣ್ಣ ಅತ್ತಿಗೆಯರ ಆದರೋಪಚಾರಗಳಿಂದ ಸಂತುಷ್ಟಳಾದ ರಾಣಿ ಚೆನ್ನಾಂಬೆಯ ಸದ್ಗುಣಗಳನ್ನು ನೆನೆಯುತ್ತಾ

ರಾಜಧಾನಿಗೆ ಹಿಂದಿರುಗಿದಳು. ಚೆನ್ನಾಂಬೆ ಕೆಂಪರಾಯನ ಸಾಹಸ ಸದ್ಗುಣಗಳನ್ನು ಕಂಡಿದ್ದಳು, ಕೇಳಿದ್ದಳು. ತನ್ನ ದೈವ ಭಕ್ತಿ ನಿರರ್ಥಕವಾಗಲಿಲ್ಲವೆಂದು ಹಿಗ್ಗಿದಳು.

ರಾಣಿ ಹೆಣ್ಣು ಗೊತ್ತುಮಾಡಿಕೊಂಡು ಬಂದ ಒಂದು ತಿಂಗಳಿಗೆ ವಿವಾಹ ಮತ್ತು ಯೌವರಾಜ್ಯಾಭಿಷೇಕಗಳ ಉತ್ಸವ ಏರ್ಪಾಡಾಯಿತು. ಪಟ್ಟಣದ ಜನರೆಲ್ಲ ತಮ್ಮ ಮನೆಯ ಮದುವೆ ಎಂದೇ ಭಾವಿಸಿ ಊರನ್ನು ಶೃಂಗಾರಮಾಡಿದರು. ಇಕ್ಕೇರಿ, ಬೆಳಗುತ್ತಿ, ಚಿತ್ರದುರ್ಗ, ಸೀರ್ಯ, ಚನ್ನಪಟ್ಟಣ, ಸೋಲೂರು ಮೊದಲಾದ ಸೀಮೆಗಳ ಪಾಳೆಯಗಾರರಿಗೂ, ಸುಗಟೂರು, ಹೊಳವನಹಳ್ಳಿ, ದೇವನಹಳ್ಳಿಗಳಲ್ಲಿದ್ದ ತಮ್ಮ ಜ್ಞಾತಿಗಳಿಗೂ, ವಿಜಯನಗರದ ಅರಸುಗಳಿಗೂ ಆಹ್ವಾನಪತ್ರಿಕೆಗಳು ಹೋದುವು. ಅನೇಕ ಪಾಳೆಯಗಾರರು ಮದುವೆಯ ಹೊತ್ತಿಗೆ ರಾಜಧಾನಿಯಲ್ಲಿ ನೆರೆದರು. ಬರಲಾಗದವರು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ದರು. ಸೀರ್ಯ, ಸೋಲೂರು, ಚನ್ನಪಟ್ಟಣ ಮತ್ತು ಹೊಳವನ ಹಳ್ಳಿಗಳ ಪಾಳೆಯಗಾರರು ಬರಲಿಲ್ಲ, ತಮ್ಮ ಪ್ರತಿನಿಧಿಗಳನ್ನೂ ಕಳುಹಿಸಲಿಲ್ಲ. ಕೃಷ್ಣದೇವರಾಯ ತನ್ನ ಆಪ್ತಸಚಿವನ ಮೂಲಕ ಅಮೂಲ್ಯವಾದ ಉಡುಗೊರೆಗಳನ್ನು ಕಳುಹಿಸಿದನು. ಮದುವೆ ಐದು ದಿನಗಳು ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಮದುವೆ ಜರುಗಿದ ಮಾರನೆಯ ದಿನವೇ ಯೌವರಾಜ್ಯಾಭಿಷೇಕವೂ ನೆರವೇ ರಿತು. ರಾಜರಾಣಿಯರು ವಧೂವರರನ್ನು ನೋಡಿ ಸಂತೋಷ ಸಾಗರದಲ್ಲಿ ಮುಳುಗಿದರು. ನಾಡಿನ ಮೂಲೆ ಮೂಲೆಗಳಿಂದ ಬಂದಿದ್ದ ಪ್ರಜೆಗಳು ತಮ್ಮ ಯುವರಾಜನನ್ನು ಸಂದರ್ಶಿಸಿ ಸಂತುಷ್ಟರಾಗಿ ಹಿಂತಿರುಗಿದರು. ಯಾಚಕರು ಮತ್ತು ಬ್ರಾಹ್ಮಣರು ಭೂರಿ ದಕ್ಷಿಣೆಗಳಿಂದ ತೃಪ್ತಿಹೊಂದಿದರು. ಇಲ್ಲಿ ದೊರೆತ

ಗೌರವದಿಂದ ಸಂತುಷ್ಟರಾದ ಪಾಳೆಯಗಾರರು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಕಾಣಿಕೆಯನ್ನು ಸಲ್ಲಿಸಿ, ಪರಸ್ಪರ ಸ್ನೇಹ ಸೌಹಾರ್ದಗಳನ್ನು ಹೆಚ್ಚಿಸಿಕೊಂಡು ತಮ್ಮ ಊರುಗಳಿಗೆ ಹಿಂದಿರುಗಿದರು.

೩

ಕೆಂಪರಾಯನ ಗೆಲವು ಕೃಷ್ಣರಾಯನ ನಲವು

ವಿವಾಹ ಮತ್ತು ಯೌವರಾಜ್ಯಾಭಿಷೇಕಗಳು ಸಾಂಗವಾಗಿ ನೆರವೇರಿದುವು ಆದರೆ ಕೆಂಪರಾಯನ ಮನಸ್ಸಿಗೆ ಶಾಂತಿಯಿರಲಿಲ್ಲ. ಹೊರಗಣ ಜಗತ್ತಿನಲ್ಲಿ ನಡೆಯುತ್ತಿದ್ದ ಹಿಂಸಾಕೃತ್ಯಗಳೂ ಅಕ್ಕಪಕ್ಕದ ಪ್ರಾಂತ್ಯಗಳ ಪುಂಡರಿಂದ ತನ್ನ ನಾಡಿನ ಪ್ರಜೆಗಳಿಗೆ ಆಗಾಗ್ಗೆ ಸಂಭವಿಸುತ್ತಿದ್ದ ಕೋಟಲೆಗಳೂ ಅವನ ಹೃದಯವನ್ನು ಹಿಂಡುತ್ತಿದ್ದುವು. ಆ ಪುಂಡರಿಂದ ವಿಜಯನಗರ ಸಾಮ್ರಾಜ್ಯದ ಐಕಮತ್ಯಕ್ಕೆ ಆಗಾಗ್ಗೆ ತೊಂದರೆಗಳು ಸಂಭವಿಸುತ್ತಿದ್ದುವು. ಆ ಸಾಮ್ರಾಜ್ಯದ ಅಸ್ತಿತ್ವದಲ್ಲಿ ಹಿಂದೂಧರ್ಮದ ಉದ್ಧಾರವನ್ನು ರಾಯ ಕಂಡನು. ಕೃಷ್ಣದೇವರಾಯನೂ ಯಲಹಂಕ ನಾಡಿನ ಪ್ರಭುಗಳಲ್ಲಿ ಅಚಲವಾದ ವಿಶ್ವಾಸ ಪ್ರೇಮಗಳನ್ನಿಟ್ಟಿದ್ದನು. ಆಶ್ರಮವನ್ನು ಬಿಟ್ಟು ಬರುವಾಗ ಆಚಾರ್ಯರು ಉತ್ಕಟವಾದ ವಿಶ್ವಾಸದಿಂದ ನುಡಿದಿದ್ದ ಹರಕೆ ಅವನ ಹೃದಯದಲ್ಲಿ ನಾಟಿ ಹೋಗಿತ್ತು. ಗುರುವಿನ ಈ ಹರಕೆ ಆ ತನ್ನ ಉದ್ದೇಶಗಳೆರಡನ್ನೂ ಕಾರ್ಯಗತವಾಗುವಂತೆ ಮಾಡುವುದು ಸಾಧಾರಣವಾದ ಕೆಲಸ

ವಾಗಿರಲಿಲ್ಲ ಅದಕ್ಕೆ ಅಪಾರವಾದ ಸೈನ್ಯ, ಬೊಕ್ಕಸದ ತುಂಬ ದ್ರವ್ಯ ಬೇಕಾಗಿತ್ತು; ಮದ್ದುಗುಂಡುಗಳು ಬೇಕಾಗಿದ್ದುವು; ಜತೆಗೆ ಜನಗಳ ಬೆಂಬಲ, ವಿಶ್ವಾಸಾರ್ಹರಾದ ಸೇನಾಪತಿಗಳ ಮತ್ತು ರಾಜಕಾರ್ಯ ನಿಪುಣರ ಸಹಕಾರ ಅತ್ಯಗತ್ಯವಾಗಿದ್ದುವು. ಇವುಗಳಿಗಿಂತ ಮಿಗಿಲಾಗಿ ಅರಮನೆಯ ಭೋಗವಿಲಾಸಗಳನ್ನು ತ್ಯಜಿಸಿ ಬೆಟ್ಟಗುಡ್ಡಗಳಲ್ಲಿ ಚಳಿ ಗಾಳಿ ಮಳೆ ಬಿಸಿಲೆನ್ನದೆ, ಹಗಲಿರುಳೆನ್ನದೆ ಅಲೆದಾಡಬೇಕಾಗಿತ್ತು; ಕಡೆಗೆ ತನ್ನ ಪ್ರಾಣದ ಮೇಲಣ ಆಶೆಯನ್ನು ಬಿಡಬೇಕಾಗಿತ್ತು.

ಆಶ್ರಮದಿಂದ ಹಿಂದಿರುಗಿದ ಕೂಡಲೆ ರಾಯ ಇನ್ನೂರು ಮಂದಿಯ ಸ್ವಂತ ದಳವನ್ನೇರ್ಪಡಿಸಿಕೊಂಡನು. ಅವರಿಗೆ ತಾನೇ ವೀರೋಚಿತವಾದ ಶಿಕ್ಷಣವನ್ನು ಕೊಟ್ಟನು. ರಾಯನಂತೆ ಅವರೂ ಎಂತಹ ಕಷ್ಟಗಳಿಗಾದರೂ ಎದೆಗೊಟ್ಟು ನಿಲ್ಲುವವರಾಗಿದ್ದರು ರಾಯನಿಗಾಗಿ ತಮ್ಮ ಬಾಳ್ವೆಯನ್ನೆ ಬಲಿಗೊಡಲು ಸಿದ್ಧರಾಗಿದ್ದರು. ಅವರು ಕೇವಲ ಸಂಬಳದ ನೌಕರರಾಗಿರಲಿಲ್ಲ; ರಾಯನ ನೆಚ್ಚಿನ ಗೆಳೆಯರಾಗಿದ್ದರು. ತನ್ನ ವೇಷವನ್ನು ಮರೆಯಿಸಿಕೊಂಡು ರಾಯ ಅವರ ಜತೆಯಲ್ಲಿ ಇರುಳೆಲ್ಲ ಅಲೆಯುತ್ತಿದ್ದನು. ಮೊದಲು ತನ್ನ ರಾಜ್ಯವನ್ನೆಲ್ಲ ಸುತ್ತಿ ಪ್ರಜೆಗಳ ಒಲವು ನಿಲವುಗಳನ್ನು ಅರಿತು ಕೊಂಡನು. ಸುತ್ತಾಟದ ಕಾಲದಲ್ಲಿ ಬಡವರ ಗುಡಿಸಲಿನಲ್ಲಿ ಹಣವಂತರ ಮಹಲುಗಳಲ್ಲಿ ಉಂಡು, ಪವಡಿಸಿ, ಅವರು ಆಡಳಿತದ ವಿಷಯದಲ್ಲಿ ಏನೆನ್ನುತ್ತಾರೆಂಬುದನ್ನು ತಿಳಿದುಕೊಳ್ಳುತಿದ್ದನು. ಎಲ್ಲಿಯಾದರೂ ಅನ್ಯಾಯದ ಸುಳಿವು ಕಂಡಿತೆಂದರೆ ಕೂಡಲೇ ತನ್ನ ಪಡೆಯವರನ್ನು ಕಳುಹಿಸಿ, ಎಳೆತರಿಸಿ ಯುಕ್ತವಾದ ಶಿಕ್ಷೆಯನ್ನು ವಿಧಿಸುತ್ತಿದ್ದನು. ರಾಜ ಯಾವ ರೂಪದಲ್ಲಿ ಬಂದು ತಮ್ಮ ತಪ್ಪನ್ನು ಕಂಡುಹಿಡಿಯುತ್ತಾನೆಯೋ ಎಂಬ ಭಯದಿಂದ ದುಷ್ಟರು

ಹೀನಕೃತ್ಯಗಳನ್ನು ಎಸಗುತ್ತಿರಲಿಲ್ಲ. ಬೀದಿಯಲ್ಲಿ ಆಟವಾಡುತ್ತಿದ್ದ ಮಕ್ಕಳ ಬಾಯಲ್ಲಿಯು ಸಹ ರಾಯನ ಹೆಸರು ನಲಿದಾಡುತ್ತಿತ್ತು. ಜಗಳಗಂಟಿಗಳಾದ ಹುಡುಗರು ರಾಯನ ಹೆಸರನ್ನು ಕೇಳಿದ ಕ್ಷಣವೇ ಗರುಡಮಣಿಯನ್ನು ಕಂಡ ಸರ್ಪದಂತೆ ತಣ್ಣಗಾಗುತ್ತಿದ್ದರು. ಆಗಾಗ್ಗೆ ಸ್ವಂತ ದಳದ ಬಂಟರು ವೇಷಾಂತರಗಳನ್ನು ತಾಳಿ ಶತ್ರುರಾಜ್ಯಗಳಿಗೆ ಹೋಗಿ ಅಲ್ಲಿನ ವಿದ್ಯಮಾನಗಳನ್ನು ತಿಳಿದು ಬರುತ್ತಿದ್ದರು.

ರಾಯನ ಪ್ರತಿಯೊಂದು ಕಾರ್ಯದಲ್ಲಿಯೂ ಅವನ ತಮ್ಮಂದಿರೂ ವೀರಣ್ಣನೂ ಬೆಂಬಲಿಗರಾಗಿ ನಿಂತರು. ಪ್ರತಿಯೊಬ್ಬನೂ ಒಂದೊಂದು ಸಾವಿರ ಮಂದಿ ಕಾಲಾಳುಗಳನ್ನೂ ಐನೂರುಮಂದಿ ಸವಾರರನ್ನೂ ತಯಾರುಮಾಡಿ ಸೈನ್ಯಸಂಪತ್ತಿಯನ್ನು ಹೆಚ್ಚಿಸಿದರು. ದೇಶದ ಆದಾಯ ಕನ್ನಗಂಡಿಗಳಲ್ಲಿ ಜಾರಿ ಕಳ್ಳಗುಂಡಿಗಳಲ್ಲಿ ಕೊಳೆಯದಹಾಗೆ ಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದರು. ಬಂದ ಉತ್ಪತ್ತಿಯಿಂದ ಮದ್ದುಗುಂಡುಗಳ ಕಾರ್ಖಾನೆಯನ್ನು ಸ್ಥಾಪಿಸಿದರು. ಅಣ್ಣತಂತೆಯೆ ಇವರೂ ನಾಡಿನ ಮೂಲೆಮೂಲೆಗಳನ್ನು ಸುತ್ತಿ ಕಾಡುಗಳನ್ನು ಕಡಿಸಿ, ಉಳಿಸಿ, ಹಸನುಮಾಡಿಸಿ, ಬೀಜ ಹಾಕಿಸಿ, ರೈತರನ್ನು ಪ್ರೋತ್ಸಾಹಿಸಿ ಅವರಿಗೆ ಆವಶ್ಯಕವಾದ ಅನುಕೂಲಗಳನ್ನು ಕಲ್ಪಿಸಿಕೊಟ್ಟು, ದೇಶದ ಉತ್ಪತ್ತಿಯ ಪ್ರಮಾಣವನ್ನು ಹೆಚ್ಚಿಸಿದರು. ಇವರ ಈ ಪ್ರಜಾವಾತ್ಸಲ್ಯವನ್ನು ಕಂಡ, ಕೇಳಿದ ಜನರು ಬೇರೆ ಬೇರೆ ಪ್ರಾಂತ್ಯಗಳಿಂದ ಬಂದು ಇವರ ನಾಡಿನಲ್ಲಿ ನೆಲೆಸಿದರು.

ರಾಯನಿಗೆ ಯೌವರಾಜ್ಯಾಭಿಷೇಕವಾದ ಎರಡು ವರ್ಷಗಳಲ್ಲಿಯೆ ಯಲಹಂಕ ರಾಜ್ಯವಿಸ್ತಾರವಾಯಿತು; ಕಳ್ಳಕಾಕರ ಮತ್ತು ಪುಂಡರ ಹಾವಳಿ ಕಡಮೆಯಾಯಿತು; ಪ್ರಜೆಗಳು ಸುಖ

ಸಂಪತ್ತುಗಳಿಂದ ತಣಿದರು; ನಾಡಿನಲ್ಲಿ ಶಾಂತಿ ನೆಮ್ಮದಿಗಳು ನೆಲೆಸಿದುವು. ತಾನು ಕೃತಕೃತ್ಯನಾದೆನೆಂದು ರಾಯ ಸಂತುಷ್ಟನಾದನು. ಆದರೇನು, ಮಾನವನ ಬಾಳಿನಲ್ಲಿ ಸುಖದುಃಖಗಳು ಬೆಳಕು ನೆಳಲುಗಳಂತೆ ಒಂದನ್ನೊಂದು ಹಿಂಬಾಲಿಸುತ್ತಿರುತ್ತವೆ. ರಾಯನ ಎದೆಯ ಕೆಚ್ಚು ನೆಚ್ಚುಗಳನ್ನು ಬಸಿದು ಅಳೆಯುವ ಪ್ರಕರಣವೊಂದು ಸಂಭವಿಸಿತು. ವಯಸ್ಸಿನ ಭಾರವನ್ನು ತಡೆಯಲಾರದ ತಂದೆಯನ್ನು ಮುಪ್ಪಿನ ಸಂಗಾತಿಯಾದ ರೋಗ ಆವರಿಸಿತು. ರಾಜ್ಯದ ವ್ಯವಹಾರಗಳನ್ನು ಪ್ರಧಾನಮಂತ್ರಿಗೆ ವಹಿಸಿ ರಾಯ ತಮ್ಮಂದಿರೊಡನೆ ತಂದೆಯ ಶುಶ್ರೂಷೆಗಾಗಿ ನಿಂತನು. ತಂದೆಯನ್ನುಳಿಸಿಕೊಳ್ಳಲು ತಾನೇ ಮೃತ್ಯುವಿನೊಡನೆ ಸೆಣಸಿದನು. ಆದರೆ ಸಾಧ್ಯವಾಗಲಿಲ್ಲ. ತಂದೆಯ ಶವದ ಬಳಿ ಕುಳಿತು ರಾಯ ಹಸುಗೂಸಿನಂತೆ ರೋದಿಸಿದನು. ತಾಯಿ ತಮ್ಮಂದಿರ ದುಃಖ ಅವನ ದುಃಖವನ್ನು ಇಮ್ಮಡಿಗೊಳಿಸಿತು. ಕೊನೆಗೆ ಆಚಾರ್ಯರು ಬಂದು ಎಚ್ಚರಿಸಿದ ಮೇಲೆ ಅರಿವು ಮರಳಿತು. ಉತ್ತರಕ್ರಿಯಾದಿಗಳನ್ನು ಮುಗಿಸಿದನಂತರ ಗುರುಗಳ ಮತ್ತು ವೃದ್ಧರ ಸಮ್ಮುಖದಲ್ಲಿ ರಾಯನಿಗೆ ಪಟ್ಟಾಭಿಷೇಕವಾಯಿತು. ಯಲಹಂಕದಲ್ಲಿ ರಾಯನಿಗೆ ಪಟ್ಟಾಭಿಷೇಕವಾದ ದಿನ ವಿಜಯನಗರದಲ್ಲಿ ಕೃಷ್ಣರಾಯ ಹಿಗ್ಗಿದನು; ರಾಯನ ಅಭಿವೃದ್ಧಿಯನ್ನು ಕಂಡು ಕರುಬುತ್ತಿದ್ದ ಅನೇಕ ಪಾಳೆಯಗಾರರು ಕೊರಗಿದರು.

ಯಲಹಂಕ ನಾಡಿಗೆ ಸೀರ್ಯ, ಸೋಲೂರು, ಚನ್ನಪಟ್ಟಣಗಳ ಪಾಳೆಯಗಾರರು ರಾಹುವಿನಂತಿದ್ದರು. ಹತ್ತಾರು ಹಳ್ಳಿಗಳಿಗೆ ಕೇವಲ ನಾಡಗೌಡರಂತಿದ್ದ ಯಲಹಂಕದ ಗೌಡರು ಸುಮಾರು ೩೦,೦೦೦ ವರಹಗಳು ಉತ್ಪತ್ತಿಯಾಗುವಷ್ಟು ನಾಡನ್ನೇ ಸಂಪಾದಿಸಿದುದು ಅವರಿಗೆ ಸಹಿಸುತ್ತಿರಲಿಲ್ಲ. ತಮಗೆ ವಿರೋಧ

ವಾಗಿ ವಿಜಯನಗರದ ಅರಸುಗಳಿಗೆ ಬೆಂಬಲಿಗರಾಗಿ ಅವರ ಕಾರ್ಯೋದ್ಯಮಗಳಿಗೆ ನೆರವು ನೀಡುತ್ತಿದ್ದುದರಿಂದ ಇವರಲ್ಲಿ ಆ ಪಾಳೆಯಗಾರರ ದ್ವೇಷಮಾತ್ಸರ್ಯಗಳು ಹೆಚ್ಚಿದುವು. ಏನಾದರೂ ಸನ್ನಾಹ ಹೂಡಿ ಈ ನಾಡನ್ನು ನುಂಗಬೇಕೆಂದು ಅವರೆಲ್ಲ ಹವಣಿಸುತ್ತಿದ್ದರು. ಆದರೆ ಸೈನ್ಯ ಮತ್ತು ಮದ್ದುಗುಂಡು ಗಳಿಂದಲೇ ಇವರನ್ನು ಜಯಿಸುವುದು ಕಷ್ಟವಾಗಿತ್ತು. ಈ ಗೌಡ ರಿಗೆ ಸಾಕಾದಷ್ಟು ಜನರ ಬೆಂಬಲವಿತ್ತು. ಒಂದು ಚೋಟುದ್ದ ನೆಲವನ್ನೂ ಇವರು ಕತ್ತಿಯಿಂದ ಗೆದ್ದಿರಲಿಲ್ಲ. ಇವರ ಸೌಜನ್ಯ ಪರೋಪಕಾರನಿಷ್ಠೆ ಪ್ರಜಾವಾತ್ಸಲ್ಯಗಳನ್ನು ಕಂಡ ಜನರು ತಾವಾ ಗಿಯೇ ಇವರ ಒಡೆತನವನ್ನು ಅಂಗೀಕರಿಸಿದರು. ಒಂದೊಂದು ಹಳ್ಳಿಯೂ ಸ್ವತಂತ್ರವಾದ ಸಂಪೂರ್ಣವಾದ ಸೀಮೆಯಾಗಿತ್ತು. ಜನರಿಗೆ ಬೇಕಾದುದೆಲ್ಲ ಅಲ್ಲಿಯೆ ಸಿಗುತ್ತಿತ್ತು. ಆದುದರಿಂದ ಪರ ರನ್ನು ಆಶ್ರಯಿಸಬೇಕಾದ ಅವಶ್ಯಕತೆಯಿರಲಿಲ್ಲ. ಕಳ್ಳಕಾಕರ ಪಡೆ ಬಂದಾಗ ಎಲ್ಲರೂ ಒಗ್ಗಟ್ಟಾಗಿ ಸದೆಬಡಿಯುತ್ತಿದ್ದರು. ಊರೊ ಟ್ಟಿನ ಕೆಲಸಗಳನ್ನು ಪ್ರತಿಯೊಬ್ಬನೂ ಹಂಚಿಕೊಳ್ಳುತ್ತಿದ್ದನು. ಈ ಹಳ್ಳಿಗಳ ಸಹಕಾರವಿಲ್ಲದೆ ಯಾವ ಸರ್ಕಾರದ ಆಡಳಿತವೂ ಸುಸೂತ್ರವಾಗಿ ನಡೆಯುವಂತಿರಲಿಲ್ಲ, ಯಾವ ಸರ್ಕಾರದ ಬುಡವೂ ಭದ್ರವಾಗಿ ನಿಲ್ಲುವಂತಿರಲಿಲ್ಲ. ಇಂತಹ ವಾತಾವರಣದಲ್ಲಿ ಪರಕೀ ಯರ ದಬ್ಬಾಳಿಕೆಯಾಗಲಿ, ಆಕ್ರಮಣ ಪ್ರಯತ್ನವಾಗಲಿ ಏನೇನೂ ಸಾಗುತ್ತಿರಲಿಲ್ಲ. ಆದುದರಿಂದಲೆ ಆ ಪಾಳೆಯಗಾರರೆಲ್ಲ ಒಟ್ಟಾಗಿ ಕಲೆತು ಯಲಹಂಕವನ್ನು ಮುತ್ತಬೇಕೆಂದು ಪ್ರಯತ್ನನಡೆಸು ತ್ತಿದ್ದರು. ಅವರ ದೃಷ್ಟಿ ವಿಜಯನಗರದ ಕಡೆಗೂ ಚಾಚಿತ್ತು. ಎಂದಾದರೊಂದು ದಿನ ಅದರಿಂದ ದೂರ ಸಿಡಿದು ಸ್ವತಂತ್ರರಾಗ ಬೇಕೆಂಬ ಇಚ್ಛೆಯುಳ್ಳವರಾಗಿದ್ದರು.

ಇಷ್ಟೇ ಅಲ್ಲ; ಯಲಹಂಕ ನಾಡಿನ ಗಡಿಯ ಬಳಿ ಇದ್ದ ಹೊಳವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ಚಿಕ್ಕಬಳ್ಳಾಪುರದ ಪಾಳೆಯಗಾರರು ರಾಯನ ಅಭ್ಯುದಯವನ್ನು ಸಹಿಸಲಾರದೆ ಅವರು ಸಹ ಅವನ ಮೇಲೆ ಬೀಳಲು ಸಮಯವನ್ನು ನಿರೀಕ್ಷಿಸುತ್ತಿದ್ದರು. ಹೊರಗಿನ ಪಾಳೆಯಗಾರರನ್ನು ಎದುರಿಸಲು ರಾಯ ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ಆದರೆ ತನ್ನ ಜ್ಞಾತಿಗಳ ಮೇಲೆ ಕೈಮಾಡುವ ಸಂದರ್ಭವೊದಗಿದಾಗ ಹಿಂದೆ ಮುಂದೆ ಆಲೋಚಿಸುತ್ತಿದ್ದನು. ತನ್ನ ಸಖನಾದ ವೀರಣ್ಣನನ್ನು ಕಳುಹಿಸಿ ಶಾಂತಿ ಸಂಧಾನಕ್ಕೊಡಂಬಡುವಂತೆ ಅವರನ್ನು ಬೇಡಿಕೊಂಡನು. ಪವಿತ್ರವಾದ ದೊಡ್ಡಮ್ಮನ ವಂಶದಲ್ಲಿ ಹುಟ್ಟಿ ದಾಯಾದಿ ಕಲಹದಿಂದ ಹಾಳಾಗಬಾರದೆಂದೂ, ಎಲ್ಲರೂ ಒಟ್ಟುಗೂಡಿದರೆ ಸುತ್ತಮುತ್ತಣ ಸೀಮೆಗಳೆಲ್ಲ ತಮ್ಮವಾಗಬಹುದೆಂದೂ ವಿಜ್ಞಾಪಿಸಿಕೊಂಡನು. ಕೆಲವು ಊರುಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಡುವುದಾದರೆ ಕಲಹದ ಗೋಜಿಗೆ ಹೋಗುವುದಿಲ್ಲವೆಂದು ಅವರು ಉತ್ತರ ಬರೆದರು. ರಾಯನ ಪಟ್ಟಾಭಿಷೇಕ ಮಹೋತ್ಸವಕ್ಕೂ ಅವರು ಬರಲಿಲ್ಲ. ಇತರ ಪಾಳೆಯಗಾರರು ಇಂತಹ ಸನ್ನಿವೇಶ ಒದಗುವುದೇ ಎಂದು ಕಾದಿದ್ದರು. ರಾಯನ ಸಂಧಾನ ಮುರಿದು ಹೋದುದನ್ನು ಕಂಡು ಅವನ ಜ್ಞಾತಿಗಳನ್ನೆಲ್ಲ ಸಂಗ್ರಾಮಕ್ಕೆ ಪ್ರೇರಿಸುತ್ತಿದ್ದರು. ಇಂತಹ ಸನ್ನಿವೇಶದಲ್ಲಿ ಕೆಂಪರಾಯ ಸುಮ್ಮನೆ ಕುಳಿತಿದ್ದರೆ ತನ್ನ ನಾಡಿಗೆ ಮಾತ್ರವಲ್ಲ, ಇಡೀ ವಿಜಯನಗರ ಸಾಮ್ರಾಜ್ಯಕ್ಕೆ ತೊಂದರೆ ಸಂಭವಿಸುತ್ತಿತ್ತು.

ಸೈನ್ಯ ಒದಗಿಸುವುದು ರಾಯನಿಗೆ ಕಷ್ಟವಾಗಿ ತೋರಲಿಲ್ಲ. ಅದಕ್ಕೆ ಯೋಗ್ಯರಾದ ಸೇನಾಧಿಪತಿಗಳೂ ದೊರಕುತ್ತಿದ್ದರು. ಅವನ ತಮ್ಮಂದಿರಾದ ಬಸವಯ್ಯ ಕೆಂಪಸೋಮಣ್ಣರು ಭೀಮಾ

ರ್ಜುನರಂತಿದ್ದರು, ಅವನ ಎರಡು ಭುಜಗಳಾಗಿದ್ದರು. ಜತೆಗೆ ಭಕ್ತಿಯಲ್ಲಿ ಆಂಜನೇಯನಿಗೆ ಸರಿಸಮಾನನಾದ ವೀರಣ್ಣನಿದ್ದನು. ಆದರೆ ಅವನ ಹತ್ತಿರ ಸಾಕಾದಷ್ಟು ಮದ್ದುಗುಂಡುಗಳಿರಲಿಲ್ಲ, ದ್ರವ್ಯವಿರಲಿಲ್ಲ. ಪ್ರಜೆಗಳಿಂದ ಹೆಚ್ಚು ತೆರಿಗೆಯನ್ನು ಸುಲಿಯಲು ಇಷ್ಟವಿರಲಿಲ್ಲ. ಬರಿಯ ಚಿಂತೆಯಿಂದ ಕಾರ್ಯಸಾಧನೆಯಾಗು ವಂತಿರಲಿಲ್ಲ. ಚಿಂತೆಯೆಂಬ ಕುದುರೆಗೆ ಕಡಿವಾಣವಿಲ್ಲದಿದ್ದರೆ ಅದರ ಅಗಡುತನವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ; ಅದು ತನ್ನ ಸವಾರನನ್ನು ಕಾಣದ ದೇಶಕ್ಕೆ ಕೊಂಡೊಯ್ದು ಸೋಮಾರಿತನದ, ನಿರಾಶೆಯ ಹೊದರಿನಲ್ಲಿ ತುಯ್ದಿಸೆಯುತ್ತದೆ. ಚಿಂತೆ ಹೇಡಿಯ ಯಜಮಾನಿ, ಕಾರ್ಯಸಾಧಕನ ಮತ್ತು ಸಾಹಸಿಯ ಸೇವಕಿ. ಅವನ್ನರಿತ ಕೆಂಪರಾಯ ತನ್ನ ಕಾರ್ಯದ ಫಲಾಫಲ ಗಳನ್ನು ಧರ್ಮದೇವತೆಯ ಅಧಿಕಾರಕೆ ಬಿಟ್ಟು ಕಾರ್ಯೋನ್ಮುಖ ನಾದನು. ತನ್ನ ತಮ್ಮಂದಿರಿಗಿಂತ ಬೇರೆ ಮದ್ದುಗುಂಡುಗಳು ಬೇಕಿಲ್ಲವೆಂದುಕೊಂಡನು.

ಕಡೆಗೊಂದು ದಿನ ಚನ್ನಪಟ್ಟಣ, ಸೀರ್‍ಯ, ಸೋಲೂರು, ಕುಣಿಗಲು, ಹೊಳವನಹಳ್ಳಿ, ದೇವನಹಳ್ಳಿಗಳ ಪಾಳೆಯಗಾರರು ಒಂದೆಡೆ ಕಲೆತು ಯಲಹಂಕವನ್ನು ಮುತ್ತುವ ವಿಧಾನವನ್ನು ಯೋಚಿಸಿದರು. ಚನ್ನಪಟ್ಟಣದ ಜಗದೇವರಾಯನ ನಾಯಕತ್ವ ದಲ್ಲಿ ಕುಣಿಗಲು ಮತ್ತು ಸೋಲೂರಿನ ಸೈನ್ಯಗಳು ರಾಮಗಿರಿ ಯನ್ನೂ, ಅದೇ ಸಮಯದಲ್ಲಿ ಹೊಳವನಹಳ್ಳಿ, ರಣಭೈರೇಗೌಡನ ನಾಯಕತ್ವದಲ್ಲಿ ದೇವನಹಳ್ಳಿ, ಸೀರ್‍ಯದ ಸೈನ್ಯಗಳು ಶಿವಗಂಗೆ ಯನ್ನೂ ಮುತ್ತಬೇಕೆಂದು ನಿಷ್ಕರ್ಷೆ ಮಾಡಿಕೊಂಡರು. ಇಬ್ಬರೂ ದೊಡ್ಡ ಪಡೆಗಳನ್ನು ಕೂಡಿಕೊಂಡು ಧಾಳಿಯನ್ನು ಆರಂಭಿಸಿದರು. ದಾರಿಯಲ್ಲಿ ಸಿಕ್ಕಿದ ಅಗ್ರಹಾರಗಳನ್ನೂ ಊರುಗಳನ್ನೂ ಕೊಳ್ಳೆ

ಹೊಡೆಯುತ್ತ, ತುರುಗಳನ್ನು ಸೆರೆಹಿಡಿಯುತ್ತ, ಹುಲ್ಲುಬಣಬೆಗಳಿಗೆ ಬೆಂಕಿಯಿಡುತ್ತ ತೀವ್ರವಾಗಿ ಮುಂದುವರಿದು ಮೊದಲೇ ತೀರ್ಮಾನವಾಗಿದ್ದಂತೆ ರಾಮಗಿರಿ ಶಿವಗಂಗೆಗಳಲ್ಲಿ ಬೀಡುಬಿಟ್ಟರು.

ಪಟ್ಟಾಭಿಷೇಕಮಹೋತ್ಸವ ಮುಗಿದ ಒಂದು ವಾರದೊಳಗಾಗಿ ಇಷ್ಟೆಲ್ಲ ವಿಪತ್ತುಗಳು ಸಂಭವಿಸಿದ್ದುವು. ಯುದ್ಧ ಎಂದಾದರೂ ಪ್ರಾಪ್ತವಾಗಬಹುದೆಂದು ರಾಯ ಮೊದಲೇ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿದ್ದನು. ಆದರೆ ತನ್ನ ಜ್ಞಾತಿಗಳು ತನ್ನ ಬೇಡಿಕೆಗೆ ಒಪ್ಪದೆ ಅಷ್ಟು ಬೇಗನೆ ಶತ್ರುಗಳನ್ನು ಕೂಡಿಕೊಂಡು ಕಾಲು ಕೆರೆದು ಕಲಹಕ್ಕೆ ಬಂದುದಕ್ಕಾಗಿ ಬಹುವಾಗಿ ವ್ಯಾಕುಲಗೊಂಡನು. ಯುದ್ಧದ ಮಾರಿ ಮನೆಯ ಬಾಗಿಲಿಗೆ ಬಂದು ನಿಂತಾಗ ಸಾವಕಾಶಮಾಡುವುದು ತರವಲ್ಲವೆಂದು ರಾಯನ ತಮ್ಮಂದಿರು ಸಲಹೆಯಿತ್ತರು. ಕೂಡಲೆ ಬಸವಯ್ಯ ರಾಮಗಿರಿಗೂ, ವೀರಣ್ಣನೊಡನೆ ರಾಯ ಶಿವಗಂಗೆಯ ಕಡೆಗೂ ಸೈನ್ಯದೊಡನೆ ಹೊರಟರು. ರಾಯ ತನ್ನ ಜತೆಯಲ್ಲಿ ನೂರು ಮಂದಿ ಸ್ವಂತ ದಳದ ಬಂಟರನ್ನೂ, ಐನೂರು ಮಂದಿ ಕಾಲಾಳುಗಳನ್ನೂ ತೆಗೆದುಕೊಂಡು ಹೋಗಿದ್ದನು. ಕೆಂಪಸೋಮಣ್ಣ ಹಿಂದೆ ನಗರ ರಕ್ಷಣೆಗಾಗಿ ನಿಂತನು. ಬಸವಯ್ಯನಿಗೆ ಸೈನ್ಯಬಲ ಸಾಕಾಷ್ಟಿದ್ದುದರಿಂದ ಜಯ ಸುಲಭಪ್ರಯಾಸದಿಂದ ಲಭಿಸಿತು. ಜಗದೇವರಾಯ ತನ್ನ ರಾಜಧಾನಿಗೆ ಹಿಂದಿರುಗಿದನು. ಅವನ ಸೈನ್ಯ ಚೆಲ್ಲಾಪಿಲ್ಲಿಯಾಯಿತು. ಬಸವಯ್ಯ ಅಲ್ಲಿಯೇ ನಿಲ್ಲದೆ ಮುನ್ನುಗ್ಗಿ ಹುತ್ರಿದುರ್ಗ ಹುಲಿಯೂರು ದುರ್ಗಗಳನ್ನು ವಶಪಡಿಸಿಕೊಂಡನು. ಈ ಕಡೆ ರಣಭೈರೇಗೌಡನ ಫೌಜು ನಿರೀಕ್ಷಿಸಿದ್ದುದಕ್ಕಿಂತ ದೊಡ್ಡದಾದುದರಿಂದ ರಾಯನ ಪಡೆಗೆ ಅದನ್ನು ಎದುರಿಸುವುದು ಕಷ್ಟವಾಯಿತು. ಹಗಲು ಬೆಟ್ಟಗುಡ್ಡಗಳಲ್ಲಿ ಅವಿತಿದ್ದು ಇರುಳು ಹಗೆಗಳ

ಮೇಲೆ ಬೀಳುತ್ತಿದ್ದರು. ಆದರೂ ಎರಡು ದಿನಗಳಲ್ಲಿ ತನ್ನ ಕಡೆಯು ನೂರಾರು ಮಂದಿ ಸೈನಿಕರು ಉರುಳಿದರು. ಉಳಿದವರನ್ನು ಬಲಿಗೊಡುವುದು ಸರಿಯಲವೆಂದು ರಾಯ ಯುಲಹಂಕದ ಕಡೆಗೆ ಹಿಂದಿರುಗಿದನು ಹೊಳವನಹಳ್ಳಿಯ ಪಡೆ ಅನಾಯಾಸವಾಗಿ ಮುಂದುವರಿಯಿತು. ಅಷ್ಟುಹೊತ್ತಿಗೆ ರಾಯನಿಗೆ ಕೆಂಪಸೋಮಣ್ಣನ ಸೈನ್ಯದ ಬೆಂಬಲ ದೊರೆಯಿತು. ರಾಜಧಾನಿಗೆ ಐದು ಮೈಲಿಗಳ ದೂರವಲ್ಲಿ ಯುದ್ಧ ಆರಂಭವಾಯಿತು. ಹೊಳವನಹಳ್ಳಿಯ ಸೈನಿಕರು ಸಂಬಳಕ್ಕಾಗಿ ಯುದ್ಧಮಾಡುತ್ತಿದ್ದವರು, ರಾಯನ ಪಡೆಯವರು ರಾಜನಿಗಾಗಿ ತನು ಮನಗಳನ್ನರ್ಪಿಸಿ ಸ್ವದೇಶಾಭಿಮಾನದಿಂದ ಪ್ರೇರಿತರಾಗಿ ಎದೆಗೊಟ್ಟು ನಿಂತಿದ್ದವರು. ಆದುದರಿಂದ ಮುಂಬಿಸಿಲಿಗೆ ಮಾಯವಾಗುವ ಮಂಜಿನಂತೆ ಕ್ರಮೇಣ ರಣಭೈರೇಗೌಡನ ಸೈನ್ಯ ಮಾಯವಾಯಿತು.

ಈ ಅಪಜಯದಿಂದ ಶತ್ರುಗಳು ಶಾಂತರಾಗಲಿಲ್ಲ. ಅವರ ಸೇಡು ಮತ್ತೆ ಹೆಡೆಯೆತ್ತಿತು. ಮತ್ತೆ ಅವರೆಲ್ಲರೂ ಒಟ್ಟಿಗೆ ಕಲೆತು ರಾಯನಮೇಲೆ ಬೀಳಲು ಸಮಯ ಕಾಯುತ್ತಿದ್ದರು. ಆದುದರಿಂದ ರಾಯನೂ ಸುಮ್ಮನೆ ಇರಲಿಲ್ಲ. ರಾಮಗಿರಿ, ಶಿವಗಂಗೆ ಮತ್ತು ಹುತ್ರಿ ದುರ್ಗಗಳನ್ನು ಬಲಪಡಿಸಲು ಪ್ರಾರಂಭಿಸಿದನು. ರಾಮಗಿರಿ ಯುಲಹಂಕಕ್ಕೆ ನೈಋತ್ಯದಿಕ್ಕಿನಲ್ಲಿ ಮೂವತ್ತು ಮೈಲಿಗಳ (ಈಗಿನ ರಾಮ ನಗರಕ್ಕೆ ಎರಡು ಮೈಲಿಗಳು) ದೂರದಲ್ಲಿದೆ. ಇಲ್ಲಿ ಹಿಂದೆ ಶ್ರೀರಾಮಚಂದ್ರ ಕಾಕಾಸುರನನ್ನು ಸಂಹಾರಮಾಡಿದನಂತೆ. ಇಲ್ಲಿ ರಾಯ ಬಲವಾದ ಕೋಟೆಯನ್ನು ಕಟ್ಟಿಸಿ ಬಸವಯ್ಯನನ್ನು ಅದರ ರಕ್ಷಣೆಗಾಗಿ ಇರಿಸಿದನು. ಬೆಟ್ಟದ ತುದಿಯಲ್ಲಿರುವ ದೊಡ್ಡದೊಂದು ಬಂಡೆಯ ತುದಿಯಲ್ಲಿ ನಿಂತು ಪೂರ್ವದಕಡೆ ನೋಡಿದರೆ ದೂರದಲ್ಲಿ ಬೆಂಗಳೂರು ಕಾಣಿಸುವುದು. ಇದಕ್ಕೆ ಕಾಖಾನೆ

ಬಂಡೆಯೆಂದು ಹೆಸರು. ರಾಯನ ಮದ್ದಿನ ಮನೆಯಿದ್ದುದು ಇಲ್ಲಿಯೇ. ರಾಮಗಿರಿಯಲ್ಲಿ ರಾಯನಿಗೆ ದೊಡ್ಡದೊಂದು ನಿಧಿ ಸಿಕ್ಕಿತಂತೆ. ಸೈನ್ಯವನ್ನು ಹೆಚ್ಚಿಸಲೂ, ಮದ್ದುಗುಂಡುಗಳನ್ನು ಹೆಚ್ಚು ಪ್ರಮಾಣದಲ್ಲಿ ತಯಾರುಮಾಡಲೂ ಅದರಿಂದ ಅನುಕೂಲವಾಯಿತು. ಹುತ್ರಿದುರ್ಗ ಬೆಂಗಳೂರಿಗೆ ಪಶ್ಚಿಮಕ್ಕೆ ಸುಮಾರು ೩೬ ಮೈಲಿಗಳ ದೂರದಲ್ಲಿದೆ. ಇದು ಕುಣಿಗಲ್ ತಾಲ್ಲೂಕಿಗೆ ಸೇರಿದೆ. ೩೭೧೩ ಅಡಿ ಎತ್ತರವಿರುವ ಈ ಬೆಟ್ಟದಲ್ಲಿ ಏಳುಸುತ್ತಿನ ಕೋಟೆಯಿತ್ತು. ಇಲ್ಲಿ ವೀರಭದ್ರ, ಆದಿನಾರಾಯಣ, ಆಂಜನೇಯರ ದೇವಸ್ಥಾನಗಳಿವೆ. ಬೆಟ್ಟದ ತುದಿಯಲ್ಲೊಂದು ಕಲ್ಲುಗುಂಡು ಇದೆ. ಅದಕ್ಕೆ ನಿಶಾನಿಗುಂಡು ಎಂದು ಹೆಸರು. ಅದರ ಮೇಲೆ ಕೆಂಪರಾಯನ ಧ್ವಜ ಯಾವಾಗಲೂ ಹಾರಾಡುತ್ತಿದ್ದುದರಿಂದ ಆ ಹೆಸರು ಬಂದಿತು. ಕೆಂಪಸೋಮಣ್ಣ ಆ ದುರ್ಗದ ಕಾವಲಿಗೆ ನೇಮಕವಾಗಿದ್ದನು. ಶಿವಗಂಗೆ ಬೆಟ್ಟವನ್ನು ರಾಯ ತನ್ನ ಅಧೀನದಲ್ಲಿಯೇ ಇಟ್ಟುಕೊಂಡಿದ್ದು, ತಾನೇ ಅದರ ರಕ್ಷಣಾ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದನು.

ರಾಯನ ಸೈನ್ಯದ ಜಮಾವಣೆ, ಮದ್ದುಗುಂಡುಗಳ ತಯಾರಿಕೆ, ಮತ್ತು ದುರ್ಗಗಳ ರಕ್ಷಣಾವ್ಯವಸ್ಥೆಯನ್ನು ಕೇಳಿದ ಪಾಳೆಯಗಾರರು ತಮ್ಮ ಮುಂದಿನ ಸನ್ನಾಹವನ್ನು ಹಾಗೆಯೇ ನಿಲ್ಲಿಸಿದರು. ಪ್ರತಿಯೊಬ್ಬರಿಗೂ ಭೀತಿ ದಿನೇ ದಿನೇ ಹೆಚ್ಚಾಯಿತು. ಅವರ ಜಂಘಾಬಲ ಉಡುಗಿತು. ರಾಯನ ಜತೆಯಲ್ಲಿ ಶತ್ರುತ್ವವನ್ನು ಬೆಳೆಸುವುದಕ್ಕಿಂತ ಮಿತ್ರತ್ವವನ್ನು ಬೆಳೆಸುವುದೇ ಲೇಸೆಂದುಕೊಂಡರು. ರಾಯ ಪ್ರಯತ್ನಪಟ್ಟಿದ್ದರೆ ಮೂವರ ರಾಜ್ಯವನ್ನೂ ಕಿತ್ತುಕೊಳ್ಳಬಹುದಾಗಿತ್ತು. ಆದರೆ ರಾಯನಿಗೆ ರಕ್ತದ ದಾಹವಿರಲಿಲ್ಲ. ಹೊಳವನಹಳ್ಳಿಯನ್ನಾದರೂ ಸೂರೆಮಾಡಿ ಸೇಡನ್ನು

ೀರಿಸಿಕೊಳ್ಳಬೇಕೆಂದಿದ್ದ ಬಸವಯ್ಯನನ್ನು ತಡೆದನು. ತನ್ನ
ಡೆಯವರು ನೂರಾರುಮಂದಿ ಹಿಂದಿನ ಯುದ್ಧದಲ್ಲಿ ಮಡಿದಿದ್ದುದ
್ಕಾಗಿ ತುಂಬ ಮರುಗಿದನು. ಆದುದರಿಂದ ಶತ್ರುಗಳನ್ನು ಮಿತ್ರತ್ವ
ಿಂದಲೇ ಗೆಲ್ಲಬೇಕೆಂದು ಪ್ರಯತ್ನಮಾಡಿದನು. ಮೂವರಿಗೂ
ಲೆಯನ್ನು ಬರೆದು ವೀರಣ್ಣನ ಮೂಲಕ ಕಳುಹಿಸಿದನು.
ಮಿತ್ರರೇ, ಹಿಂದೂದೇಶದಲ್ಲಿ ಮುಸಲ್ಮಾನರು ಕಾಲಿಟ್ಟಾಗಿನಿಂದ
ಂದೂ ಧರ್ಮ ದಿನೇ ದಿನೇ ಖಿಲವಾಗುತ್ತಿದೆ. ಅದರ ಉದ್ಧಾರ
್ಕಾಗಿ ವಿಜಯನಗರ ಸಂಸ್ಥಾನ ಕಂಕಣತೊಟ್ಟು ನಿಂತಿದೆ. ಆ
ಜಯನಗರದ ಅರಸುಗಳಾದರೊ ಸತ್ಯಪ್ರಿಯರು, ಧರ್ಮನಿಷ್ಠರು,
್ಯಾಯಪಕ್ಷಪಾತಿಗಳು. ಪ್ರಜೆಗಳ ಪ್ರಗತಿ, ಹಿಂದೂ ಧರ್ಮದ
ುನ್ನತಿ, ಇಷ್ಟೇ ಅವರ ಮುಂದಿರುವ ಗುರಿ. ಈ ಗುರಿಯ
ಾಧನೆಯಲ್ಲಿ ನಿರತರಾಗಿರುವ ಮಾಂಡಲಿಕರಿಗೆ ವಿಶೇಷವಾದ
್ವಾತಂತ್ರ್ಯವನ್ನಿತ್ತು ಗೌರವವನ್ನು ಸಲ್ಲಿಸುತ್ತಿದ್ದಾರೆ. ಈ ಹಿಂದೂ
ಾಜ್ಯಕ್ಕೆ ಇನ್ನೂ ಹಾನಿ ತಪ್ಪಿಲ್ಲ. ಮುಸಲ್ಮಾನರೆಲ್ಲ ಒಗ್ಗಟ್ಟಾಗು
ತ್ತಿದ್ದಾರೆ. ಇಂತಹ ವಿಷಮ ಸನ್ನಿವೇಶದಲ್ಲಿ ನಾವು ನಮ್ಮ ಕೈಲಾ
ದಷ್ಟು ಸಹಾಯವನ್ನು ನೀಡದೆ ನಾವೇ ಜ್ಞಾತಿಕಲಹದಲ್ಲಿ ತೊಡಗಿ
ದರೆ ಶತ್ರುಗಳಿಗೆ ತುತ್ತಾಗಬೆಕಾಗುತ್ತದೆ. ಆದುದರಿಂದ ಇನ್ನು
ಮುಂದಾದರೂ ಹಿಂದಿನದನ್ನೆಲ್ಲ ಮರೆತು ನಮ್ಮ ನಮ್ಮ ಕರ್ತವ್ಯ
ವನ್ನು ಪ್ರಾಮಾಣಿಕತೆಯಿಂದ ನೆರವೇರಿಸೋಣ. ಧರ್ಮಬಾಹಿ
ರನೂ ದೇಶದ್ರೋಹಿಯೂ ಆದ ಮಾನವನಿಗೆ ಇಹಪರವೆರಡೂ
ಇಲ್ಲ.

"ಹಿಂದಿನಿಂದ ಯಲಹಂಕ ನಾಡಿನ ಪ್ರಭುಗಳ ಗುರಿಯಾ
ದರು ಧರ್ಮಪರಿಪಾಲನೆಯೇ ಆಗಿದೆ. ನಮ್ಮ ಪೂರ್ವಜರ ಹೆಜ್ಜೆ
ಯನ್ನು ಹಿಂಬಾಲಿಸುವುದೇ ನನ್ನ ಕರ್ತವ್ಯವಾಗಿದೆ. ಈ ಕರ್ತವ್ಯ

ಸಾಧನೆಯಲ್ಲಿ ಎಂತಹ ಎಡರುಗಳು ಅಡ್ಡಬಂದರೂ ನಾನು
ಲೆಕ್ಕಿಸುವುದಿಲ್ಲ. ಅವರ ಮೇಲೆ ಧರ್ಮದೇವತೆಯ ದಯೆ
ಯಿದ್ದಂತಾಗಲಿ.”

ರಾಯನ ಪತ್ರವನ್ನು ಓದಿದ ಹೊಳವನಹಳ್ಳಿಯ ಗೌಡ
ಒಳಗೊಳಗೇ ನಕ್ಕನು, ಚನ್ನಪಟ್ಟಣದವನು ಉರಿದನು,—ಆದರೆ
ಅವರ ಬೇಳೆ ಬೇಯುವಂತಿರಲಿಲ್ಲ. ಇಬ್ಬರೂ ವಿನಯವನ್ನು ನಟಿಸಿ
ರಾಯನಿಗೆ ಪತ್ರವನ್ನು ಬರೆದು ಕಳುಹಿಸಿದರು. ಸೋಲೂರಿನ
ಪಾಳೆಯಗಾರನಂತೂ ಅನಂತರ ತಲೆಯೆತ್ತಲೇ ಇಲ್ಲ.

ಅಷ್ಟರಲ್ಲಿ ಅತ್ತ ಕೃಷ್ಣದೇವರಾಯನು ತೀರಿಕೊಂಡನು
ಅವನ ಮಲತಮ್ಮ ಅಚ್ಯುತರಾಯ ೧೫೨೯ರಲ್ಲಿ ಪಟ್ಟಾಭಿಷಿಕ್ತನಾ
ದನು. ಯಲಹಂಕನಾಡಿನ ಪ್ರಭುಗಳ ಹಿರಿಮೆ ಅವನಿಗೂ ಅರಿವಾ
ಗಿತ್ತು. ಆದುದರಿಂದ ಇವರ ವಿಷಯದಲ್ಲಿ ಅವನೂ ತನ್ನ ಅಣ್ಣ
ನಂತೆಯೇ ನಡೆದುಕೊಂಡನು. ಪಟ್ಟಾಭಿಷೇಕಕ್ಕೆ ರಾಯನೂ ಆಹ್ವಾ
ನಿತನಾಗಿದ್ದನು. ವಿಜಯನಗರದ ರಾಜರಿಗೆ ಮುಖತಃ ಗೌರವವನ್ನು
ಅರ್ಪಿಸಲು ಅದೇ ಸುಸಮಯವಾಗಿತ್ತು. ಹೊಳವನಹಳ್ಳಿ
ಸೋಲೂರುಗಳ ಪಾಳೆಯಗಾರರ ಸಮೇತ ರಾಯ ಹೊರಟನು
ಹಿರಿಯ ಮಾಂಡಲಿಕರಂತೆಯೇ ರಾಯನೂ ಸನ್ಮಾನಿತನಾದನು
ಅಚ್ಯುತರಾಯ ರಾಯನನ್ನು ಕರೆಸಿಕೊಂಡು, ಅವನ ಪ್ರತಾಪ
ವನ್ನೂ, ಅವನ ಧರ್ಮಬುದ್ಧಿಯನ್ನೂ ಕೊಂಡಾಡಿದನು. ವಿಜಯ
ನಗರ ಸಾಮ್ರಾಜ್ಯಕ್ಕೆ ಕಂಟಕಪ್ರಾಯರಾಗಿದ್ದ ಪಾಳೆಯಗಾರರನ್ನು
ಹದ್ದಿನಲ್ಲಿಟ್ಟದ್ದುದಕ್ಕಾಗಿ ರಾಯನನ್ನು ವಂದಿಸಿದನು. ರಾಯ ನ
ರದ ಶ್ರೀಮಂತ ನಾಗರಿಕತೆಯನ್ನು ಸವಿಸವಿದು ಸಂತುಷ್ಟನಾ
ಹಿಂತಿರುಗಿದನು.

೪

ಹಿರಿಯರ ಕನಸೇ ಲೋಕದ ನನಸು

೧೫೩೭ ನೆಯ ವರ್ಷದ ಗ್ರೀಷ್ಮಋತುವಿನಲ್ಲೊಂದು ದಿನ. ಳುದಿಂಗಳಿನಲ್ಲಿಯೂ ಸಹ ಬೇಸಿಗೆಯ ತಾಪ ಆರದೆ ರಾಯನಿಗೆ ಾತ್ರಿ ಸರಿಯಾಗಿ ನಿದ್ದೆ ಹತ್ತಿರಲಿಲ್ಲ. ಜತೆಗೆ ಒಂದರ ಮೇಲೊಂದು ನಸು. ಆ ಕನಸುಗಳೋ ಅಸ್ಪಷ್ಟ, ಅನಿರ್ವಚನೀಯ. ನಿದ್ದೆ ಲ್ಲದಿದ್ದರೂ ಎಂದಿನಂತೆ ಕೋಳಿಕೂಗಿನೊಡನೆ ಹಾಸುಗೆ ುಂದೆದ್ದು ಪ್ರಾತಃಕಾಲದ ವಿಧಿಗಳನ್ನು ಮುಗಿಸಿದನು. ಭೈರವಾ ಯ ಮತ್ತು ಕೆಂಪಮ್ಮನ ಗುಡಿಗಳಿಗೆ ಹೋಗಿ ಭಕ್ತಿಯ ಕಾಣಿಕೆ ುನ್ನು ಅರ್ಪಿಸಿದನು. ಅಲ್ಲಿಂದ ಉದ್ಯಾನವನದ ಕೊಪ್ಪಲಿಗೆ ಡೆದು ಜಿಂಕೆಯ ಮರಿಗೆ ಮುತ್ತಿಟ್ಟು, ಪಂಜರದ ಗಿಳಿಯ ಾಯಿಗೆ ಬಾಳೆಯ ತೊಳೆಯನ್ನಿಟ್ಟು, ಗೋಶಾಲೆಗೆ ಹೋಗಿ ಕರು ನ್ನು ಮುಂಡಾಡಿ ಬಂದನು. ಪದ್ಧತಿಯಂತೆ ಆಡಳಿತಕ್ಕೆ ಂಬಂಧಿಸಿದ ಕಡತಗಳನ್ನು ತಿರುವಿಹಾಕಿ ಪತ್ರವ್ಯವಹಾರಗಳನ್ನು ುಗಿಸಿದನು. ಅಲ್ಲಿಂದ ಅಂತಃಪುರಕ್ಕೆ ಹೋಗಿ ಸೊಸೆಯರನ್ನೂ ಾವಿಸಿಯರನ್ನೂ ಮಾತಾಡಿಸಿಕೊಂಡು, ಅವರ ಹಸುಗೂಸುಗಳಿಗೆ ಚಗುಳಿಯಿಟ್ಟು ತನ್ನ ಕೋಣೆಗೆ ಹಿಂತಿರುಗುವ ಹೊತ್ತಿಗೆ ಅಲ್ಲಿ ೀರಣ್ಣ ಸಂಚಾರಯೋಗ್ಯವಾದ ಉಡುಪುಗಳನ್ನು ಧರಿಸಿ ಕಾದಿ ನು. ಅವನ ಜತೆಯಲ್ಲಿ ತಿಂಡಿ ತಿಂದನು. ತಾನೂ ಅವನಂತೆಯೇ ಲೆಗೆ ರೇಷ್ಮೆಯ ಕುಲಾವಿಯನ್ನೂ, ಮೈಗೆ ರೇಷ್ಮೆಯ ಅಂಗಿ ುನ್ನೂ, ನಡುವಿಗೆ ಕಾಸೆಯನ್ನೂ ತೊಟ್ಟು ಸಿದ್ಧನಾದನು. ಅಷ್ಟ ಲ್ಲಿ ಹೊರಗಡೆ ಎರಡು ತೇಜಿಗಳು ಅಣಿಯಾಗಿ ನಿಂತಿದ್ದುವು. ಬ್ಬರೂ ಊರಿಗೆ ದಕ್ಷಿಣಾಭಿಮುಖವಾಗಿ ಹೊರಟರು.

ಹಿಂದಿನ ವರ್ಷಗಳಿಗಿಂತ ಆ ವರ್ಷದ ಗ್ರೀಷ್ಮ ಋತುವಿನ ಬೇಗೆ ಅಧಿಕವಾಗಿತ್ತು. ಕೆರೆಕುಂಟೆಗಳಲ್ಲಿ ನೀರೇ ಇರಲಿಲ್ಲ. ಬೆಳಗಿನ ತಂಪೊತ್ತಿನಲ್ಲಿಯೂ ಗಾಳಿಯಲ್ಲಿ ಬಿಸುಪು ಕಾಣುತ್ತಿತ್ತೇ ಹೊರತು ಶೈತ್ಯವಿರಲಿಲ್ಲ. ಯಾವ ಗಿಡಗೆಂಡೆಗಳನ್ನು ನೋಡಿದರು ಬಾಡಿ ಹೋಗಿದ್ದುವು. ದಾರಿಯಲ್ಲಿ ಉದ್ದಕ್ಕೂ ಒಣಗಿದ ಹುಲ್ಲು ನೆಲ್ಲು ಹೊಟ್ಟನಂತೆ ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು. ಬಡಕಲಾದ ದನಕರು ಗಳು ತೂರಾಡಿ ಕೊಂಡು ಒಂದು ಮರದ ಬುಡದಿಂದ ಮತ್ತೊಂದು ಮರದ ಬುಡದ ಹತ್ತಿರ ಹೋಗಿ ತರಗೆಲೆಗಳನ್ನು ಆರಿಸಿಕೊಂಡು ತಿನ್ನುತ್ತಿದ್ದುವು. ಗದ್ದೆ ಹೊಲಗಳಿಗೆ ಹಾಕಿದ್ದ ಬೇಲಿಗೆ ಒರಲೆ ಹಿಡಿದಿತ್ತು. ಎಲ್ಲಿಯೂ ಜನರ ಸಂಚಾರವಿಲ್ಲ. ಹಕ್ಕಿಗಳ ಹಾರಾಟ ವಿಲ್ಲ. ರಾಯ ಮುಂದೆ ವೀರಣ್ಣ ಹಿಂದೆ, ಇಬ್ಬರೂ ಮಾತಾಡಿ ಕೊಳ್ಳುತ್ತ ಎಂಟುಹತ್ತು ಮೈಲಿಗಳು ಪ್ರಯಾಣಮಾಡಿದರು. ಅಲ್ಲಿ ಹಠಾತ್ತನೆ ಕುದುರೆಗಳ ಕಡಿವಾಣಗಳನ್ನು ಎಳೆದು ನಿಲ್ಲಿಸಿದರು. ಏನೋ ಮನಸ್ಸಿಗೆ ಉಲ್ಲಾಸವುಂಟಾಯಿತು. ಸುತ್ತಲೂ ಕಾಡು. ಕಣ್ದಿಟ್ಟ ಹರಿಯುವ ತನಕ ಮರಗಳ ಗುಂಪು. ಮತ್ತೆ ಕಡಿವಾಣ ಗಳನ್ನು ಸಡಿಲಿಸಿದರು. ಕುದುರೆಗಳು ಮುಂದೆ ಹಾದುವು. ತಣ್ಣೆ ಲರು ತೀಡುತ್ತಿತ್ತು. ಬಿಸಿಲು ಏರಿದ್ದರೂ ಹೆಚ್ಚು ದಣಿವು ಕಾಣು ತ್ತಿರಲಿಲ್ಲ. ಅಲ್ಲಲ್ಲೆ ಮಿಗಗಳು ಓಡಾಡುತ್ತಿದ್ದುವು. ಹಕ್ಕಿಗಳು ಎಲೆ ಗಳ ಮರೆಯಲ್ಲಿ ಕುಳಿತು ಚಿಲಿಪಿಲಿಗುಟ್ಟುತ್ತಿದ್ದುವು. ಮುಂದೊಂದು ಬೆಳ್ನೀರಿನ ಕೊಳ ಕಾಣಿಸಿತು. ಅಲ್ಲಿಯೇ ಸಣ್ಣದೊಂದು ಹಳ್ಳಿ. ಅದೇ ಶಿವನಸಮುದ್ರ. ಹಳ್ಳಿ ಸಣ್ಣದಾದರೂ, ಅಲ್ಲಿ ಶ್ರೀಮಂತಿಕೆಯ ಸುಳಿವು ಕಾಣದಿದ್ದರೂ, ಏನೋ ಒಂದು ವಿಶೇಷತೆಯಿಂದ ಕೂಡಿ ದ್ದಂತೆ ಭಾಸವಾಗುತ್ತಿತ್ತು. ಹೊತ್ತು ನಡುನೆತ್ತಿಯ ಮೇಲೆ ಬರುವುದರಲ್ಲಿತ್ತು. ಆ ಸುತ್ತಮುತ್ತಣ ರಮ್ಯದೃಶ್ಯಕ್ಕೆ ಅವರು

ಮನಸೋತರು, ಅಲ್ಲಿಯ ತಂಪಿಗೆ ಬಗೆಗೊಟ್ಟರು ; ಊರು ಊಟ
ಗಳನ್ನು ಮರೆತರು. ಹಿಂದೆ ಎಷ್ಟೋ ಸಾರಿ ಆ ಪ್ರದೇಶವಲ್ಲಿ ರಾಯ
ಸುತ್ತಾಡಿದ್ದನು. ಆದರೆ ಅಂದಿನಂತೆ ಎಂದೂ ಅದು ಅವನ ಮನ
ಸ್ಸನ್ನು ಸೆಳೆದಿರಲ್ಲಿಲ್ಲ. ಕುದುರೆಗಳನ್ನು ಬಿಟ್ಟು ಕಾಲುವೆಯೊಂದರ
ಜೊಂಗೆಯ ಮರದಡಿ ಇಬ್ಬರೂ ಕುಳಿತರು.

ರಾಯನ ಮನಸ್ಸಿನಲ್ಲಿ ಭಾವಗಳು ತರಂಗತರಂಗವಾಗಿ
ಮೂಡುತ್ತಿದ್ದವು. ಕಳೆದಿರುಳ ಕನಸುಗಳು ಅಸ್ಪಷ್ಟವಾಗಿ
ಸ್ಮೃತಿಗೆ ಗೋಚರವಾಗುತ್ತಿದ್ದವು. ಅವನ ಮನಸ್ಸಿನಲ್ಲಿ ಶಾಂತಿ
ಇದ್ದಂತೆಯೂ ಇಲ್ಲ, ಇಲ್ಲದಂತೆಯೂ ಇಲ್ಲ. ಸ್ವಲ್ಪ ಹೊತ್ತು
ಯಾರೂ ಮಾತಾಡಲಿಲ್ಲ. ರಾಯ ಕಾಲುನೀಡಿ ಮೊಳಕೈ ನೆಲ
ಕ್ಕೂರಿ ಒರಗಿದನು. ಭೃತ್ಯಭರ್ತೃಭಾವದ ಸಂಬಂಧವನ್ನು ಚೆನ್ನಾಗಿ
ಅರಿತಿದ್ದ ವೀರಣ್ಣ ದೂರ ಕುಳಿತಿದ್ದನು. ಒಮ್ಮೆ ರಾಯನ ಚಿಂತೆ
ಮುಸುಕಿದ ಮುಖದ ಕಡೆಗೆ, ಮತ್ತೊಮ್ಮೆ ತಿಳಿಯಾಗಸದ ಕಡೆಗೆ
ಅವನ ಕಣ್ಣುಗಳು ಅಲೆಯುತ್ತಿದ್ದವು.

"ಏನು ವೀರಣ್ಣ, ಎಂದಿನವರೆಗೆ ನೀನೂ ನಾನೂ ಬೇರೆ
ಬೇರೆಯಾಗಿಯೇ ಉಳಿದಿರುವುದು"

"ಏಕೆ ಒಡೆಯ"

"ಚಿಕ್ಕಂದಿನಿಂದ ಜತೆಯಲ್ಲಿ ಓದಿ ಜತೆಯಲ್ಲಿ ಮಲಗಿ ಜತೆ
ಯಲ್ಲಿ ಬೆಳೆದಿದ್ದರೂ ನಿನಗೆ ನನ್ನ ಮರ್ಜಿ ಗೊತ್ತಾಗಲಿಲ್ಲವೆ.
ನನ್ನಲ್ಲಿ ನಿನಗೇಕೆ ಭೇದಭಾವನೆ, ಭೀತಿ."

"ದೇಹಕ್ಕೆ ತಲೆಯೆಷ್ಟು ಪ್ರಧಾನವೋ ಪಾದವೂ ಅಷ್ಟೇ
ಪ್ರಧಾನ, ದಿಟ, ಒಡೆಯ. ಆದರೆ ಅವು ತಮ್ಮ ತಮ್ಮ ಸ್ಥಾನದಲ್ಲಿರ
ಬೇಕು. ಹಾಗೆಂದಮೇಲೆ ಅವುಗಳ ಮೈತ್ರಿ ಹೋದೀತೇ."

"ವೀರಣ್ಣ, ಶೌರ್ಯದಲ್ಲಿ ಮಾತ್ರವೇ ಅಲ್ಲ, ಮಾತಿನಲ್ಲಿಯೂ ನನ್ನನ್ನು ಮೀರಿಸುತ್ತೀಯೆ. ಆದರೆ ಮಿತ್ರತ್ವ ಮಾತನ್ನು ಮೀರಿದುದು."

"ಎಲ್ಲವೂ ತಮ್ಮ ಹರಕೆ, ನನ್ನ ಪುಣ್ಯ, ಒಡೆಯ."

"ಹತ್ತಿರಕ್ಕೆ ಬಾ, ವೀರಣ್ಣ. ನನ್ನ ತಲೆಗೆ ನಿನ್ನ ತೊಡೆ ಊರಿಕೊಡು." ವೀರಣ್ಣ ಹಾಗೆಯೇ ಮಾಡಿದನು. ಮತ್ತೆ ರಾಯ ಅವನನ್ನು ಕುರಿತು?

"ನನ್ನ ಜೀವನದಲ್ಲಿ ಏನೋ ಅರಕೆ, ಏನೋ ಮುಕ್ಕು ಕಾಣುತಿದೆ, ಗೆಳೆಯ."

"ನಿಮ್ಮಂತಹ ಭಾಗ್ಯಶಾಲಿ ಯಾರಿದ್ದಾರೆ. ಪ್ರಜೆಗಳೋ ಸಜ್ಜನರು, ತಮ್ಮಂದಿರೋ ಲಕ್ಷ್ಮಣನಂಥವರು, ಮಕ್ಕಳೋ ಅಭಿಮನ್ಯುವಿನಂಥವರು. ಜತೆಗೆ ಎಲ್ಲೆಲ್ಲೂ ಬೀಗುತ್ತಿರುವ ಕೀರ್ತಿ."

"ಹೌದು ವೀರಣ್ಣ. ಎಲ್ಲ ಇದೆ—ತಮ್ಮಂದಿರು, ಅನುಕೂಲೆಯಾದ ಸತಿ, ಉತ್ತಮರಾದ ಮಕ್ಕಳು, ಮನೆಯನ್ನೆಲ್ಲ ಬೆಳಕುಮಾಡುತ್ತಿರುವ ಸೊಸೆಯರು, ಮೇಲಾಗಿ ಚಕ್ರವರ್ತಿಯ ಅನುಗ್ರಹ—ಎಲ್ಲವೂ ಇದೆ. ನನ್ನ ಪುಣ್ಯಕ್ಕೆ ಎಣೆಯೇ ಇಲ್ಲ. ಆದರೂ ಏನೋ ಅರಕೆ, ಕಾಣದ ಕೊರತೆ ಎದೆಯನ್ನು ಬಾಧಿಸುತ್ತಿದೆ. ನನ್ನ ಬಾಳಿನ ಕೆಲಸ ಮುಗಿದಿಲ್ಲವೆಂದು ಕಾಣುತ್ತಿದೆ."

ಹಾಗೆಯೇ ರಾಯ ಕಣ್ಮುಚ್ಚಿದನು. ಗೊರಕೆ ಆರಂಭವಾಯಿತು. ವೀರಣ್ಣ ಅವನ ಮುಖವನ್ನೇ ನೋಡುತ್ತಿದ್ದನು. ಅಂತಹ ಅವಕಾಶ ಅವನಿಗೆ ಎಂದು ದೊರಕಿರಲಿಲ್ಲ. ಆಹ, ಎಂತಹ ತೇಜಸ್ವಿ ಅವನು! ಪುನಃ ಪುನಃ ಎವೆಯಿಕ್ಕದೆ ನೋಡಿದನು. ಅವನ ಮುಖದಲ್ಲಿ ಏನೋ ಬದಲಾವಣೆಯಾಗುತ್ತಿತ್ತು. ಹಿರಿಯ ವ್ಯಕ್ತಿಗಳು ನಿದ್ರಿಸುವಾಗಲೂ ಎಚ್ಚತ್ತಿರುತ್ತಾರೆ. ವಿಶ್ವಶಕ್ತಿಯೂ

ಅವರ ತಪಶ್ಶಕ್ತಿಗೆ ಮಣಿಯುತ್ತದೆ; ಅಥವಾ ಒಂದು ಇನ್ನೊಂದಾಗುತ್ತದೆ. ಅದು ವ್ಯಕ್ತಗೊಳ್ಳುವ ರೀತಿ ಆಶ್ಚರ್ಯ ಕರವಾದುದು; ಅದು ತಾಳುವ ಆಕಾರಗಳು ಅನಂತ; ಅದು ಕನಸಿನ ಆಕಾರವನ್ನು ತಾಳಬಹುದು. ಅಂತರಂಗಧ್ವನಿಯಾಗಿ ವ್ಯಕ್ತಗೊಳ್ಳಬಹುದು, ಮಿತ್ರವಾಣಿಯಾಗಿ ಗೋಚರವಾಗಬಹುದು. ನಿದ್ರಾದೇವಿಯ ಪ್ರಿಯಸಖಿ ಸ್ವಪ್ನಮಾಯೆ ಕೆಂಪರಾಯನ ಅಂತ ರಂಗವನ್ನು ಪ್ರವೇಶಿಸಿದಳು............ವೀರಣ್ಣ ಮೊದಲಿನಂತೆಯೇ ಅವನ ಮುಖವನ್ನು ನೋಡುತ್ತಿದ್ದನು. ನೋಡುತ್ತಿದ್ದ ಹಾಗೆಯೇ 'ಆ್ಣ' ಎಂದು ರಾಯ ಕಣ್ಣರಳಿಸಿದನು.

"ಏನು ಒಡೆಯ, ಏನು ಕಂಡಿರಿ."

"ಕನಸು"

"ಕನಸೇ. ಅದಕ್ಕೇಕೆ ಜಗ್ಗಿದಿರಿ"

"ಅಹುದು ಕನಸು. ರಾತ್ರಿಯೂ ಕನಸುಗಳಿಂದ ನಿದ್ರೆ ಬರಲಿಲ್ಲ. ಆಗ ಕಂಡ ಅಸ್ಪಷ್ಟ ಸ್ವಪ್ನಗಳು ಈಗ ಸ್ಪಷ್ಟವಾಗಿ ಗೋಚರವಾದುವು. ವೀರಣ್ಣ, ನಾನೆಂದೂ ಅಂಥವನ್ನು ಕಂಡು ದಿಲ್ಲ. ಅಗೋ ಆ ಆಗಸದಿಂದ ಅಣಿಮಾದಿ ಅಷ್ಟ ಸಿದ್ಧಿಗಳು ಕೈಂಕರ್ಯವೆಸಗುತ್ತಿರಲು, ಕಾಮಧೇನು ಕಲ್ಪವೃಕ್ಷಗಳು ಚಾಮರ ಬೀಸುತ್ತಿರಲು, ಸರ್ವಾಲಂಕಾರ ಭೂಷಿತೆಯಾದ ಭಾಗ್ಯಲಕ್ಷ್ಮಿ ಮುಗುಳ್ನಗೆ ಬೀರುತ್ತ ನನ್ನೆಡೆಗೆ ಬಂದಳು. ಅವಳ ಹಿಂದೆಯೇ ದೇವೇಂದ್ರಾದಿ ಅಷ್ಟದಿಕ್ಪಾಲಕರ ಮೊತ್ತ, ರಂಭೆ ಊರ್ವಶೀ ಮೊದಲಾದ ದೇವಸ್ತ್ರೀಯರ ಗಡಣ ಇಳಿದು ಬಂದಿತು. ಆ ಲಕ್ಷ್ಮಿ ಸುಪ್ರಸನ್ನ ವದನೆಯಾಗಿ ನನ್ನ ಕಡೆ ನೋಡಿದಳು. ದೇವತೆಗಳೆಲ್ಲ ಅವಳ ಕಾಲ ಬಳಿ ನಿಂತು ಅಂಗಲಾಚಿ ಬೇಡಿಕೊಳ್ಳುತ್ತಿದ್ದರು. ಅವಳು ನನ್ನನ್ನೆತ್ತಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡಳು.

ಏನೇನೋ ಉಸುರಿದಳು; ಎಲ್ಲವೂ ಅನಿರ್ವಚನೀಯ, ಆದರೆ ಹೃದಯವೇದ್ಯ, ಕಡೆಗೆ ಈ ಸಲದಲ್ಲಿಯೇ ಅಂತರ್ಧಾನಳಾದಳು. ದೇವತೆಗಳೆಲ್ಲ ನನ್ನನ್ನು ಸುತ್ತುವರಿದರು, ದುರುದುರನೆ ನೋಡಿದರು, ದಿಗಿಲಾಯಿತು. ಕಣ್ಬಿಟ್ಟೆನು ......ಮತ್ತೆ ಮೊದಲಿನಂತೆ ಈ ಕಾನನ, ಈ ಕಾಲುವೆ, ಈ ಕುದುರೆಗಳು, ಈ ನೀನು ಇಷ್ಟೆ" ಎಂದನು.

"ಈ ಸ್ವಪ್ನದಲ್ಲಿ ಏನೋ ಮಹದ್ವಿಷಯ ಅಡಗಿರುವಂತೆ ಕಾಣುತ್ತದೆ, ಒಡೆಯ."

"ನನಗೂ ಏನೋ ಅರಕೆ ಕಾಣುತ್ತಿದೆ"

"ಅರಮನೆಯಲ್ಲಿ ತಾಯಿಯವರು ಊಟಕ್ಕಾಗಿ ಕಾಯುತ್ತಿರುವರಲ್ಲವೆ, ಒಡೆಯ."

"ಕಾಯುವುದೇ ಅವರ ಬಾಳುವೆಯಾಗಿದೆ. ವೀರಣ್ಣ, ಎಷ್ಟು ಪವಿತ್ರವಾದುದು ಸ್ತ್ರೀ ಜನ್ಮ. ಸಹನೆ ಸ್ನೇಹವಾತ್ಸಲ್ಯಗಳನ್ನು ಎರಕ ಹೊಯ್ದು ಅವರನ್ನು ಬ್ರಹ್ಮ ನಿರ್ಮಿಸಿರುವ ಹಾಗೆ ಕಾಣುತ್ತದೆ."

"ತಾಯಿ ಚೆನ್ನಾಂಬೆಯವರ ವಿಷಯದಲ್ಲಂತು ನಿಜ ಒಡೆಯ."

"ಆಹ" (ನಿಟ್ಟುಸಿರು ಬಿಡುವನು] 'ಮಾತೃಶ್ರೀಯವರಿಗೆ ಯಾರು ತಾನೇ ವಾತ್ಸಲ್ಯದಲ್ಲಿ ಹೊಯ್‌ಕೈ. ಅವರಿಗೆ ಎಣೆಯಾದ ಸೊಸೆ ಈ ಚೆನ್ನಾಂಬೆ. ನಾನು ಮನೆ ಬಿಟ್ಟು ಹೊರಗೆ ಹೋದರೆ ಇಬ್ಬರಿಗೂ ಊಟವಿಲ್ಲ; ಯುದ್ಧಕ್ಕೆ ಹೊರಟರಂತು ನಿರಶನವ್ರತ.

"ಮಾತೃಶ್ರೀಯವರೂ ಭಾಗ್ಯಶಾಲಿಗಳು ಅಂತಹ ಸೊಸೆಯನ್ನು ಪಡೆದು. ಕೊನೆಯತನಕ ಸೇವೆ ಮಾಡಿಸಿಕೊಂಡರು."

"ಆದರೆ, ವೀರಣ್ಣ, ನಾನಾದರೋ ರಾಜಕೀಯ ಹವ್ಯಾಸಗಳ

ಗೊಂದಲದಲ್ಲಿ ಸಿಕ್ಕಿ ಚೆನ್ನಾಂಬೆಯನ್ನು ಸರಿಯಾಗಿ ನೋಡಿಕೊಳ್ಳ ಲಿಲ್ಲ.''

ಹೀಗೆ ಇಬ್ಬರೂ ಮಾತಾಡುತ್ತ ತೇಜಿಗಳನ್ನೇರಿ ನಗರಾಭಿ ಮುಖವಾಗಿ ಹೊರಟರು.

"ವೀರಣ್ಣ, ಕನಸಿನಲ್ಲಿ ಕಂಡ ಆ ಭಾಗ್ಯಲಕ್ಷ್ಮಿಯನ್ನು ಮರೆ ಯಲಾರೆನಲ್ಲ.''

"ನಾನಾಗಲೇ ಹೇಳಲಿಲ್ಲವೆ, ಒಡೆಯ, ಏನೋ ಮಹ ತ್ಕಾರ್ಯ ಆಗಬೇಕಾಗಿದೆ ಎಂದು''

"ಅದಂತಿರಲಿ—ಆ ಭಾಗ್ಯಲಕ್ಷ್ಮಿ—ನನ್ನ ಹಿರಿಯ ಸೊಸೆ ಲಕ್ಷ್ಮಮ್ಮ—ಇಬ್ಬರೂ ಒಂದೆ''

"ಅಹುದು.''

"ಮಹತಾಯಿ;..........ಅವಳಿಗೆಣೆಯಾದ ಸ್ತ್ರೀರತ್ನವುಂಟೆ. ಅವಳನ್ನು ನೋಡಿದಾಗಲೆಲ್ಲ ನನ್ನ ಹೃದಯದಲ್ಲಿ ಅಪೂರ್ವವಾದ ಆದರ, ವಿಶೇಷವಾದ ಗೌರವ ಮೂಡುತ್ತದೆ. ಊರಲ್ಲಿಲ್ಲದಾಗ ಅವಳಿಗಾಗಿ ನನ್ನ ಎದೆ ಕಾತರಿಸುತ್ತದೆ; ನನ್ನ ಕಣ್ಣಲ್ಲಿ ನೀರು ಮಡುಗಟ್ಟುತ್ತದೆ; ನನ್ನ ಗಂಡೆದೆ ನೀರಾಗಿ ಕರಗುತ್ತದೆ. [ತುಸು ಕಾಲ ಕಡಿವಾಣವನ್ನೆಳೆದು ಕುದುರೆಯನ್ನು ನಿಲ್ಲಿಸುವನು. ಆರೆಕ್ಷಣ ಮೌನವಾಗಿದ್ದು ಮತ್ತೆ] "ಅವಳನ್ನು ನೋಡಿದಾಗಲೆಲ್ಲ ಸತ್ತ ತಾಯಿಯ ನೆನಪಾಗುತ್ತದೆ. ಆ ನನ್ನ ತಾಯಿಯು ಮನೆಯ ಹೆಣ್ಣು ಮಕ್ಕಳೆಲ್ಲ ಒಂದೆಯೇ. ಒಂದು ದಿನ ಅವಳನ್ನು ನೋಡದಿದ್ದರೆ ಮನಸ್ಸಿಗೆ ವ್ಯಥೆಯಾಗುತ್ತದೆ.

............ವೀರಣ್ಣ, ಹೊತ್ತಾಯ್ತು ನಡೆ, ಆ ತಾಯಿ ಕಾದು ಕೊಂಡಿದ್ದಾಳೆ.''

ಹೀಗೆನ್ನುತ್ತ ರಾಯ ಕುದುರೆಯನ್ನು ದೌಡಾಯಿಸಿದನು;

ವೀರಣ್ಣ ಹಿಂಬಾಲಿಸಿದನು. ಮತ್ತೆ ರಾಯ ಮಾತು ತೆಗೆದನು.

"ಆಳುಗಳು ನನಗೆ ಊಟ ಬಡಿಸಿದರೆ ಅವಳಿಗೆ ತೃಪ್ತಿಯಿಲ್ಲ. ನಾನು ಬೇಡವೆಂದರೆ ಬಿಡಳು, ಆ ಪುಣ್ಯವಂತೆಯೇ ಬರುತ್ತಾಳೆ."

"ರಾಜನ ಸೊಸೆ!"

"ಅವಳು ಬರಬಾರದೆಂದು ನಾನು ಹೇಳುತ್ತೇನೆ. ಅದಕ್ಕೆ ಅವಳು ಕೊಡುವ ಉತ್ತರವಾದರೂ ಏನು. 'ಅಪರಿಚಿತರಿಗೆ, ದೂರದವರಿಗೆ—ಅಥವಾ ಪ್ರಜೆಗಳಿಗೆ—ನಾನು ರಾಜನ ಸೊಸೆ. ತಮಗಂತು ನಾನು ಇತರರಂತೆ ಸೊಸೆ. ನಿಮ್ಮ ಸೇವೆಯನ್ನು ಮಾಡುವ ಅವಕಾಶವನ್ನು—ಆ ಪರಮ ಭಾಗ್ಯವನ್ನು ಮಾತ್ರ—ತಪ್ಪಿಸಬೇಡಿ. ನನ್ನನ್ನು ಪುಣ್ಯವಂತಳನ್ನಾಗಿ ಮಾಡಿ.'............"

"ಅಹುದು, ಒಡೆಯ ಕೆಲವರಿಗಂತು ಸಂಸಾರದ ಮಾಧುರ್ಯವೇ ಲಭಿಸುವುದಿಲ್ಲ; ಏಕೆಂದರೆ ಅವರಿಗೆ ಸ್ವಲ್ಪ ಬಿಗುಮಾನ ಇರುತ್ತದೆ, ಬಾಳಿನಲ್ಲಿ ಮತ್ತು ಸಮಾಜದಲ್ಲಿ."

ಮತ್ತೆ ಅವರಿಬ್ಬರ ನಡುವೆ ನಿಶ್ಶಬ್ದತೆ ತಾಂಡವವಾಡಿತು. ಇಡೀ ಪ್ರಪಂಚವೆ ನೀರವವಾಗಿತ್ತು. ಮೇಲೆ ಮಾರ್ತಾಂಡನ ತಾಪ ಅಧಿಕವಾಗಿತ್ತು. ಸ್ವಲ್ಪ ಹೊತ್ತಿನಲ್ಲಿಯೇ ಅವರಿಬ್ಬರೂ ಯಲಹಂಕದ ಅರಮನೆಯ ಮುಂಭಾಗದಲ್ಲಿದ್ದರು. ರಾಯ ತಟಕ್ಕನೆ ಕುದುರೆಯಿಂದಿಳಿದು ಒಳಗಡೆ ನುಗ್ಗುವುದರಲ್ಲಿದ್ದನು. ವೀರಣ್ಣ ತಾನು ಮನೆಗೆ ಹೊರಡಲು ಅಪ್ಪಣೆ ಕೇಳಿದನು. ತನ್ನನ್ನು ಹಿಂಬಾಲಿಸುವಂತೆ ರಾಯ ಕೈಬೀಸಿದನು. ರಾಯ ತನ್ನ ಕೋಣೆಯೊಳಗೆ ಪೋಷಾಕನ್ನು ಕಳಚಿಟ್ಟು ಊಟದ ಮನೆಯ ಕಡೆಗೆ ಹೊರಟನು. ವೀರಣ್ಣ ಹಿಂಬಾಲಿಸಿದನು. ಬಾಗಿಲಲ್ಲಿಯೇ ಕುಳಿತಿದ್ದ ಚೆನ್ನಾಂಬೆ ಲಕ್ಷ್ಮಮ್ಮರು ಎದ್ದುನಿಂತರು. ಅವರು ಇನ್ನೂ ಊಟಮಾಡಿರಲಿಲ್ಲವೆಂದು ಅವರ ಬಾಡಿದ ಮುಖ ಹೇಳು

ತ್ತಿತ್ತು. ಕೂಡಲೇ ಲಕ್ಷ್ಮಮ್ಮ ನೀರು ತಂದಳು. ರಾಯ ಅರೆಚಣ ಲಕ್ಷ್ಮಮ್ಮನನ್ನೇ ದೈನ್ಯದೃಷ್ಟಿಯಿಂದ ನೋಡಿದನು. ಲಕ್ಷ್ಮಮ್ಮ ತಲೆಯೆತ್ತಿ ನೋಡಲಿಲ್ಲ. ರಾಯ ಕೈಕಾಲು ತೊಳೆದುಕೊಂಡು ಅವಳ ಹಿಂದೆಯೇ ಹೋದನು. "ತಾಯಿ" ಸೊಸೆ ಮಾತಾಡಲಿಲ್ಲ. "ಅಮ್ಮ'. ಹತ್ತಿರ ಬಂದು ನಿಂತಳು. ಒಂದು ಕೈಯಿಂದ ಗಲ್ಲವನ್ನು ಸ್ವಲ್ಪ ಸವರಿ, ಮತ್ತೊಂದರಿಂದ ತಲೆಯನ್ನು ನೇವರಿಸಿ ಪುನಃ "ತಾಯಿ" ಎಂದನು

"ಅಣ್ಣ"

"ಇನ್ನೂ ನಿಮಗೆ ಊಟ ಆಗಿಲ್ಲವೆ."

ಮೌನದಿಂದ ಲಕ್ಷ್ಮಮ್ಮ ಮಾವನ ಪಾದಕ್ಕೆ ನಮಸ್ಕರಿಸಿದಳು. ಮಾವ ತಲೆ ತಗ್ಗಿಸಿದನು. ವೀರಣ್ಣ ಮನಸ್ಸಿನಲ್ಲಿಯೆ ಅವಳಿಗೆ ನಮಸ್ಕರಿಸಿದನು............

ಊಟ ಮುಗಿಯಿತು. ದೊರೆಯ ಅಪ್ಪಣೆಯನ್ನು ಪಡೆದು ವೀರಣ್ಣ ತನ್ನ ಗೃಹಾಭಿಮುಖವಾಗಿ ಹೊರಟನು. ದೊರೆ ಏಕಾಂತ ಗೃಹವನ್ನು ಸೇರಿದನು.

ರಾಯನಿಗೆ ಶಾಂತಿಯಿರಲಿಲ್ಲ. ನಾನಾ ಆಲೋಚನೆಗಳು ಅವನ ಬಗೆಯನ್ನು ಕದಡಿದುವು. ಸ್ವಲ್ಪ ಹೊತ್ತಿನಲ್ಲಿಯೇ ನಿದ್ದೆಯ ಜೊಂಪು ಹತ್ತಿತು. ಪುನಃ ಸ್ವಪ್ನಸುಂದರಿಯ ಪ್ರೇಮಜಾಲ-ಮಾಯಾಜಾಲವಲ್ಲ. ಅದೇ ಭಾಗ್ಯಲಕ್ಷ್ಮಿ....ಅದೇ ದೇವತೆಗಳು ....ಕಣ್ತೆರೆದು ನೋಡಿದನು. ಅದೇ ಕೊಠಡಿ, ಅದೇ ಕಂಬಗಳು, ಅದೇ ಬಾಗಿಲುಗಳು, ಅದೇ ಮಂಚ. "ಆ ಭಾಗ್ಯಲಕ್ಷ್ಮಿ ....ಅಹುದು, ಈ ಲಕ್ಷ್ಮಮ್ಮನೇ ಆ ಭಾಗ್ಯಲಕ್ಷ್ಮಿ" ಎಂದು ಪುನಃ ಅಂದುಕೊಂಡನು.

ಅಂದಿನ ರಾತ್ರಿಯೂ ಕನಸುಗಳ ಗದ್ದಲದಲ್ಲಿ ರಾಯನಿಗೆ

ನಿದ್ದೆ ಹತ್ತಲಿಲ್ಲ. ಆದರೆ ಈಗ ಕನಸಿನಲ್ಲಿ ಗೋಚರಿಸಿದವರು ಭಾಗ್ಯಲಕ್ಷ್ಮಿಯಲ್ಲ, ಕಳೆದ ವರ್ಷ ದೈವಾಧೀನರಾದ ಹಿಂದಿನ ಆಶ್ರಮದ ಗುರು ಮಾಧವಭಟ್ಟರು. "ಚಿಕ್ಕರಾಯ, ನೀನೇಕೆ ಹೀಗಿರುವೆ. ನಿನ್ನ ಅರಿವು ಎಲ್ಲಿ ಮಾಯವಾಯಿತು. ನಿನ್ನ ಕನಸಿನ ದೇವತೆ ಯಾರೆಂದು ಅರಿತಿದ್ದೀಯೆ. ಪಂಪಾ ವಿರೂಪಾಕ್ಷ ಕ್ಷೇತ್ರದಲ್ಲಿ ಆ ಹಿರಿಯ ನಗರವನ್ನು ನಿರ್ಮಿಸಲು ಸ್ಫೂರ್ತಿಯಿತ್ತ, ಚೈತನ್ಯವಿತ್ತ ಆ ಭಾಗ್ಯದೇವತೆಯಲ್ಲವೆ! ಮತ್ತೇಕೆ ವಿಳ್ಮಿಳನೆ ನೋಡುತ್ತೀಯೆ. ಒಳ್ಳೆಯ ಕೆಲಸಕ್ಕೆ ಅಡಚಣೆಗಳು ಅಡ್ಡಿಯಾಗುತ್ತವೆ. ಆದರೆ ಹೆದರಬೇಡ. ಹೆದರಿಕೆಯೇ ವಿನಾಶದ ಸೋಪಾನವೆಂದು ತಿಳಿ. ಧೈರ್ಯಪ್ರೌಢಗೂಡವ ಕೇವಲ ಧರ್ಮಬುದ್ಧಿಯಿಂದ ಆತ್ಮಕಲ್ಯಾಣವಾಗದು. ಹಿರಿಯರ ಕನಸೇ ಲೋಕದ ನನಸಾಗುತ್ತದೆ. ನೆಚ್ಚಿರಲಿ, ಕೆಚ್ಚಿರಲಿ, ತುಚ್ಛತೆಯ ಕಡೆಗೆ ತಿರಸ್ಕಾರವಿರಲಿ. ನಿನಗೆ ಶುಭವಾಗಲಿ" ಎಂದು ನುಡಿದು ಅದೃಶ್ಯನಾದನು.

ಮಾರನೆಯ ದಿನ ಬೆಳಗ್ಗೆ ರಾಯ ಹುತ್ರಿದುರ್ಗ ರಾಮಗಿರಿಗಳಿಗೆ ದೂತರನ್ನು ಕಳುಹಿಸಿ ತಮ್ಮಂದಿರನ್ನು ಬರಮಾಡಿಕೊಂಡನು. ಮಂತ್ರಿಗಳನ್ನೂ ವೃದ್ಧರನ್ನೂ ಸೇರಿಸಿ ಹಿಂದಿನ ದಿನದ ಕನಸಿನ ಅನುಭವಗಳನ್ನೆಲ್ಲ ವಿಸ್ತರಿಸಿದನು. ಅವರಲೊಬ್ಬ ವೃದ್ಧನು "ಮಹಾಪ್ರಭುಗಳ ಕನಸು ಸುಳ್ಳಾಗಲಾರದು. ಭಗವಂತನು ತನ್ನ ಇಚ್ಛೆಯನ್ನು ಅನೇಕ ರೀತಿಗಳಲ್ಲಿ ಪರಿಪೂರ್ಣಗೊಳಿಸಿಕೊಳ್ಳುತ್ತಾನೆ. ಆ ಇಚ್ಛೆಯೇ ಸೃಷ್ಟಿ ಶಕ್ತಿ. ಆ ಶಕ್ತಿ ಅಭೇದ್ಯವಾದುದು. ಅದು ವ್ಯಕ್ತಗೊಳ್ಳಲು ಹಸನಾದ ಕ್ಷೇತ್ರ ಅವಶ್ಯಕ. ತಮ್ಮಂತಹ ಧರ್ಮ ಪ್ರಭುಗಳ ಪರಿಶುದ್ಧವಾದ ಹೃದಯದಲ್ಲಿ ಅದು ವ್ಯಕ್ತಗೊಳ್ಳದೆ ಮತ್ತೆಲ್ಲಿ ವ್ಯಕ್ತಗೊಂಡೀತು. ಧರ್ಮಪುರುಷರ ಆಶೆ ಆಕಾಂಕ್ಷೆಗಳು

ಅವರ ಹೃದಯದ ಕನಸುಗಳಾಗುತ್ತವೆ; ಆ ಕನಸುಗಳೇ ವಾಸ್ತವ ಪ್ರಪಂಚದಲ್ಲಿ ನನಸಾಗುತ್ತವೆ. ಅದಿರಲಿ; ಕುಲಗುರುಗಳಾದ ಮಾಧವಭಟ್ಟರ ಮಾತು ಪೊಳ್ಳಾಗುವುದೆ? ಆದುದರಿಂದ ಈ ಕನಸನ್ನು ಕಡೆಗಣಿಸಲಾಗದು.'' ಎಂದು ನುಡಿದು ಕುಳಿತನು. "ಆದರೆ ಮುತ್ತಾತ ಬಂದು ನೆಲಸಿ ಬೆಳೆಸಿದ ಹಿಂದಿನ ಎಷ್ಟೋ ಅರಸರು ಬಂದು ಹೋದ-ಈ ಊರನ್ನು ಬಿಡುವುದೆಂತು, ಮುತ್ತಾತನ ಉಸಿರು, ಅವನ ಪೀಳಿಗೆಯ ಹೆಂಗಸರ ಗಂಡಸರ ಮತ್ತು ಮಕ್ಕಳ ಉಸಿರು ಇಲ್ಲೆಲ್ಲ ಅಲೆದಾಡುತ್ತಿರಬಹುದಲ್ಲವೆ. ಅವರು ಏನೆಂದಾರು?" ಎಂದು ರಾಯನೂ, ಅವನ ತಮ್ಮಂದಿರೂ ವ್ಯಥೆಪಟ್ಟರು. "ರಾಜ್ಯವನ್ನೇನೂ ಬಿಡುತ್ತಿಲ್ಲ, ರಾಜಧಾನಿಯನ್ನು ಬದಲಾಯಿಸುತ್ತೀರಿ, ಅಷ್ಟೆ. ಅದೂ ಧರ್ಮದೇವತೆಯ ಆಜ್ಞೆಯನ್ನು ಪರಿಪಾಲಿಸುವುದಕ್ಕಾಗಿ. ಇದರಲ್ಲಿ ಏನೋ ದೈವಿಕ ರಹಸ್ಯವಿರುವುದು ಖಂಡಿತ" ಎಂದು ಆ ವೃದ್ಧ ಮತ್ತೆ ಕೈಮುಗಿದು ಹೇಳಿದನು. ಊರು ಬಿಡುವುದೆಂದು ಎಲ್ಲರೂ ಒಮ್ಮತದಿಂದ ಒಪ್ಪಿದರು. ಊರನ್ನು ಪಾಳುಗೆಡಹಬಾರದು, ಪರಿಮಿತ ಪರಿವಾರ ಮಾತ್ರ ರಾಯನನ್ನು ಹಿಂಬಾಲಿಸಬೇಕೆಂದು ನಿಷ್ಕರ್ಷೆ ಮಾಡಿಕೊಂಡರು. ಕತ್ತಲಳಿದು ಬೆಳಕು ಹರಿಯುವುದರಲ್ಲಿ ರಾಯನ ಸೈನ್ಯ ಪ್ರಯಾಣಕ್ಕೆ ಸನ್ನದ್ಧವಾಯಿತು. ಕೆಲವು ಮಂದಿ ರೈತರೂ ಅವರನ್ನು ಹಿಂಬಾಲಿಸಿದರು. ಸೈನ್ಯದ ನಡುವೆ ರಾಜನೂ ರಾಜಸಹೋದರರೂ ಅವರ ಹಿಂದೆ ವೀರಣ್ಣನೂ ಹೊರಟರು. ರಾಣಿಯರೆಲ್ಲ ಹಿಂದುಳಿದರು. ಮಂತ್ರಿಗಳು ಊರಿನ ಕಾವಲಿಗಾಗಿ ನಿಂತರು.

ಒಂದೆರಡು ದಿನಗಳಲ್ಲಿಯೇ ಶಿವನಸಮುದ್ರದ ಹಳ್ಳಿಯ ಬದಿಯಲ್ಲಿ ಮತ್ತೊಂದು ಪುಟ್ಟಹಳ್ಳಿ ಎದ್ದಿತು. ಸೈನಿಕರು ಮತ್ತು

ರೈತರಿಗಾಗಿ ಪರ್ಣಕಾಷ್ಠಗಳ ಕುಟಿಗಳೂ, ರಾಜ ಮತ್ತು ರಾಜ ಸಹೋದರರಿಗಾಗಿ ಬಟ್ಟೆ ಗುಡಿಸಿಲುಗಳೂ ನಿರ್ಮಿತವಾದವು. ಆ ಹಳ್ಳಿಯ ಸುತ್ತ ಮುತ್ತಣ ಪ್ರದೇಶವೆಲ್ಲ ನೇರವಾಗಿ ವಿಜಯನಗರ ರಾಜ್ಯದ ಅಧೀನದಲ್ಲಿತ್ತು. ಆದುದರಿಂದ ಕೋಟೆಕೊತ್ತಲುಗಳನ್ನು ಕಟ್ಟುವುದಕ್ಕೆ ಮುಂಚೆ ಚಕ್ರವರ್ತಿಯ ಅನುಮತಿ ಅತ್ಯಗತ್ಯ ವಾಗಿತ್ತು. ರಾಯ ಕೂಡಲೇ ಕಾಗದ ಬರೆದು ವೀರಣ್ಣನ ಕೈಲಿ ಕೊಟ್ಟು ನಗರಕ್ಕೆ ಕಳುಹಿಸಿದನು. ಈ ಕಡೆ ಪುರನಿರ್ಮಾಣದ ಯೋಜನೆಗಳೂ ಸಿದ್ಧವಾಗುತ್ತಿದ್ದುವು. ಪುರೋಹಿತರು ಶುಭಲಗ್ನ ವನ್ನು ನಿಷ್ಕರ್ಷಿಸಿದರು. ಆ ಸಮಯಕ್ಕೆ ಸರಿಯಾಗಿ ಅಚ್ಯುತ ರಾಯನಿಂದ ಒಪ್ಪಿಗೆಯ ನಿರೂಪವೂ ಬಂದಿತು.

ಲಗ್ನದ ಹಿಂದಿನ ದಿನ. ರಾಯ ಹಿಂದೆ ಸ್ವಪ್ನವನ್ನು ಕಂಡಿದ್ದ ಹೊಂಗೆಯ ಮರದಡಿಯಲ್ಲಿ ಕುಲದೇವತೆ ಕೆಂಪಮ್ಮನ ಪ್ರತಿಷ್ಠೆ ಆಯಿತು. ಪೂಜೆ ಉತ್ಸವಗಳು ವೈಭವದಿಂದ ಸಾಗಿ ದುವು. ಪುರಸ್ಥಾಪನೋತ್ಸವವನ್ನು ನೋಡಲು ನೆರೆಹೊರೆಯ ಹಳ್ಳಿಗಳಿಂದ ಅನೇಕ ಜನರು ಬಂದು ಸೇರಿದ್ದರು. ರಾಯ ಅವರಿ ಗೆಲ್ಲ ಸಂತರ್ಪಣೆ ನಡೆಸಿದನು. ಅಂದಿನ ರಾತ್ರಿಯೇ ಮುಂದಿನ ಮಂಗಳಕಾರ್ಯಕ್ಕೆ ನಾಂದಿಯೆಂಬಂತೆ ದೇವೇಂದ್ರ ಮಳೆ ಸುರಿ ಸಿದನು. ಮುಂಗಾರು ಮಳೆ ಬೀಳುತ್ತಲೆ ಭೂದೇವಿ ಪುಳಕಿತಳಾಗಿ ಹಿಗ್ಗಿದಳು. ಮಳೆರಾಯನ ಕಾರುಣ್ಯದ ಸೋಂಕಿಗೆ ಅವಳು ನಿಟ್ಟು ಸಿರು ಬಿಟ್ಟಳೆಂಬಂತೆ ಎಲ್ಲೆಲ್ಲು ಸುಯ್ಗಂಪು ಹರಡಿತು. ಗ್ರೀಷ್ಮ ಋತುವಿನ ಬೇಗೆಯಿಂದ ಬಾಡಿದ್ದ ಮರ ಗಿಡ ಬಳ್ಳಿಗಳು ಮಳೆ ಯಲ್ಲಿ ಮಿಂದು ಕಳಕಳಿಸಿದುವು; ಅವುಗಳಲ್ಲಿ ನವಚೇತನೋದಯ ವಾದಂತಾಯಿತು. ಕೆರೆಕುಂಟೆಗಳಿಗೆ ನೀರು ಬಂದಿತು. ಕಪ್ಪೆ ಗಳ ಮೊರೆತದಿಂದ ಯಾರಿಗೂ ಸರಿಯಾಗಿ ನಿದ್ದೆ ಹತ್ತಲಿಲ್ಲ. ಹಕ್ಕಿ

ಗಳು ಮಧುರವಾದ ಕೂಜನದಿಂದ ಉಷಾದೇವಿಯನ್ನು ಸ್ವಾಗತಿ ಸಿದುವು. ಬುವಿ ಆಗಸಗಳೆರಡೂ ಮಿಂದು ಶುಭ್ರವಾಗಿದ್ದುವು. ಅರುಣ ರವಿ ನವಕಾಂತಿಯನ್ನು ಬೀರುತ್ತಾ ಉದಯಗಿರಿ ಶಿಖರವ ನ್ನಡರಿದನು. ನಾಲ್ಕು ಜತೆ ಆರುಗಳು ಸಿಂಗರಗೊಂಡು ಹೊಂಗೆಯ ಮರದಡಿಯಲ್ಲಿ ನಿಂತುವು. ರಾಯ ಕುಲದೇವತೆಯನ್ನು ನೆನೆದನು. ತಾನು ಸ್ವಪ್ನದಲ್ಲಿ ಕಂಡ ಭಾಗ್ಯಲಕ್ಷ್ಮಿಯು, ಆ ಲಕ್ಷ್ಮಿಯನ್ನೇ ಹೋಲುತ್ತಿದ್ದ ಲಕ್ಷ್ಮಮ್ಮನ ಚಿತ್ರ ಅವನ ಕಣ್ಣೆದುರು ಸುಳಿದುವು. ಗುರುವಿನ ಆಶೀರ್ವಚನ ಸ್ಮರಣೆಗೆ ಬಂದಿತು. ಶಾಸ್ತ್ರೋಕ್ತವಾದ ವಿಧಿಗಳು ಮುಗಿದ ಮೇಲೆ ನಾಲ್ಕು ಆರುಗಳು ಈಗ ದೊಡ್ಡ ಪೇಟೆಯ ಚೌಕವಿರುವ ಸ್ಥಳದಲ್ಲಿ ಬಂದು ನಿಂತುವು. ರಾಯನ ಕಣ್ಸನ್ನೆಯನ್ನೆ ನಿರೀಕ್ಷಿಸುತ್ತಿದ್ದ ರೈತರು ನಾಲ್ಕು ದಿಕ್ಕುಗಳಿಗೂ ಆರುಗಳನ್ನು ಹೊಡೆದು ನೇಗಿಲಿನಿಂದ ಗೆರೆಗಳನ್ನು ರೇಖಿಸಿದರು. ಪೂರ್ವಕ್ಕೆ ಹಲಸೂರು ಬಾಗಿಲವರೆಗೆ, ಪಶ್ಚಿಮಕ್ಕೆ ಅರಳೇಪೇಟೆಯ ಕೊನೆಯತನಕ, ಉತ್ತರಕ್ಕೆ ಯಲಹಂಕದ ಬಾಗಿಲವರೆಗೆ, ದಕ್ಷಿ ಣಕ್ಕೆ ಕೋಟೆಯ ತೆಂಕಣ ಬಾಗಿಲ ಪರ್ಯಂತ ಗೆರೆ ಹಾಕುವು ದೆಂದು ಮೊದಲೇ ರಾಯ ನಿರ್ಣಯಿಸಿದ್ದನು. ಈ ನಾಲ್ಕು ದಿಕ್ಕಿನ ನೇಗಿಲ ಸಾಲುಗಳೇ ನಾಲ್ಕು ಮುಖ್ಯ ಬೀದಿಗಳಾದುವು. ಹೊಂಗೆಯ ಮರದ ಸಮೀಪದಲ್ಲಿಯೇ ಅರಮನೆಯ ಕಟ್ಟಡಕ್ಕೆ ರಾಯ ಪಾಯ ತೋಡಿಸಿದನು. ಅನತಿ ದೂರದಲ್ಲಿಯೇ ಮಂತ್ರಿಗಳಿಗೂ, ವೃದ್ಧ ಪ್ರಮುಖರಿಗೂ ಭವನಗಳನ್ನು ಕಟ್ಟುವ ಕೆಲಸ ಪ್ರಾರಂಭ ವಾಯಿತು.

ಹೊಸ ಊರಿಗೆ ಹೆಸರು ಕೊಡುವುದು ರಾಯನಿಗೆ ತೊಡ ಕಾಯಿತು. ತಾನು ಕಟ್ಟಿದ ಊರನ್ನು ಶಿವನಸಮುದ್ರವೆಂದು ಕರೆಯಲು ಇಷ್ಟವಿರಲಿಲ್ಲ. ತನ್ನ ಸ್ವಪ್ನದ ವೃತ್ತಾಂತವನ್ನು

ನೆನೆದುಕೊಂಡನು. ತನ್ನ ತಾಯಿ, ತನ್ನ ಹೆಂಡತಿ, ತನ್ನ ಸೊಸೆ–
ಆ ಹಿರಿಯ ಮೂರು ಜೀವಗಳಲ್ಲಿ ರಾಯ ಭಾಗ್ಯದೇವತೆಯ ಬೇರೆ
ಬೇರೆ ರೂಪಗಳನ್ನು ಕಂಡಿದ್ದನು. ಬಡಹಳ್ಳಿಯಾದ ಆ ಬೆಂಗ
ಳೂರು ಆ ಮೂವರು ಶ್ರೀಮೂರ್ತಿಗಳಿಗೂ ತವರಾಗಿತ್ತು. ಅದ
ಕ್ಕಿಂತ ಬೇರೆ ಹೆಸರಾವುದೂ ಅವನ ಬಗೆಗೆ ಗೋಚರಿಸಲಿಲ್ಲ, ಅವನ
ಎದೆಗೆ ಮೆಚ್ಚಿಕೆಯಾಗಲಿಲ್ಲ. ಈ ಹೊಸ ಊರಿನಲ್ಲಿ ಆ ಶ್ರೀ
ಮೂರ್ತಿಗಳ ಬೆಳಕನ್ನು ಕಂಡನು. ಆದುದರಿಂದ ಆ ಹೆಸರೇ
ಈ ಊರಿಗೂ ಉಚಿತವಾಗಿ ಸಲ್ಲುತ್ತದೆಯೆಂದು ನಿರ್ಣಯಿಸಿ
ಕೊಂಡನು. ಹೊಸ ಊರು ಬೆಂಗಳೂರಾಯಿತು.

ಪುರಸ್ಥಾಪನೋತ್ಸವಕ್ಕೆ ಬಂದಿದ್ದ ಬಸವಯ್ಯ ಕೆಂಪಸೋಮ
ಣ್ಣರು ಅಣ್ಣನ ಅಪ್ಪಣೆಯನ್ನು ಪಡೆದು ತಮ್ಮ ತಮ್ಮ ದುರ್ಗಗಳಿಗೆ
ಹಿಂದಿರುಗಿದರು. ರಾಯ ನೂತನ ನಗರದ ನಿರ್ಮಾಣ ಕಾರ್ಯ
ದಲ್ಲಿ ನಿರತನಾದನು. ತನ್ನ ಸಂಸಾರಕ್ಕೆ ಸಾಕಾಗುವಷ್ಟು ಕಟ್ಟಡ
ಸಿದ್ಧವಾದ ಕೂಡಲೇ ಶುಭ ಮುಹೂರ್ತದಲ್ಲಿ ತನ್ನ ಹೆಂಡತಿ ಮಕ್ಕ
ಳನ್ನೂ ಸೊಸೆಯರನ್ನೂ ಯಲಹಂಕದಿಂದ ಕರೆಸಿಕೊಂಡನು. ಯಲ
ಹಂಕದಿಂದ ತನ್ನ ಜತೆಯಲ್ಲಿ ಬಂದಿದ್ದ ಪ್ರಜೆಗಳಿಗೆ ತನ್ನ ಭವನದ
ನೆರೆಯಲ್ಲಿಯೇ ಗೃಹ ವಸತಿಗಳನ್ನು ಹಂಚಿಕೊಟ್ಟನು. ಅನಂತರ
ರಾಜ ಬೀದಿಗಳನ್ನು ಅಂದವಾಗಿ ಗೇಯಿಸಿದನು. ದಟ್ಟವಾಗಿ ಬೆಳೆ
ದಿದ್ದ ಎರಡು ಕಡೆಯ ಕಾಡುಗಳನ್ನು ತೆರಿಯಿಸಿ, ಆ ಬೀದಿಗಳ
ಎರಡು ಪಾರ್ಶ್ವಗಳಲ್ಲಿಯೂ ವಸತಿಗಳನ್ನು ನಿರ್ಮಿಸಿ ಒಂದೊಂದು
ಪಂಗಡದವರಿಗೆ ಒಂದೊಂದು ತುಂಡನ್ನು ಹಂಚಿಕೊಟ್ಟನು. ಈ
ಯೋಜನೆಯಿಂದ ಒಂದೊಂದು ವೃತ್ತಿಯವರು ಒಂದೊಂದು ಕಡೆ
ನೆಲಸಲನುಕೂಲವಾಯಿತು.

ಮೂರು ತಿಂಗಳಲ್ಲಿ ಪುರಜನರ ಸೌಕರ್ಯಗಳಿಗೆ ಅತ್ಯಾವ

ತ್ಮಕವಾದ ಏರ್ಪಾಡುಗಳನ್ನು ಮಾಡಿ ಮುಗಿಸಿದನು. ಅನಂತರ ನಗರ ರಕ್ಷಣೆಗಾಗಿ ಕೋಟೆ ಕೊತ್ತಳಗಳನ್ನು ರಚಿಸಲು ಆರಂಭಿಸಿದನು. ಅದಕ್ಕಾಗಿ ಅನೇಕ ಕಡೆಗಳಿಂದ ಉತ್ತಮರಾದ ಶಿಲ್ಪಿಗಳನ್ನೂ ಕಾರ್ಮಿಕ ಕುಶಲರನ್ನೂ ಬರಮಾಡಿಕೊಂಡನು. ಶುಭಲಗ್ನದಲ್ಲಿ ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸಿದನು. ಕೋಟೆಯ ಕಟ್ಟಡ, ಅಗಳಿನ ಅಗೆತ ಎರಡೂ ಭರದಿಂದ ಸಾಗಿದುವು. ಎರಡು ದಿಕ್ಕಿನ ಗೋಡೆಗಳು ಮುಗಿದು, ಮತ್ತೊಂದು ಭಾಗವನ್ನು ಆರಂಭಿಸುವಷ್ಟರಲ್ಲಿ ಅವೆರಡೂ ಉರುಳಿದವು. ಮತ್ತೆ ರಾಯ ಹೊಸ ಕಾಮಾಟಿಗರನ್ನು ಕರೆಯಿಸಿ ಮೊದಲಿಂದ ಕೆಲಸವನ್ನಾರಂಭಿಸಿದನು. ಹದಿನೈದು ದಿನಗಳು ಕಟ್ಟಿದ ಗೋಡೆ ಪುನಃ ಉರುಳಿ ಹೋಯಿತು. ರಾಯ ಚಿಂತಾಕ್ರಾಂತನಾದನು. ಊರಿನ ಜನರು ಬಗೆ ಬಗೆಯಾಗಿ ಆಡಿಕೊಳ್ಳಲಾರಂಭಿಸಿದರು. ಕೆಲವರು ಕಾಡಿನಲ್ಲಿ ಅಡಗಿದ್ದ ಭೂತದ ಚೇಷ್ಟೆಯೆಂದರು. ಶಂಕುಸ್ಥಾಪನೆ ಮಾಡಾಗ ಪ್ರಾಣಿಗಳನ್ನು ಬಲಿಗೊಡದಿದ್ದುದೇ ಆ ವಿಪತ್ತಿಗೆ ಕಾರಣವೆಂದು ಕೆಲವರು ಪಿಸುಗುಟ್ಟಿದರು. ಪೂರ್ವಜರ ರಾಜಧಾನಿಯನ್ನು ತೊರೆದು ಬಂದುದರಿಂದ ಅವರ ಶಾಪ ತಗುಲಿತೆಂದು ಕೆಲವರು ಸಾರಿದರು. ಆ ಕಾಡು ಮೊದಲು ದೇವತೆಗಳ ಆವಾಸಸ್ಥಾನವಾಗಿತ್ತೆಂದೂ ಆಗಾಗ್ಗೆ ಅವರು ಅಲ್ಲಿ ಸಂಚರಿಸುತ್ತಿದ್ದರೆಂದೂ, ಮನುಷ್ಯರು ಆ ಸ್ಥಳವನ್ನು ಆಕ್ರಮಿಸಿದುದರಿಂದ ಅನೇಕ ಪೀಡೆಗಳು ಪ್ರಾಪ್ತವಾಗುತ್ತವೆಂದೂ ಕೆಲವರು ಕಣಿ ಹೇಳಿದರು. ಆ ಹೊಂಗೆಯ ಮರದ ಸೆರೆಯಲ್ಲಿದ್ದ ದೊಡ್ಡದೊಂದು ನಿಧಿಯನ್ನು ಏಳು ತಲೆಯ ಸರ್ಪ ಕಾದುಕೊಂಡಿದ್ದುದರಿಂದ ಗೌಡನ ತಲೆ ಉಳಿದಿತ್ತೋ ಇಲ್ಲವೋ ಎಂದು ಕೆಲವರು ಕದ್ದು ಆಡಿಕೊಂಡರು. ಇಷ್ಟೇ ಅಲ್ಲ; ಇನ್ನೂ ಎಷ್ಟೆಷ್ಟೋ ವಿಪತ್ತುಗಳು ಯಲಹಂಕನಾಡಿಗೆ

ಪ್ರಾಪ್ತವಾಗ ಬಹುದೆಂದೂ, ಅವುಗಳನ್ನು ಪರಿಹರಿಸಲು ತುಂಬು
ಬಸಿರಿಯ ಬಲಿ ಅತ್ಯಾವಶ್ಯಕವೆಂದೂ ಆಚಾರವಂತರು ಸಂಪ್ರದಾ
ಯಸ್ಥರು ನಾಡಿನ ಹಿರಿಯರು ಎಲ್ಲರೂ ಹೇಳಿಕೊಳ್ಳಲಾರಂಭಿಸಿದರು

ಗಾಳಿಯಂತೆ ಸುದ್ದಿಯೂ ಹರಡದ ಸ್ಥಳವಿಲ್ಲ. ಗಾಳಿಯಷ್ಟೆ
ಅದೂ ಶೀಘ್ರಗಾಮಿ. ಈ ಹಲವಾರು ಜಂಗುಳಿನುಡಿಗಳು ಕಣ
ಪರಂಪರೆಯಿಂದ ಸುಳಿದು ಬಂದು ರಾಯನ ಕಿವಿಪೆರೆಯನ್ನು ತಿವಿದ
ಮೆಲ್ಲಿದೆಯನ್ನು ಇರಿದುವು. ' ಪೂರ್ವಜರ ಶಾಪದಿಂದ ಇಂತಹ
ಅನಾಹುತ ನಡೆದಿದೆಯೇ? ಇರಲಾರದು. ಅವರ ಧರ್ಮಮಾರ್ಗ
ವನ್ನು ಬಿಟ್ಟು ನಾನು ನಡೆದಿರುವುದಾದರೂ ಏನು? ದೈವೇಚ್ಛೆಗ
ವಿರುದ್ಧವಾಗಿ ನಡೆಯುತ್ತಿದ್ದೇನೆಯೇ? ಹಾಗಾದರೆ ನಾನು ಕಂ
ಸ್ವಪ್ನದ ದೃಶ್ಯ ಸುಳ್ಳೇ? ಸಾಕ್ಷಾತ್ ಭಾಗ್ಯಲಕ್ಷ್ಮಿ ಈ ಸ್ಥಾನದಲ್ಲಿ
ಅಂತರ್ಧಾನಳಾದಳಲ್ಲವೇ? ಪ್ರಜೆಗಳ ನುಡಿಯನ್ನು ಸಂತೆಯ ನುಡಿ
ಯೆಂದು ಕಡೆಗಣಿಸಲೇ? ಸಲ್ಲದು. ಆದರೆ ಅಯ್ಯೋ, ಬಸಿರಿಯನ್ನು
ಬಲಿಗೊಡಬೇಕೆಂದು ಜನ ಆಡಿಕೊಳ್ಳುತ್ತಿದ್ದಾರೆಯಲ್ಲ. ಅದು
ಸಾಧ್ಯವೇ? ಅದಕ್ಕಿಂತ ಬೇರೆ ಕಗ್ಗೊಲೆಯುಂಟೆ? ಅಂತಹ
ಸಂದರ್ಭ ಖಂಡಿತ ಒದಗಲಾರದು. ಒದಗುವುದಾದರೆ ನನ್ನ
ತಲೆಯೇ ಸಿಡಿದುರುಳಲಿ, ಧರ್ಮದೇವತೆಯು ಮನೋರಥ ಸಿದ್ಧಿ
ಸಲಿ!" ಹೀಗೆ ಅವನ ಮನೋರಂಗದಲ್ಲಿ ನಾನಾ ವಿಧವಾದ
ಯೋಜನೆಗಳ ತುಮುಲಯುದ್ಧ ಆರಂಭವಾಯಿತು. ಚಿಂತೆಯ
ಒರಲೆ ಹಿಡಿದ ದೇಹ ಜರ್ಜರಿತವಾಗತೊಡಗಿತು. ಆ ಚಿಂ
ತನಗೇ ಮೀಸಲಾಗಿರಲಿ; ತನ್ನ ನೆರೆಯವರಿಗೆ ಅಂಟದಿರಲೆಂದ
ಎಚ್ಚರಿಕೆಯಿಂದ ವರ್ತಿಸಿದನು. ಆದರೆ ಊಟ ಸರಿಯಾಗಿ ಸೇರವ
ನಿದ್ದೆ ಚೆನ್ನಾಗಿ ಹತ್ತದು. ನಿತ್ಯ ಕರ್ಮಗಳನ್ನು ಮಾತ್ರ ನಿಲ್ಲಿಸ
ಲಿಲ್ಲ. ಎಂದಿನಂತೆಯೇ ಮಕ್ಕಳನ್ನೂ ಸೊಸೆಯರನ್ನೂ ಸಲು

ಯಿಂದ ಮಾತಾಡಿಸುತ್ತಿದ್ದನು. ಉದ್ಯಾನವನದ ಜಿಂಕೆಯ ಹಸು
ಳೆಸನ್ನೂ ಗೋಶಾಲೆಯ ಮುದ್ದಿನ ಗೋಶಿಶುವನ್ನೂ ಮುಟ್ಟಿ ತಟ್ಟಿ
ಯುಂಡಾಡುವಾಗ ಇಳೆಯ ಬಾಳನ್ನೇ ಮರೆಯುತ್ತಿದ್ದನು.

ಆದರೇನು?—ಎದೆಯ ದನಿ ಎದೆ ಸೇರಲು ತಂತಿ ಏಕೆ?
ರಾಯನ ನೆರಳಿನಂತಿದ್ದ ಲಕ್ಷ್ಮಮ್ಮ ಚೆನ್ನಾಂಬೆಯರು ದಿನೇ ದಿನೇ
ಶವಾಗತೊಡಗಿದರು. ರಾಯನ ಪ್ರಯತ್ನವನ್ನು ಸಹ ಮೀರಿ
ದ್ಧಿಯ ಬಿರುಗಾಳಿ ರಾಣಿ ಸೊಸೆಯರ ಎದೆಗಡಲನ್ನು ಕಲಕಿತು.
ಎರಡು ಸಂಕೋಚ ಜೀವಿಗಳಿಗೂ ರಾಯನನ್ನು ಮಾತಾಡಿಸು
ಷ್ಟು ಎದೆಗಾರಿಕೆಯಿರಲಿಲ್ಲ. ಲಕ್ಷ್ಮಮ್ಮನಂತು ಕುಲ ದೇವತೆ
ಂಪಮ್ಮನನ್ನು ಎಂದಿಗಿಂತ ಅಧಿಕವಾಗಿ ಪೂಜಿಸತೊಡಗಿದಳು.
ವಳ ಚಾರಿತ್ರವನ್ನು ನೆನೆನೆನೆದು ಪುಳಕಿತಳಾಗುತ್ತಿದ್ದಳು. ಅವಳ
ಕ್ತಿ ಅವಳ ತೇಜಸ್ಸು ಅವಳ ಧೈರ್ಯ ತನಗೂ ಒದಗಲೆಂದು
ೕಡಿದಳು. ಮಾವನ ಚಿಂತೆಯನ್ನು ಹೋಗಲಾಡಿಸುವ ಪುಣ್ಯ,
ಾಡಿನ ವಿಪತ್ತನ್ನು ಪರಿಹರಿಸುವ ಭಾಗ್ಯ ತನಗೆ ಲಭಿಸುವುದೇ
ಂದು ಹಂಬಲಿಸಿದಳು, ಬಿಸುಸುಯ್ದಳು.

———

೫

ಹಿರಿಯ ಸಿದ್ಧಿಗಾಗಿ ಹಿರಿಯ ತ್ಯಾಗ

ಅಮಾವಾಸ್ಯೆಯ ಕತ್ತಲಿನ ಬಸಿರಿನಲ್ಲಿ ರಾಜಧಾನಿ ಮಲ
ತ್ತು. ಗಾಢಾಂಧಕಾರದ ಭೀಕರತೆಯನ್ನು ನೀರವತೆ ಮತ್ತಷ್ಟು
ಕಗೊಳಿಸಿತ್ತು. ಒಮ್ಮೊಮ್ಮೆ ಗೋಶಾಲೆಯಿಂದ ತೂರಿಬರುತ್ತಿದ್ದ

ಕಿರುಗುಂಟೆಯುಲಿ ಮಾತ್ರ ಆ ನೀರವತೆಯನ್ನು ಕದಡುತ್ತಿತ್ತು. ಅರಮನೆಯ ರಾಜನ ಕೋಣೆಯಲ್ಲಿ ಹಣತೆಯೊಂದು ನರಳುತ್ತಿತ್ತು. ಪಕ್ಕದಲ್ಲಿಯೇ ರಾಯ ಕಣ್ಮುಚ್ಚಿ ಕುಳಿತಿದ್ದನು. ಅವನ ಹೃದಯದ ಚಿಂತೆಯನ್ನು ಆ ಸೊಡರು ಪ್ರತಿಬಿಂಬಿಸುತ್ತಿತ್ತು. ಆ ಭೀಕರ ನೀರವತೆಯನ್ನು ಏನೋ ಸಪ್ಪಳ ಕದಡಿದಂತಾಗಿ ರಾಯ ಕಣ್ಣೆವೆ ಬಿಚ್ಚಿದನು. ಏನೂ ಕಾಣಿಸಲಿಲ್ಲ. ಮತ್ತೆ ಎವೆ ಮುಚ್ಚಿದನು. ನಿದ್ರಾದೇವಿಗೂ ಚಿಂತಾರಾಕ್ಷಸಿಗೂ ಕಲಹವಾರಂಭವಾಯಿತು. ಮಧ್ಯಸ್ಥಿಕೆಗಾಗಿ ಸ್ವಪ್ನಸುಂದರಿ ತುಸು ಇಣಕಿದಂತಾಯಿತು. ಅದೇ ಭಾಗ್ಯಲಕ್ಷ್ಮಿ ಮತ್ತೆ...........ಮತ್ತೆ ನೆಳಲ ಸಪ್ಪಳ..........ಅದೇ ಭಾಗ್ಯಲಕ್ಷ್ಮಿಯ ಛಾಯೆ......ಅಹುದಹುದು.......ಆ್ಞ, ಅಲ್ಲ, ಛಾಯಾಂಗಿ ಅವನತಮುಖೀ...........ಆ ಛಾಯೆ ರಾಯನ ಪಾದದೆಡೆಗೆ ಸಾಗಿ ಬಾಗಿತು.

"ತಾಯಿ"

"ಆ್ಞ"

"ಏನೀ ಹೊತ್ತಿನಲ್ಲಿ"

"ಬಂದೆ"

"ಏಕೆ"

"ಬಂದೆ"

"ನಿದ್ದೆ ಹತ್ತಲಿಲ್ಲವೆ"

"ಇಲ್ಲ"

ಬಹಳ ದಿನಗಳಿಂದ ರಾಯನ ಎದೆಯನ್ನು ಚಿಂತೆ ಮುಸುಕಿದ್ದರೂ ನಡುಕ ಹುಟ್ಟಿರಲಿಲ್ಲ. ಸೊಸೆಗೂ ತನ್ನ ಚಿಂತೆಯ ಸುದ್ದಿ ತಿಳಿದಿರಬಹುದೇನೋ ಎಂದು ಹೆದರಿದನು. ನಡುಗಿದನು. ಆದರೂ ತನ್ನ ನಡುಕವನ್ನು ತೋರ್ಪಡಿಸದೆ,

" ಕಾರಣವೇನು, ತಾಯಿ. ದೇಹಾಲಸ್ಯವೆ ?"

" ಅಹುದು. ದೇಹದ ಯಾವ ಭಾಗಕ್ಕೆ ನೋವುಂಟಾದರೂ, ದೇಹಕ್ಕೆ ಅಸ್ವಸ್ಥತೆಯುಲ್ಲವೆ.

ರಾಯ ನಿಡುಸುಯ್ದು " ಅಹುದು "

" ನಾನು ಆ ಪುಣ್ಯ ಶರೀರದ....... " ರಾಯನ ಎಡಗಾಲನ್ನು ಹಿಡಿದುಕೊಂಡು " ಈ ಎಡಗಾಲಿನ ಕಿರುಬೆರಳಲ್ಲವೇ."

ಉಕ್ಕಿ ಉಕ್ಕಿ ಬರುತ್ತಿದ್ದ ದುಃಖವನ್ನು ಅದುಮಿ ಸೊಸೆಯು ಬಿಚ್ಚು ಮುಡಿಯನ್ನು ರಾಯ ಸವರಿ " ತಾಯಿ, ಗಂಡಸರ ಚಿಂತೆಯನ್ನು ಹೆಂಗಸರು ಅಂಟಿಸಿಕೊಳ್ಳಬಾರದು. ಅದರಲ್ಲಿಯೂ ರಾಜನಾದವನಿಗೆ ಅನೇಕ ಚಿಂತೆಗಳಿರುತ್ತವೆ. ಅವುಗಳನ್ನು ಹೆಂಗಸರು ಅಂಟಿಸಿಕೊಳ್ಳುವುದು ತರವಲ್ಲ; ಜತೆಗೆ ನೀನಿನ್ನೂ ಯುವತಿ."

" ಹಿರಿಯುವರ ಪಾದಮೂಲದಲ್ಲಿ ನಿಂತು ಹೆಚ್ಚು ಮಾತಾಡುವ ಧೈರ್ಯವೂ ಇಲ್ಲ, ತಮ್ಮ ಚಿಂತೆಯನ್ನು ಹೊರುವ ಶಕ್ತಿಯೂ ನನಗಿಲ್ಲ. ಆದರೆ ನನ್ನ ಪೂರ್ವದ ಪುಣ್ಯದಿಂದ ತಮ್ಮಂಥವರ ಸೊಸೆಯಾಗುವ ಭಾಗ್ಯ ಲಭಿಸಿತು. ಆ ಸೌಭಾಗ್ಯವನ್ನುಳಿಸಿಕೊಳ್ಳುವ ಕಾಲ ಒದಗಿದೆ."

ರಾಯ ಚಕಿತನಾಗಿ " ಹಾಗೆಂದರೇನವ್ವ. "

" ಕೋಟೆ ಎರಡು ಸಾರಿ ಉರುಳಿ ಹೋಯಿತಂತೆ "

" ಮತ್ತೆ ಸರಿಪಡಿಸುತ್ತೇನೆ "

" ಬಸಿರಿಯನ್ನು ಬಲಿಗೊಟ್ಟರೆ ಸರಿಹೋಗುವುದಂತೆ "

" ಅಯ್ಯೋ ನನ್ನ ಕಂದ, ಕೊಲೆಯೆ........ ಹಿಂದೊಮ್ಮೆ ಶತ್ರುಗಳೊಡನೆ ಯುದ್ಧ ಸಂಧಿಸಿದಾಗ ಅನಿವಾರ್ಯವಾಗಿ ಕೆಲವರನ್ನು ಗಾಯಗೊಳಿಸಿದುದುಂಟು, ಕೆಲವರನ್ನು ಕೊಂದುದುಂಟು ......ಬೇಟೆಯೆಂದರೆ ನನಗೆ ತಡೆಯಲಾರದ ಗೀಳು. ನಿನಗೆ ನೆನ

ಹಿಡೆಯೆ ತಾಯಿ, ನಾನು ಜಿಂಕೆಯ ಹಸುಗೂಸನ್ನು ಕೊಂದುದು
ಅಂದಿನಿಂದ ಬೇಟೆಯನ್ನೇ ನಿಲ್ಲಿಸಿದೆ. ಕೊಲೆಯೆ ನನ್ನವ್ವ........
ಜಗತ್ತಿನಲ್ಲೊಂದು ಯಃಕಶ್ಚಿತ್ ಪ್ರಾಣಿಯನ್ನೂ ಕೊಲ್ಲಿಸಲಾರೆ
ತುಂಬುಬಸಿರಿಯನ್ನು ಕೊಲ್ಲುವೆನೆ........ ಅಯ್ಯೋ ಕೊಲೆಯ
ಹೊಲೆಯಲ್ಲಿ ಧರ್ಮ ದೇವತೆಗೆ ಒಲವೆ. ಅಣ್ಣ, ನನ್ನವ್ವ, ಹಾಗಾ
ದರೆ ನನ್ನ ತಲೆಯೇ ಬಲಿಯಾಗಲಿ"

"ಕೊಲೆಗೆ ಧರ್ಮದೇವತೆ ಒಲಿಯಳು ನಿಜ; ಆದರೆ ಆತ್ಮ
ತ್ಯಾಗಕ್ಕೆ ಒಲಿಯದಿರುವಳೆ; ಆತ್ಮಯಜ್ಞದಿಂದ ತಾನೇ ಮಹ
ತ್ಕಾರ್ಯದ ಸಿದ್ಧಿ."

ದುಃಖಾತಿಶಯದಿಂದ ರಾಯನ ಕೊರಳಸೆರೆ ಬಿಗಿಹಿಡಿಯಿತು
ದುಃಖ ಕಣ್ಣಿನಿಂದ ಧಾರಾಕಾರವಾಗಿ ಹರಿಯತೊಡಗಿತು. "ಹಿಂದ
ಮಗಳಿಂದ ಈ ವಂಶ ಉದ್ಧಾರವಾಯಿತು" ಎಂದನು.

"ಆ ಪುಣ್ಯ ಈ ಸೊಸೆಗೂ ಲಭಿಸಲಿ. ಬಾಳು ಸಾರ್ಥ
ಕತೆ ಪಡೆಯಲಿ. ಇದೇ ನನ್ನ ಹಾರೈಕೆ."

"ಅಪಶಕುನ ನುಡಿಯಬೇಡ, ನನ್ನವ್ವ, ನನ್ನ ಕಂದ
ನಿನ್ನಿಂದ ನಮ್ಮ ಮನೆಯ ಕುಡಿ ಬೆಳೆಯಬೇಕಾಗಿದೆ, ಹಿರಿದಾಗ
ಬೇಕಾಗಿದೆ ನನ್ನಾಣೆ ಇಂತಹ ಮಾತಾಡಬೇಡ."

"ಹೆಚ್ಚು ಮಾತಾಡಿದೆ, ಕ್ಷಮಿಸಿ, ಮಾವಯ್ಯ" ಎನ್ನುತ್ತ
ಮತ್ತೆ ಮಾವನ ಪಾದವನ್ನು ಕಣ್ಣಿಗೆ ಒತ್ತಿಕೊಂಡಳು.

"ಹೋಗು ನಿಶ್ಚಿಂತಳಾಗಿ ಮಲಗು, ನನ್ನವ್ವ."

ಲಕ್ಷ್ಮಮ್ಮ ತನ್ನ ಕೊಟಡಿಗೆ ತೆರಳಿದಳು.

ಚಿಂತೆಯ ಚಿತೆ ಮತ್ತಷ್ಟು ಉಜ್ವಲವಾಗಿ ರಾಯನ ಎದ
ಯನ್ನು ದಹಿಸತೊಡಗಿತು. ಸೊಸೆಯ ಚಿಂತೆ ಹಿಂದಿನ ಚಿಂತ
ಗಳನ್ನೆಲ್ಲ ಮರೆಸಿತು. ಅಂತಹ ಸೊಸೆಯನ್ನು ಪಡೆದ ತಾನ

ಭಾಗ್ಯಶಾಲಿಯೆಂದುಕೊಂಡನು. ಹಾಗೆಂದುಕೊಂಡಾಗಲೇ ಅವನ ಎದೆ ಡವಡವನೆ ಹೊಡೆದುಕೊಳ್ಳುತ್ತಿತ್ತು. ಮತ್ತೆ ಮತ್ತೆ ಸ್ತ್ರೀ ಜನ್ಮ ಎಷ್ಟು ಪವಿತ್ರವಾದುದು; ತ್ಯಾಗದ ಸತ್ಯದ, ಸಹನೆಯ ಬಾಳುವೆ ಎಂದುಕೊಳ್ಳುತ್ತಿದ್ದನು. ಮತ್ತೆ ಜಗತ್ತು ನೀರವತೆಯ ಮಡಿಲಿನಲ್ಲಿ ಮಲಗಿತು. ರಾಯನ ಪಕ್ಕದ ಸೋಡರು ಧ್ಯಾನಾವಸ್ಥೆಯಲ್ಲಿತ್ತು. ಏಕೋ ಅವನ ಎಡಗಣ್ಣು ಅದುರಿತು. ಕೋಣೆಯ ಮುಂಭಾಗದ ಮರದ ಮೇಲಿಂದ ಗೂಬೆಯ ವಿಕಟಧ್ವನಿ ಕೇಳಿ ಬಂದಿತು. ಅವನ ಚಿಂತೆಯ ಭಾರವನ್ನು ತಾಳಲಾರದ ಗಾಳಿಯೂ ಮರೆಯಾಯಿತು. ಕೂಡಲೇ ಅವನ ಕಣ್ಣೆವೆಗಳು ಒಂದುಗೂಡಿದುವು. ಚಿಂತೆಗಳು ಅಸ್ಪಷ್ಟವಾದುವು. ಪುನಃ ಏನೋ ಸಪ್ಪಳವಾದಂತಾಯಿತು. ಚಿಂತೆಗಳು ಎಚ್ಚತ್ತುವು. ರಾಯ ಕಣ್ತೆರೆದು ನೋಡಿ ತುಸು ಹೊತ್ತು ಜಾನಿಸಿಕೊಂಡು,

"ವೀರಣ್ಣ"

ಒಡೆಯನ ಇರವನ್ನು ಕಂಡ ವೀರಣ್ಣನಿಗೆ ಕೂಡಲೇ ದುಃಖ ಉಕ್ಕಿ ಬಂದಿತು. ಮಾತು ಹೊರಡಲಿಲ್ಲ. ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿದ್ದರು. ರಾಯನೇ ವೀರಣ್ಣನ ಕೈಹಿಡಿದು ಹತ್ತಿರಕ್ಕೆ ಸೆಳೆದು ಕುಳ್ಳಿರಿಸಿಕೊಂಡು

"ವೀರಣ್ಣ"

"ಒಡೆಯ...."

"ಈಗೇಕೆ ಬಂದೆ ಇಂತಹ ಕಗ್ಗತ್ತಲಿನಲ್ಲಿ"

"ದುಃಖ ತುಂಬಿದ ಎದೆಗೆ ಹಗಲೆಂದು"

"ನಿಜ"

"ಎರಡು ಮೂರು ದಿನಗಳಿಂದ ತಮ್ಮ ದರ್ಶನಕ್ಕಾಗಿ ಕಾದೆ"

"ಆದರೆ ದುಃಖವೇಕೆ"

"ನಾನು ಎಸಗಿರಬಹುದಾದ ಅಪರಾಧಕ್ಕಾಗಿ"

"ನೀನು ಮಾಡಿರುವ ಅಪರಾಧವೇನು ?"

"ಹಾಗಾದರೆ ಎರಡು ಮೂರು ದಿನಗಳಿಂದ ನಿಮ್ಮನ್ನು ನೋಡುವುದೆ ಕಷ್ಟವಾಗಿದೆಯಲ್ಲ." ರಾಯ ನಿಡುಸುಯ್ದು "ನಾನೇ ನಿನ್ನನ್ನು ಕರೆಸೋಣವೆಂದಿದ್ದೆ, ವೀರಣ್ಣ. ಆದರೆ..... ನಮ್ಮ ನಮ್ಮ ಕರ್ಮ ನಮ್ಮ ಬೆನ್ನು ಹತ್ತಿರುವಾಗ ಇನ್ನೊಬ್ಬರಿಗೆ ಅದರ ಸೋಂಕು ತಗಲಬಾರದು. ಇತರರಿಗೆ ಸುಖವನ್ನು ಹಂಚಿ ತಣಿಸುವುದು ಶ್ರೇಯಸ್ಕರವೇ ಹೊರತು, ದುಃಖವನ್ನು ಹಂಚುವುದು ಪಾಪಕರ. ನನ್ನ ದುಃಖ ನನ್ನನ್ನೆ ದಹಿಸಲೆಂದಿದ್ದೆ. ಆದರೆ...."

"ಪರರ ದೃಷ್ಟಿಯಿಂದ ನಿಮ್ಮ ನುಡಿ ನಿಜ, ಒಡೆಯ; ಆದರೆ ಚಿಕ್ಕಂದಿನಿಂದ ನಮ್ಮೆರಡು ಎದೆಗಳನ್ನು ಕೂಡಿಸಿ ಬೆಸೆದಿರಿ. ಇಂದು ಮಾತ್ರ ಬೇರೆ ಮಾಡುವಿರಾ."

"ನನ್ನ ಚಿಂತೆಯ ಚಿತೆಯಲ್ಲಿ ನೀನೂ ಸಹಗಮನ ಮಾಡಲೆಳಸುವೆಯಾ"

"ಅದಕ್ಕಿಂತ ಬೇರೆ ಭಾಗ್ಯವುಂಟೇ"

"ನನ್ನ ದುರ್ವಿಪಾಕದ ಫಲದಿಂದೊದಗುತ್ತಿರುವ ಅನಾಹುತಗಳನ್ನು ನೋಡಿದೆಯಾ"

"ಹಾಗೆನ್ನಲಾಗದು, ಒಡೆಯ"

"ನಾಡವರ ನುಡಿಗಳನ್ನು ಕೇಳಿದೆಯಾ"

"ಜನರ ಬಾಯಿಗೆ ಬೀಗವುಂಟೆ"

"ಆದರೆ ಅದನ್ನು ಕಡೆಗಣಿಸಲಾಗದು"

"ಚಿಂತಿಸಿ ಪ್ರಯೋಜನವಿಲ್ಲ, ಒಡೆಯ"

"ಅಹುದು. ಆದರೆ ಆ ಸಂತೆಯ ನುಡಿಗಳಿಂದ ನನ್ನ ಮನಸ್ಸಿನಲ್ಲಿ ಶಂಕೆ ಮೂಡುತ್ತಿದೆ"

"ನಿಮ್ಮ ಶಂಕೆಗೆ ಚಿಂತೆಯೇ ಕಾರಣ"

"ಹಾಗಲ್ಲ ವೀರಣ್ಣ; ಆ ಜನದ ನುಡಿಗಳ ಪ್ರಭಾವ ಅಷ್ಟಿಷ್ಟಲ್ಲ. ಅದಕ್ಕೆ ನನ್ನ ಸೊಸೆ—ಆ ನನ್ನ ಭಾಗ್ಯಲಕ್ಷ್ಮಿಯೇ ಸಾಕ್ಷಿ"

ವೀರಣ್ಣ ವಿಹ್ವಲನಾಗಿ "ಏನೊಡೆಯಾ"

"ಆ ನನ್ನ ಭಾಗ್ಯಲಕ್ಷ್ಮಿ ಆಡಿದ ಮಾತುಗಳನ್ನು ಕೇಳಿದಾಗಿನಿಂದ ನನ್ನ ಎದೆ ಹೊಡೆದುಕೊಳ್ಳುತ್ತಿದೆ. 'ತುಂಬುಬಸಿರಿಯನ್ನು ಬಲಿಗೊಟ್ಟರೆ ಕೋಟೆ ನಿಲ್ಲುವುದಂತೆ ನನ್ನನ್ನೆ ಕೊಲ್ಲಿ' ಎಂದಳು"

"ಆ್ಞ....ಮಾತಾಯಿ"

ಇಬ್ಬರೂ ಮೌನವನ್ನು ತಾಳಿದರು. ಕ್ಷಣ ಕಳೆದ ಮೇಲೆ ರಾಯ

"ನಿದ್ದೆ ಒತ್ತುತ್ತಿದೆ, ವೀರಣ್ಣ. ಮಲಗು ಹೋಗು. ಬೆಳಗ್ಗೆ ಮಾತಾಡೋಣ"

"ಮೂರ್ನಾಲ್ಕು ದಿನಗಳಿಂದ ನಿದ್ದೆ ಇಲ್ಲದೆ ಬಳಲಿದ್ದೀರಿ, ಮಲಗಿ. ನಿಮ್ಮ ಬಳಿ ನಾನಿರಲು ತೊಂದರೆಯೆ"

"ನನಗಾಗಿ ನೀನೇಕೆ ಎಚ್ಚರವಾಗಿ ಕುಳಿತಿರಬೇಕು"

"ನಿಮಗಾಗಿ ಅಲ್ಲ, ನನಗಾಗಿ. ಶರೀರದ ಬಾಧೆಗೂ ನಿದ್ದೆಗೂ ನಂಟುತನ ಉಂಟೇನು"

ಹಾಗೆಯೇ ರಾಯ ಹಾಸಗೆಯ ಮೇಲೊರಗಿದನು. ಮಲಗುವಾಗ ಏಕೋ ಏನೋ "ಅಂಜಿಕೆಯಲ್ಲಿ ಅವನತಿಯಿದೆ, ಆತ್ಮತ್ಯಾಗದಲ್ಲಿ ಆತ್ಮೋದ್ಧಾರವಿದೆ" ಎಂಬ ನುಡಿಗಳು ಅವನ ಮನಸ್ಸಿನಲ್ಲಿ ಹಾದುಹೋದುವು. ಒಂದೆರಡು ಗಳಿಗೆಗಳ ಕಾಲ ನಿದ್ದೆಮಾಡಿದನು. ಸ್ವಪ್ನಸುಂದರಿ ಮಾಯಾಕುಂಚಿಕೆಯನ್ನು ಹಿಡಿದು ಚಿತ್ರಗಳನ್ನು ಬರೆಯಲಾರಂಭಿಸಿದಳು. ಆಲದ ಹೊಂಗೆಯ ಮರದಡಿಯಲ್ಲಿ ಕಂಡ ಸ್ವಪ್ನದೃಶ್ಯವೇ ಮತ್ತೆ. ಅದೇ ದೇವತೆಗಳು, ಅದೇ

ಕಾಮಧೇನು ಕಲ್ಪವೃಕ್ಷ, ಅದೇ ಭಾಗ್ಯಲಕ್ಷ್ಮಿ ರಾಯನನ್ನು ತೊಡೆಯಮೇಲೆ ಮಲಗಿಸಿಕೊಂಡಳು, ಮುಂಡಾಡಿದಳು. "ವ್ಯಥೆ ಯೇಕೆ ಕಂದ. ಇಲ್ಲಿಗೆ ಬಂದಿರುವವಳು ನಾನೊಬ್ಬಳೇ ಎಂದು ತಿಳಿದಿರುವೆಯೇನು: ಅಗೋ ನೋಡಲ್ಲಿ ಆ ನನ್ನ ಸಖಿ ದುರ್ಗಿಯ ನೃತ್ಯವನ್ನು. ಇಗೋ ಈ ಕಡೆ ಆ ದಿಣ್ಣೆಯ ಬಳಿ ಕೋದ ದಡ ದಲ್ಲಿ ಹಂಸದ ಮೇಲೆ ಕುಳಿತಿರುವ ವಿಧಿರಾಣಿ. ಅಗೋ ಅಲ್ಲಿ ಧನ್ವಂತರಿ, ಅವನ ಬಳಿ ಕುಬೇರ. ಅಮರಾವತಿಯನ್ನು ಕಡೆ ಗಣಿಸಿ ಬಂದಿರುವ ದೇವೇಂದ್ರನನ್ನು ನೋಡು. ಭಯಪಡಬೇಡ ಕಂದ. ನೋಡಲ್ಲಿ ಷಡಾನನ. ಭಯಬೇಡ ನಂಬು ನಂಬು" ಎಂದಳು. ಪುನಃ ನಿಶ್ಚಲಧ್ವನಿಯಿಂದ 'ಅಂಜಬೇಡ, ಅಂಜಿಕೆ ಯಲ್ಲಿಯೇ ಅವನತಿಯಿದೆ, ಆತ್ಮತ್ಯಾಗದಲ್ಲಿ ಆತ್ಮೋದ್ಧಾರವಿದೆ' ಎಂದು ಅಲ್ಲಿಯೇ ಅಂತರ್ಧಾನಳಾದಳು. ಎಲ್ಲವೂ ಬಯಲಾ ಯಿತು; ಕಣ್ದೃಷ್ಟಿ ಹರಿಯುವತನಕ ಬಟ್ಟಂಬಯಲು. ದುರ್ಗಿ ಮಾತ್ರ ಕುಣಿಯುತ್ತಲೇ ಇದ್ದಳು. ಅವಳು ಇದ್ದಕ್ಕಿದ್ದಂತೆ ಕರಾಳ ಸ್ವರೂಪಿಯಾದಳು. ಆ ದೃಶ್ಯವನ್ನು ನೋಡುತ್ತಿದ್ದಂತೆ ರಾಯನ ತೊಡೆಗಳು ತತ್ತರಿಸಿದುವು. ನಾಳನಾಳಗಳಲ್ಲಿ ರಕ್ತದ ಒತ್ತಡ ಅಧಿಕವಾಯಿತು. ರಾಯ ಚಿಟ್ಟೆಂದು ಚೀರಿದನು. ವೀರಣ್ಣ ಭೀತಿಯಿಂದ ರಾಯನ ಕರಗಳನ್ನು ಹಿಡಿದುಕೊಂಡಳು. ಘೋರಾಂಧ ಕಾರವನ್ನು ಭೇದಿಸಿ ತೂರಿದ ಆ ಭೀಕರ ಚೀತ್ಕಾರವನ್ನು ಅರ ಮನೆಯ ಗೋಡೆಗಳು ಪ್ರತಿಧ್ವನಿಸಿದುವು. ಹಣತೆ ನಂದಿಹೋಗಿತ್ತು. ಎಲ್ಲೆಲ್ಲಿಯೂ ಕತ್ತಲೆ, ಕತ್ತಲೆಯೇ ಹೊರತು ಇನ್ನೇನೂ ಕಾಣಿಸ ಲಿಲ್ಲ. ಹೊರಗಡೆಯ ಕತ್ತಲೆಗಿಂತ ಆ ಎರಡು ಎದೆಗಳ ಕತ್ತಲೆ ದಟ್ಟವಾಗಿತ್ತು. ರಾಯ ದಡಪಡನೆ ಚೀರಿಡುತ್ತ ಹೊರಗಡೆ ಓಡಿದನು.

ವೀರಣ್ಣ ಕೈದೀಪವೊಂದನ್ನು ಹಿಡಿದು ರಾಯನನ್ನು ಹಿಂಬಾಲಿಸಿದನು. ರಾಯ ಲಕ್ಷ್ಮಮ್ಮನ ಕೋಣೆಯ ಕಡೆಗೆ ತಡವರಿಸುತ್ತ ಓಡಿದನು. ಕದಗಳೆಲ್ಲ ತೆರೆದಿದ್ದುವು. ಆ ಕೋಣೆಯಲ್ಲಿ ಲಕ್ಷ್ಮಮ್ಮನಿರಲಿಲ್ಲ. ಭೈರವನ ಪಟದೆದುರಿನಲ್ಲಿ ಸೊಡರೊಂದು ಉರಿಯುತ್ತಿತ್ತು. ರಾಯನಿಗೆ ಉಸಿರುಕಟ್ಟಿತು; ಪ್ರಾಣ ಉಡುಗಿತು; ತೊಡೆ ನಡುಗಿತು. ತಲೆಯಮೇಲೆ ಕೈ ಹೊತ್ತು ಕುಳಿತನು. ಅಷ್ಟು ಹೊತ್ತಿಗೆ ಅರಮನೆಯವರೆಲ್ಲ ಎದ್ದು ಬಂದರು. ಆಳುಗಳು ಪಂಜುಗಳನ್ನು ಹಿಡಿದು ದಿಕ್ಕುದಿಕ್ಕಿಗೂ ಓಡಿದರು. ಪಟ್ಟಣದ ಜನ ಅವರನ್ನು ಹಿಂಬಾಲಿಸಿದರು. ಉತ್ತರದಿಕ್ಕಿನ ಕೋಟೆಯ ಕಡೆ ಹೋದವರು ಗೋಳಿಟ್ಟರು. ಇಡೀ ಪಟ್ಟಣವೆಲ್ಲ ಆ ತಾಣವನ್ನು ಸೇರಿ ರೋದಿಸತೊಡಗಿತು. ಕನಸಿನ ಭಾಗ್ಯದೇವತೆಯಂತೆ ಸೊಸೆ ಲಕ್ಷ್ಮಮ್ಮನ ರುಂಡ ಮುಂಡದಿಂದ ಬೇರ್ಪಟ್ಟು ಬಿದ್ದಿತ್ತು. ಕದಪಿನಲ್ಲಿ ಅರಿಶಿನ, ಹಣೆಯಲ್ಲಿ ಕುಂಕುಮ, ಬಿಚ್ಚುಗೂದಲಲ್ಲೊಂದು ಹೂವಿನ ಎಳೆ—ಇಷ್ಟೇ ಅವಳ ಆಭರಣಗಳು. ರಕ್ತದ ಕಲೆಯಿಂದ ಕೂಡಿದ ಅರಿಸಿನ ಬಣ್ಣದ ಸೀರೆಯೊಂದು ಅವಳ ದೇಹವನ್ನು ಬಳಸಿತ್ತು. ರಾಯ ಶವದ ಬಳಿ ಕನ್ನೆತ್ತರು ಹೆಪ್ಪುಗಟ್ಟಿದ ನೆಲವನ್ನೇ ನೋಡುತ್ತ ಕುಳಿತನು. ಅವನ ಕಣ್ಣಲ್ಲಿ ಒಂದು ಹನಿ ನೀರೂ ಇಣುಕಲಿಲ್ಲ. ಅವನ ತುಟಿಯಿಂದ ಒಂದು ಬಿರುನುಡಿಯೂ ಹೊರಡಲಿಲ್ಲ. ಒಂದುಗಳಿಗೆಯೂ ಸೊಸೆಯನ್ನು ಬಿಟ್ಟಲುಗದಿದ್ದ ಚೆನ್ನಾಂಬೆ ಸದ್ದಿಲ್ಲದೆ ಕಣ್ಣೀರು ಹರಿಸಿದಳು.

ಕೋಳಿ ಕೂಗಿತು. ಹಕ್ಕಿಗಳು ರೋದಿಸಿದುವು. ಬೆಳಕು ಹರಿಯಿತು. ದಿಗಂತದಲ್ಲಿ ಇಣುಕಿದ ಸೂರ್ಯದೇವ ಮೆಲ್ಲಮೆಲ್ಲನೆ ಮೋಡಗಳ ಮುಸುಕನ್ನೆಳೆದುಕೊಂಡು ಮುದುಡಿದನು. ಆಗಸದ ಕಣ್ಣೀರೆಂಬಂತೆ ಸೋನೆ ಜಿನುಗುತ್ತಿತ್ತು. ಮುಸುಕುದಲೆಯ

ಬಾಡಿದ ಮೋರೆಯ ಗಂಡಸರು ಹೆಂಗಸರು ಅತ್ತು ಕರೆದು ಆ ಹಿರಿಯಬಾಳಿಗೆ ಕಣ್ಣೀರ ಕಾಣಿಕೆಯನ್ನು ಸಲ್ಲಿಸಿ, ರಾಯನ, ಚೆನ್ನಾಂಬೆಯ, ಮತ್ತು ಲಕ್ಷ್ಮಮ್ಮನ ಪತಿ ಸೋಮಯ್ಯನ ದೀನಾವಸ್ಥೆಯನ್ನು ನೋಡಿ ಕನಿಕರಿಸಿ ಹಿಂದಿರುಗುತ್ತಿದ್ದರು. ಕೆಲವ ರಂತೂ ಕುಳಿತ ಜಾಗವನ್ನು ಬಿಟ್ಟು ಚಲಿಸಲಿಲ್ಲ. ಎಡೆಹಗಲ ಹೊತ್ತಿಗೆ ಬಹು ಜನರು ಬಂದು ಕೂಡಿದರು. ಆ ನೆರವಿಯಲ್ಲಿ ಹನಿ ತೊಟ್ಟಿಡದ ಕಣ್ಣಿರಲಿಲ್ಲ. ಊರಿಗೆ ಪೂರ್ವಾಭಿಮುಖವಾಗಿ ಮಹಾಯಾತ್ರೆ ಸಾಗಿತು. ಚಟ್ಟದ ಮುಂದುಗಡೆ ರಾಯ ವೀರಣ್ಣನ ಭುಜವನ್ನು ಒರಗಿಕೊಂಡು ನಡೆದನು. ಶ್ಮಶಾನರೋದನ ದಿಗ್ದಿಗಂತ ಗಳನ್ನು ವ್ಯಾಪಿಸಿತು. ಲಕ್ಷ್ಮಮ್ಮನನ್ನು ತನ್ನ ಬಸುರಿನಲ್ಲಿ ಹುದುಗಿಸಿಕೊಂಡ ಅಗ್ನಿದೇವನ ಜ್ವಾಲೆ ಸಗ್ಗದತನಕ ಏರಿತು. ಮಹಾದೇವಿಯ ಸಂದರ್ಶನದ ಸೌಭಾಗ್ಯ ಲಭಿಸಿದುದಕ್ಕಾಗಿ ಧನ್ಯ ರಾದೆವೆಂದು ಜನರು ಸಂಜೆಯ ವೇಳೆಗೆ ತಂತಮ್ಮ ಮನೆಗಳನ್ನು ಸೇರಿದರು.

ರಾಯನ ಮುಖದ ಮೇಲಣ ಚಿಂತೆಯ ಮುಸುಕನ್ನು ತೆರೆ ಯಲು ವೃದ್ಧರು ಮತ್ತು ಆಪ್ತೇಷ್ಟರು ಪ್ರಯತ್ನಪಟ್ಟರು. ಕೊನೆಗೆ ರಾಯನೇ "ಅಂಜಿಕೆಯಲ್ಲಿ ಅವನತಿಯಿದೆ, ಆತ್ಮತ್ಯಾಗದಲ್ಲಿ ಆತ್ಮೋದ್ಧಾರವಿದೆ" ಎಂಬ ದೈವವಾಕ್ಯನ್ನು ನೆನೆದು ತನ್ನ ಮನ ಸ್ಸನ್ನು ಸಮಾಧಾನಸ್ಥಿತಿಗೆ ತಂದುಕೊಂಡನು; ಹೆಂಡತಿಯನ್ನು ಸಂತೈಸಿದನು. ವಂಶದ ಮಗಳಿಂದ ಆರಂಭವಾದ ಕಾರ್ಯ ಮನೆಯ ಸೊಸೆಯಿಂದ ಮುಕ್ತಾಯವಾಯಿತೆಂದುಕೊಂಡನು. ಲಕ್ಷ್ಮಮ್ಮನ ಹೆಸರಿನಲ್ಲಿ ಬೆಂಗಳೂರಿನ ಹತ್ತಿರವಿರುವ ಕೋರ ಮಂಗಲದಲ್ಲಿ ಗುಡಿಯೊಂದನ್ನು ಕಟ್ಟಿಸಿ ನಿತ್ಯಾರ್ಚನೆ ನಡೆಯು ವಂತೆ ಏರ್ಪಾಡುಮಾಡಿದನು.

ಲಕ್ಷ್ಮಮ್ಮನ ಉತ್ತರಕ್ರಿಯಾದಿಗಳು ಮುಗಿದನಂತರ ಕೋಟೆಕೊತ್ತಳಗಳ ನಿರ್ಮಾಣಕಾರ್ಯ ಪುನಃ ಪ್ರಾರಂಭ ವಾಯಿತು. ಕೋಟೆ ಮತ್ತೆ ಉರುಳಲಿಲ್ಲ! ಕೋಟೆಯ ಸುತ್ತ ಅಗಳನ್ನು ತೋಡಿಸಿದನು. ಪಟ್ಟಣವನ್ನು ಸುತ್ತುವರಿದ ಆ ಮಣ್ಣಿನ ಕೋಟೆಗೆ ಒಂಭತ್ತು ದಿಡ್ಡಿ ಬಾಗಿಲುಗಳನ್ನು ಇಡಿಸಿದ್ದನು. ಅಲ್ಲಿ ಯಾವಾಗಲೂ ಈಟಿಭರ್ಜಿಗಳನ್ನು ಹಿಡಿದ ಕಾವಲುಗಾರರು ಕಾದಿರುತ್ತಿದ್ದರು. ಮೇಲುಗಡೆ ಅಲ್ಲಲ್ಲೆ ಮುಗಿಲಟ್ಟಣೆಗಳಿದ್ದು ಶಸ್ತ್ರಾಸ್ತ್ರ ಸಜ್ಜಿತರಾದ ಕೋಟೆಗಾಪಿನ ಬಂಟರು ಅಷ್ಟದಿಕ್ಪಾಲಕರಂತೆ ಪಟ್ಟಣವನ್ನು ರಕ್ಷಿಸುತ್ತಿದ್ದರು. ಕೋಟೆಯ ಉತ್ತರ ಮಹಾದ್ವಾರದಲ್ಲಿ ಶ್ರೀ ವಿನಾಯಕ ಮತ್ತು ಆಂಜನೇಯಸ್ವಾಮಿ ಯವರ ದೇವಸ್ಥಾನಗಳನ್ನು ಕಟ್ಟಿಸಿದನು. ಜನರಿಗೆ ನೀರು ಸುಲಭ ವಾಗಿ ದೊರಕಲು ಕಾರಂಜಿ ಕೆರೆ ಕಲ್ಯಾಣಿಗಳನ್ನು ಕಟ್ಟಿಸಿದನು. ಪಟ್ಟಣದ ಸುತ್ತಲೂ ವ್ಯವಸಾಯಕ್ಕನುಕೂಲವಾಗುವಂತೆ ಗದ್ದೆ ತೋಟ ಹೊಲಗಳನ್ನು ಪಿಂಗಡಿಸಿ, ನೀರಾವರಿಯ ಸೌಕರ್ಯ ಗಳನ್ನು ಕಲ್ಪಿಸಿಕೊಟ್ಟನು. ಅಲ್ಲಲ್ಲೆ ಗುಂಡುತೋಪುಗಳನ್ನೂ ಹೂದೋಟಗಳನ್ನೂ ಬೆಳೆಸಲೂ, ಕೆರೆಕಟ್ಟೆಗಳನ್ನು ಕಟ್ಟಲೂ ರೈತ ರಿಗೆ ಪ್ರೋತ್ಸಾಹಕೊಟ್ಟನು.

ಬೆಂಗಳೂರಿನ ಸ್ಥಾಪನೆ, ಪುರರಚನಾಕೌಶಲ್ಯ, ಕೋಟೆಗೆ ಸಂಬಂಧಿಸಿದ ಕತೆ, ಜೀವನಕ್ಕೆ ಅತ್ಯವಶ್ಯವಾದ ಸೌಕರ್ಯ ಸೌಲಭ್ಯಗಳ ಕಲ್ಪನೆ—ಇವುಗಳನ್ನೆಲ್ಲ ತನ್ನ ಪ್ರತಿನಿಧಿಯ ಮೂಲಕ ಕೇಳಿದ ಅಚ್ಯುತರಾಯ ತನ್ನಲ್ಲಿಯೇ ಹಿಗ್ಗಿದನು. ಕೆಂಪೇಗೌಡನ ಸಾಹಸ, ಪ್ರಜಾನುರಾಗ, ಅವುಗಳಿಗಿಂತ ಮಿಗಿಲಾಗಿ ಅವುಗಳಿಗೆ ಹಿನ್ನೆಲೆಯಾಗಿ ಇದ್ದ ದೈವಭಕ್ತಿ ಸತ್ಯಸಂಧತೆಗಳನ್ನು ಕೊಂಡಾಡಿ ದನು. ಆ ವರ್ಷ ವಿಜಯನಗರದಲ್ಲಿ ನಡೆದ ದಸರೆಯ ಹಬ್ಬಕ್ಕೆ

ಅವನನ್ನು ಕರೆಸಿಕೊಂಡನು. ಆ ಸಮಯದಲ್ಲಿ ನಡೆದ ವಿಶೇಷ ವಾದ ದರ್ಬಾರಿನಲ್ಲಿ ಅನೇಕ ಮಾಂಡಲಿಕರು ನೆರೆದಿದ್ದಾಗ, ರಾಯನ ಗುಣಗಾನಮಾಡಿ ಅನೇಕ ಬಿರುದು ಬಾವಲಿಗಳಿಂದ ಅವನನ್ನು ಸನ್ಮಾನಿಸಿದನು. ಸ್ವಾಮಿದ್ರೋಹರ ಗಂಡ, ಅರಿರಾಯ ಭೇರುಂಡ, ಚಿಕ್ಕರಾಯ ಮೊದಲಾದ ಬಿರುದುಗಳನ್ನು ಪಡೆದು ರಾಯ ಮಾಂಡಲಿಕರಲ್ಲಿ ಅಗ್ರಗಣ್ಯನಾದನು. ಇಷ್ಟೇ ಅಲ್ಲದೆ ಬೆಂಗಳೂರಿನ ಸುತ್ತಲೂ ಇದ್ದ ಹಳೆಯ ಬೆಂಗಳೂರು, ಹಲಸೂರು ಜಿಗಣಿ, ವರ್ತೂರು, ಬೇಗೂರು, ಕುಂಬಳಗೋಡು, ತಲಘಟ್ಟ ಪುರ, ಕೆಂಗೇರಿ, ಹೆಸರುಘಟ್ಟ, ಬಾಣಾವರ, ಕಾಣಿಳ್ಳಿ ಮೊದಲಾದ ಗ್ರಾಮಗಳನ್ನೂ ಅದೇ ಹೆಸರಿನ ಹನ್ನೆರಡು ಹೋಬಳಿಗಳನ್ನೂ ಚಿಕ್ಕರಾಯನಿಗೆ ಬಹುಮಾನವಾಗಿ ಕೊಟ್ಟನು. ಇವುಗಳಿಂದಲೇ ವರ್ಷಕ್ಕೆ ೩೦,೦೦೦ ವರಹಗಳ ಆದಾಯ ಬರುತ್ತಿತ್ತು.

ವಿಜಯನಗರ ಸಾಮ್ರಾಜ್ಯದ ಏಳಿಗೆಯಲ್ಲಿ ಸತ್ಯ ಧರ್ಮಗಳ ಅಭ್ಯುದಯವನ್ನೂ, ಸಂಸ್ಕೃತಿಯ ಹೊಂಬೆಳಸನ್ನೂ, ಸ್ವಾತಂತ್ರ್ಯದ ಪರಮಾವಧಿಯನ್ನೂ, ಐಕಮತ್ಯದ ಪತಾಕೆಯನ್ನೂ ರಾಯ ಕಂಡಿದ್ದನು. ವಿಧರ್ಮಿಯರ ಕೈಸೆರೆಯಾಗಿದ್ದ ಧರ್ಮದೇವತೆಯನ್ನು ಬಿಡುಗಡೆಮಾಡಿದವರು ವಿಜಯನಗರದ ಅರಸುಗಳು. ಆದುದರಿಂದಲೇ ಅವರಲ್ಲಿ ರಾಯನಿಗೆ ಅಪಾರವಾದ ಗೌರವವಿತ್ತು. ಆ ಸಾಮ್ರಾಜ್ಯದ ಏಳಿಗೆಗಾಗಿ ಎಂತಹ ತ್ಯಾಗಕ್ಕಾದರೂ ರಾಯ ಸಿದ್ಧನಾಗಿದ್ದನು. ಆ ಸಾಮ್ರಾಜ್ಯದ ಮತ್ತು ಚಕ್ರವರ್ತಿಯ ಮಹೋನ್ನತಿ ವೈಭವಗಳನ್ನು ನೋಡಲು ರಾಯನಿಗೆ ಕಾಲಾವಕಾಶ ಸಿಕ್ಕಿತು. ದೇಶೀಯರ ಮತ್ತು ವಿದೇಶೀಯರ ಶ್ಲಾಘನೆಗೆ ಪಾತ್ರವಾಗಿದ್ದ ಆ ನಗರದ ಸಂಪತ್ಸಮೃದ್ಧಿಗಳನ್ನು ಕಂಡು ರಾಯ ಹಿಗ್ಗಿದನು. ತನ್ನ ಪಟ್ಟಣವೂ ಅದರಂತೆ ಬೆಳೆಯದೆ, ಅದರಂತಾಗದೆ, ಅದರಂತೆ

ರ್ವಜನಾದರಣೀಯವಾಗದೆ ಎಂದು ಅಂದುಕೊಂಡನು. ಪುನಃ
ಪುನಃ ಆಗದೇನು?........ಎಂದು ಸೊಸೆಯನ್ನೂ ಹಿಂದಿನ ಸ್ವಪ್ನ
ವನ್ನೂ ನೆನೆದುಕೊಂಡನು. ನವರಾತ್ರಿಯ ಕಾಲದ ಉತ್ಸವ
ಗಳನ್ನು ನೋಡಿ ನಲಿದನು. ಚಕ್ರವರ್ತಿಯ ಸನ್ಮಾನಗಳಿಂದ
ಸುಪ್ರೀತನಾದನು. ಎಲ್ಲಕ್ಕೂ ಮಿಗಿಲಾಗಿ ಆ ಪಂಪಾನಾಥನ
ಸಾನ್ನಿಧ್ಯಲಾಭದಿಂದ ಅವನ ಮನಸ್ಸಿಗೆ ಶಾಂತಿ ಲಭಿಸಿತು. ಸನಾ
ತನಧರ್ಮವನ್ನು ಉದ್ಧಾರಮಾಡಿದ ವಿದ್ಯಾರಣ್ಯರು ತಪಸ್ಸು
ಮಾಡಿದ ಪುಣ್ಯಭೂಮಿಯದು. ಅಲ್ಲಿಯೇ ಪಾಪನಾಶಿನಿಯೂ
ಸುಖದಾಯಿನಿಯೂ ಆದ ತುಂಗೆ ಎಡೆಬಿಡದೆ ಹರಿಯುತ್ತಿದ್ದಾಳೆ. ಅಲ್ಲಿ
ಯಿಂದು ಪಂಪಾನಾಥನಲ್ಲಿಗೆ ಬಂದು, ಆ ಯಾತ್ರೆಯ ಸುಯೋಗ
ತನಗೆ ಲಭಿಸಿದುದಕ್ಕಾಗಿ ಒಳಗೊಳಗೆ ಹಿಗ್ಗಿದನು.

ಚಕ್ರವರ್ತಿಯಿಂದ ಬೀಳ್ಕೊಂಡು ಊರಿಗೆ ಹಿಂದಿರುಗಿದ
ನಂತರ ರಾಯ ನಗರಾಭಿವೃದ್ಧಿ ಕಾರ್ಯದಲ್ಲಿ ನಿರತನಾದನು.
ವಿಜಯನಗರದ ವೈಭವ ಆತನ ಕಣ್ಣಿಗೆ ಕಟ್ಟಿದಂತಿತ್ತು. ತನ್ನ
ನಗರವೂ ಅಂತೆಯೇ ಆಗಬೇಕೆಂದು ಬಯಸಿ ಹಲವಾರು
ಯೋಜನೆಗಳನ್ನು ನಿರ್ಣಯಿಸಿಕೊಂಡನು. ನಾಡಿನ ನಾನಾ ಭಾಗ
ಗಳಿಂದ ನಾನಾ ವೃತ್ತಿಗಳ ಜನರು ಬಂದು ನೆಲಸಲು ಸಾಕಾದಷ್ಟು
ಪ್ರೋತ್ಸಾಹವಿತ್ತನು. ಮೊದಲೇ ಗೊತ್ತಾಗಿದ್ದಂತೆ ಒಂದೊಂದು
ವೃತ್ತಿಯವರಿಗೂ ಒಂದೊಂದು ಕಡೆ ವಸತಿಗಳನ್ನು ಹಂಚಿಕೊಟ್ಟನು.
ಇದರಿಂದ ಕೈಗಾರಿಕೆಗಳು ಸುಗಮವಾಗಿ ಅಭಿವೃದ್ಧಿ ಹೊಂದಲು
ಅನುಕೂಲವಾಯಿತಲ್ಲದೆ ಬೇರೆ ಬೇರೆ ಕಸುಬಿನವರು ತಂತಮ್ಮ
ಸಾಮಾಜಿಕ ವ್ಯವಹಾರ ಸಂಪ್ರದಾಯಗಳಿಗೆ ಯಾವ ಅಡ
ಚಣೆಯೂ ಇಲ್ಲದೆ, ಯಾವ ತಿಕ್ಕಾಟವೂ ಇಲ್ಲದೆ ನಿರಾತಂಕವಾಗಿ
ವರ್ತಿಸಲು ಸಾಧ್ಯವಾಯಿತು. ಕೈಗಾರಿಕೆ ಹೆಚ್ಚಿದಂತೆಲ್ಲ ನಗರದ

ಸಂಪತ್ತು ಹೆಚ್ಚಿತು. ಸಂಪತ್ಸಾಧನಗಳು ಯಥೇಚ್ಛವಾಗಿರುವ
ಕಡೆಗಳಲ್ಲಿ ಜನ ಮುತ್ತುವುದು ಸಹಜವೇ ಸರಿ. ಈ ಸಾಧನಗಳ
ಜತೆಗೆ ಬೆಂಗಳೂರಿನ ವಾಯುಗುಣ ಹಿತಕರವಾಗಿಯೂ ಆರೋಗ್ಯ
ಕರವಾಗಿಯೂ ಇದ್ದುದರಿಂದ ಭರತಖಂಡದ ನಾನಾ ಭಾಗಗಳಿಂದ
ಜನರು ಬಂದು ಸೇರಿದರು. ಶ್ರೀಮಂತರು, ದರಿದ್ರರು, ವಿದ್ಯಾ
ವಂತರು, ಅವಿದ್ಯಾವಂತರು, ಪಂಡಿತಪಾಮರರು, ದಾನಿಗಳು,
ಕೃಪಣರು, ಪುಣ್ಯಕರ್ಮಿಗಳು, ಪಾಪಕರ್ಮಿಗಳು, ನಾಗರಿಕರು,
ಅನಾಗರಿಕರು—ಸರ್ವರೂ ತಂಡತಂಡವಾಗಿ ಬಂದು ನೆರೆ
ದರು. ಪಟ್ಟಣದ ಬೆಳೆವಣಿಗೆಯನ್ನು ಕಂಡು ರಾಜುನಿಗೇ
ವಿಸ್ಮಯವಾಯಿತು. ತಾನು ಸ್ವಪ್ನದಲ್ಲಿ ಕಂಡಂತೆ ಅದು ಭಾಗ್ಯ
ಲಕ್ಷ್ಮಿಯ ನೆಲೆವೀಡೇ ಸರಿ ಎಂದುಕೊಂಡನು. ಮುಂದೆ ಆ
ಪಟ್ಟಣ ಬಹಳ ದೊಡ್ಡದಾಗಿ ಬೆಳೆಯುವುದರಲ್ಲಿ ಸಂದೇಹವಿಲ್ಲ
ವೆಂದು ಭಾವಿಸಿ, ಎಷ್ಟು ವಿಶಾಲವಾಗಿ ಬೆಳೆಯುವುದೆಂಬುದನ್ನು
ಊಹಿಸಿ ಅದರ ಎಲ್ಲೆಗಟ್ಟನ್ನು ನಿರ್ಧರಿಸಿದನು. ದಕ್ಷಿಣದಿಕ್ಕಿನಲ್ಲಿ
ಲಾಲ್‌ಬಾಗಿನ ಹತ್ತಿರವಿರುವ ಬಂಡೆಯ ಮೇಲೆಯೂ, ಪಶ್ಚಿಮದಲ್ಲಿ
ಕೆಂಪಾಂಬುಧಿ ಕೆರೆಯ ಏರಿಯ ಮೇಲೆಯೂ ಉತ್ತರದಲ್ಲಿ ಹೆಬ್ಬಾ
ಳಿನ ಕಡೆಗೆ ವೈಹಾಳಿದಿಣ್ಣೆಯ ಮೇಲೆಯೂ ಪೂರ್ವದಲ್ಲಿ ಹಲ
ಸೂರಿನ ಹತ್ತಿರವೂ ಅವನು ಅಂದು ಕಟ್ಟಿಸಿರುವ ಗಡಿಗೋಪುರ
ಗಳು ಇಂದಿಗೂ ರಾಯನ ದೂರದೃಷ್ಟಿತ್ವವನ್ನು ಲೋಕಕ್ಕೆ
ತೋರಿಸುತ್ತಿರುವಂತೆ ನಿಂತಿವೆ.

ಚಕ್ರವರ್ತಿ ಕೊಟ್ಟ ಹೋಬಳಿಗಳಿಂದ ಬಂದ ಹೆಚ್ಚುವರಿ
ಹುಟ್ಟುವಳಿಯನ್ನು ಧರ್ಮಕಾರ್ಯಗಳಿಗೆ ಮಾತ್ರ ಮೀಸಲಾಗಿರಿಸಿ
ದನು. ಚಕ್ರವರ್ತಿಯ ಮೇಲಣ ಆದರ ಗೌರವಗಳಿಂದ ಅವರ
ಹೆಸರಿನಲ್ಲಿಯೇ ಅನೇಕ ದಾನಧರ್ಮಗಳನ್ನು ಮಾಡಿದನು. ತನ್ನ

ಕುಲದೇವತೆಯಾದ ಕೆಂಪಮ್ಮನ ಹೆಸರಿನಲ್ಲಿ ಕೆಂಪಾಂಬುಧಿ ಕೆರೆಯನ್ನು ಕಟ್ಟಿಸಿ ನೀರಾವರಿ ವ್ಯವಸಾಯಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟುದಲ್ಲದೆ, ತಾನೇ ಸ್ವತಃ ಆ ಕೆರೆಯಕೆಳಗೆ ಬೇಸಾಯವನ್ನು ಮಾಡಿಸುತ್ತಿದ್ದನು. ಆ ಕೆರೆಯ ನೀರು ಎಂದೂ ಬತ್ತುತ್ತಿರಲಿಲ್ಲ. ಆ ಕೆರೆಯ ಬಳಿ ಗವಿಪುರದಲ್ಲಿ ಗಂಗಾಧರೇಶ್ವರ ದೇವಾಲಯವನ್ನು ಸ್ಥಾಪಿಸಿದನು. ಅಲ್ಲಿಯೇ ಒಂದೇ ಕಲ್ಲಿನಿಂದ ತ್ರಿಶೂಲ, ಡಮರುಗ ಮತ್ತು ಛತ್ರಿಗಳನ್ನು ಕೊರೆಯಿಸಿದನು. ಕೋಟೆಯ ತೆಂಕಣ ಕಡೆ ದೊಡ್ಡ ಬಸವಣ್ಣನ ಗುಡಿಯನ್ನು ಕಟ್ಟಿಸಿ ಹನ್ನೊಂದು ಅಡಿ ಎತ್ತರದ ಬಸವಣ್ಣನನ್ನು ಕೆತ್ತಿಸಿದನು. ಈ ದೇವಾಲಯದ ಹಿಂದುಗಡೆಯೇ ವೃಷಭಾವತೀನದಿಯು ಹುಟ್ಟಿ ಪಡುವಣದೆಸೆಗೆ ಹರಿಯುತ್ತದೆಂದು ಪ್ರತೀತಿಯಿದೆ. ಇಷ್ಟೇ ಅಲ್ಲದೆ ಅದರ ಪಕ್ಕದಲ್ಲಿ ವಿಘ್ನೇಶ್ವರ, ದೊಡ್ಡ ಆಂಜನೇಯ, ವೀರಭದ್ರ ದೇವಾಲಯಗಳನ್ನು ಕಟ್ಟಿಸಿದನು. ಈ ದೇವಾಲಯಗಳಲ್ಲೆಲ್ಲಾ ಪೂಜೆ ಉತ್ಸವಾದಿಗಳು ಎಂದೆಂದೂ ನಡೆಯುವಂತೆ ಕೊಡುಗೆಗಳನ್ನು ಬಿಟ್ಟನು. ಈಗಲೂ ಕಾರ್ತಿಕಮಾಸದ ಕಡೆಯ ದಿನ ಅಲ್ಲಿ ಪರಿಷೆ ಸೇರುವುದುಂಟು.

ಅನಂತರ ರಾಯನ ದೃಷ್ಟಿ ಹಲಸೂರಿನ ಕಡೆಗೆ ತಿರುಗಿತು. ಆ ಕ್ಷೇತ್ರ ಹಿಂದೆ ಘೋರಾರಣ್ಯವಾಗಿದ್ದು ಮಾಂಡವ್ಯಮಹರ್ಷಿಗಳು ಅಲ್ಲಿ ತಪಸ್ಸುಮಾಡುತ್ತಿದ್ದರೆಂದು ಪುರಾಣಗಳು ಹೇಳುತ್ತವೆ. ಅವರು ಅರ್ಚಿಸುತ್ತಿದ್ದ ಸೋಮೇಶ್ವರಲಿಂಗದ ಮೇಲೆ ಹುತ್ತ ಬೆಳೆದುಕೊಂಡಿತ್ತು. ಕೆಂಪೇಗೌಡನ ಮುತ್ತಾತನಾದ ಜಯಗೌಡನು ಕಾಡನ್ನು ಕಡಿಯಿಸಿ, ಹುತ್ತವನ್ನು ಅಗೆಯಿಸಿ ಸೋಮೇಶ್ವರಲಿಂಗವನ್ನು ಪ್ರತಿಷ್ಠೆಮಾಡಿಸಿ ಮರದಿಂದ ದೇವಾಲಯವೊಂದನ್ನು ಕಟ್ಟಿಸಿದ್ದುದಲ್ಲದೆ, ಅದರ ಸುತ್ತಲೂ ಒಂದು

ಅಗ್ರಹಾರವನ್ನು ಸಹ ಸ್ಥಾಪಿಸಿದನು. ರಾಯ ಆ ದೇವಾಲಯ ವನ್ನು ವಿಸ್ತರಿಸುವುದಕ್ಕಾಗಿ ಅಗೆಯಿಸುವಾಗ ದೊಡ್ಡದೊಂದು ನಿಧಿ ಸಿಕ್ಕಿತು. ದಕ್ಷಿಣದ ದೇಶದ ಅತ್ಯುತ್ತಮರಾದ ಶಿಲ್ಪಿಗಳನ್ನು ಕರೆ ಯಿಸಿ ಗಿರಿಜಾಕಲ್ಯಾಣದ ವಿಗ್ರಹಗಳನ್ನು ಕೆತ್ತಿಸಿದುದನ್ನು ನೋಡಿ ದರೆ ರಾಯನ ಕಲಾಭಿರುಚಿ ಎಷ್ಟು ಉನ್ನತವಾದ ಮಟ್ಟದಲ್ಲಿತ್ತೆಂ ಬುದು ವ್ಯಕ್ತವಾಗದಿರದು. ದೇವಾಲಯದಲ್ಲಿ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವಗಳು ಕ್ರಮವಾಗಿ ನಡೆಯುವಂತೆ ಏರ್ಪಾಡುಮಾಡಿ ಸಾಕಾದಷ್ಟು ದತ್ತಿಗಳನ್ನು ಬಿಟ್ಟನು. ಆ ಊರಿನ ಜನರ ಸೌಕರ್ಯಕ್ಕಾಗಿ ವಿಶಾಲವೂ ಸುಂದರವೂ ಆದ ಕೆರೆ ಯೊಂದನ್ನು ಕಟ್ಟಿಸಿದನು.

ಲಕ್ಷ್ಮಮ್ಮನ ಮರಣಾನಂತರ ರಾಜನ ಗಮನ ರಾಜ್ಯವಿಸ್ತಾ ರದ ಕಡೆಗೆ ಹೋಗಲಿಲ್ಲ. ಪಂಪಾಪತಿಯ ದರ್ಶನಾನಂತರ ಅವನ ಭಕ್ತಿ ದಿನೇ ದಿನೇ ವರ್ಧಿಸುತ್ತಿತ್ತು. ಅವನು ಅಂತರ್ಮುಖಿಯಾಗ ತೊಡಗಿ ತನ್ನ ಹೃದಯಕ್ಷೇತ್ರವನ್ನು ಹಸನುಮಾಡಿಕೊಂಡನು. ಅವನ ಅಂತರಂಗಪರಿಶುದ್ಧತೆ ಬಾಹ್ಯಾಚರಣೆಗಳಲ್ಲಿ ವ್ಯಕ್ತ ಗೊಂಡಿತು. ತಾನೊಬ್ಬ ಪರಿಶುದ್ಧಿಗೊಂಡರೆ ಸಾಲದು, ತನ್ನ ಪ್ರಜಾಸಮೂಹವೆಲ್ಲ ಭಕ್ತಿಯ ಕಡಲಿನಲ್ಲಿ ಮುಳುಗಿ ಪುನೀತರಾಗ ಬೇಕೆಂಬುದೇ ಅವನ ಹೆಬ್ಬಯಕೆಯಾಗಿತ್ತು. ಆದುದರಿಂದಲೇ ಅವನು ಎಲ್ಲಿ ಕಲ್ಲು ಸಿಕ್ಕಿತೆಂದರೆ ಅಲ್ಲೊಂದು ದೇವರ ವಿಗ್ರಹವನ್ನು ಕಡೆಯಿಸುತ್ತಿದ್ದನು. ತನ್ನ ಹೃದಯ ಪ್ರೇರಿಸಿದೆಡೆಗಳಲ್ಲೆಲ್ಲ ಒಂದೊಂದು ದೇವಾಲಯವನ್ನು ಕಟ್ಟಿಸಿ ಅಲ್ಲಿ ದೇವತಾ ಕಾರ್ಯ ಗಳು ಅಬಾಧಿತವಾಗಿ ನಡೆಯುವಂತೆ ಏರ್ಪಾಡುಮಾಡಿದನು. ಕೊಳವನ್ನು ಕಂಡಕಡೆ ಒಂದು ಮಂಟಪವನ್ನೋ, ಒಂದು ತೋಪನ್ನೋ ನಿರ್ಮಿಸಿ ದಾರಿಗರಿಗೆ ಅನುಕೂಲಮಾಡಿಕೊಡುತ್ತಿ

ದ್ದನು. ದೇವಾಲಯಗಳಿದ್ದ ಕಡೆ ಅರವಟ್ಟಿಗೆಗಳನ್ನಿಡಿಸಿ ಬಡಬಗ್ಗ
ರಿಗೆ ಮತ್ತು ಯಾತ್ರಾರ್ಥಿಗಳಿಗೆ ಭೋಜನವಸತಿಗಳ ಸೌಕರ್ಯ
ಗಳನ್ನು ಕಲ್ಪಿಸಿಕೊಟ್ಟನು.

ರಾಯ ಕೈಕೊಂಡ ಇಂತಹ ಕಾರ್ಯಗಳಲ್ಲಿ ಶಿವಗಂಗೆಯ
ಅಭಿವೃದ್ಧಿಕಾರ್ಯ ಅತಿ ಮುಖ್ಯವಾದುದು. ಇದು ಸಮುದ್ರ
ಮಟ್ಟದಿಂದ ಸುಮಾರು ೪೫೫೫ ಅಡಿಗಳು ಎತ್ತರದಲ್ಲಿದ್ದು ಅರಿ
ರಾಯರು ಭೇದಿಸಲಸಾಧ್ಯವಾದ ದುರ್ಗವಾಗಿತ್ತು. ಈ ದುರ್ಗದ
ಮೇಲುಗಡೆ ಹವ ಯಾವಾಗಲೂ ಹಿತಕರವಾಗಿರುತ್ತದೆ. ದುರ್ಗದ
ತುದಿಯಲ್ಲಿ ನಿಂತು ಪೂರ್ವದಕಡೆ ನಿಟ್ಟಿಸಿ ನೋಡಿದರೆ ಬೆಂಗಳೂರು
ಕಾಣಿಸುತ್ತದೆ. ಈ ಪುಣ್ಯಸ್ಥಳ ಅತಿ ಪ್ರಾಚೀನಕಾಲದಿಂದಲೂ
ದಕ್ಷಿಣಕಾಶಿ ಎಂದು ಹೆಸರುಪಡೆದಿದೆ. ಇಲ್ಲಿಯೇ ನಂದಿ ತಪಸ್ಸು
ಮಾಡಿ ಈಶ್ವರನನ್ನು ಮೆಚ್ಚಿಸಿದನೆಂದೂ, ಆದುದರಿಂದ ಇದಕ್ಕೆ
ಕಕುದ್ಗಿರಿಯೆಂಬ ಹೆಸರು ಬಂದಿತೆಂದೂ ಪುರಾಣಗಳು ಹೇಳುತ್ತವೆ.
ಹೊಯ್ಸಳರ ವಿಷ್ಣುವರ್ಧನನು ಇಲ್ಲಿಗೆ ಆಗಾಗ್ಗೆ ವಿಶ್ರಾಂತಿಗಾಗಿ
ಬರುತ್ತಿದ್ದನಂತೆ. ಆತನ ಹೆಂಡತಿ ಶಾಂತಲೆ ಇಲ್ಲಿಯೇ ತನ್ನ
ಕೊನೆಯ ದಿನಗಳನ್ನು ಕಳೆದಳೆಂದು ಶಾಸನಗಳು ಸಾರುತ್ತಿವೆ.
ಕಲಚೂರ್‍ಯರ ಬಿಜ್ಜಳನೂ, ಯುಗಪುರುಷ ಬಸವೇಶ್ವರನೂ ಈ
ಕ್ಷೇತ್ರಕ್ಕೆ ಆಗಾಗ್ಗೆ ತಮ್ಮ ಭಕ್ತಿಗೌರವಗಳನ್ನು ಸಲ್ಲಿಸುತ್ತಿದ್ದರು.
ಮನಶ್ಶಾಂತಿಗಾಗಿ ಇಲ್ಲಿಗೆ ಬಂದು ಭಕ್ತರು ಕಿಂಚಿತ್ತಾದರೂ ಧರ್ಮ
ಕಾರ್ಯವನ್ನು ಮಾಡಿಸದೆ ಹಿಂತಿರುಗುತ್ತಿರಲಿಲ್ಲ. ಆದುದರಿಂದ
ಬೆಟ್ಟದ ತುಂಬ ವಿಗ್ರಹಗಳನ್ನೂ ಮಂಟಪಗಳನ್ನೂ ಕಾಣಬಹುದು.
ಪ್ರಖ್ಯಾತವಾದ ದೇವಾಲಯಗಳಿರುವುದು ಬೆಟ್ಟದ ಉತ್ತರಭಾಗ
ದಲ್ಲಿ. ಬುಡದಲ್ಲಿರುವ ಹೆಬ್ಬಾಗಿಲಿನ ಮೂಲಕ ಬೆಟ್ಟವನ್ನು ಹತ್ತ
ಬೇಕು. ಈ ಹೆಬ್ಬಾಗಿಲಿನ ಮೇಲೊಂದು ಉನ್ನತವಾದ ಗೋಪುರ

ಇದೆ. ದಾರಿಯ ಎಡಗಡೆ ಗಣಪತಿ, ವೀರಭದ್ರ ಮತ್ತು ಸುಬ್ರ
ಹ್ಮಣ್ಯಸ್ವಾಮಿಯವರ ವಿಗ್ರಹಗಳಿವೆ. ಮುಂದೆ ಬಲಗಡೆ ತಿರುಗಿ
ದರೆ ಪುರಾಣಪ್ರಸಿದ್ಧವಾದ ಗಂಗಾಧರಸ್ವಾಮಿಯ ಮತ್ತು ಹೊನ್ನಾ
ದೇವಿಯವರ ದೇವಾಲಯಗಳು ಸಿಗುತ್ತವೆ. ಗಂಗಾಧರೇಶ್ವರ
ಸ್ವಾಮಿಯ ದೇವಾಲಯಕ್ಕೆ ಪೂರ್ವದಲ್ಲಿ ಕೆಂಪೇಗೌಡನ ಹಜಾರ
ಇದೆ. ಬೆಟ್ಟದ ತುದಿಯಲ್ಲಿರುವ ಧ್ವಜಸ್ತಂಭದಲ್ಲಿ ಮಕರ ಸಂಕ್ರ
ಮಣ ಹುಟ್ಟುವಾಗ ಗಂಗೋತ್ಪತ್ತಿಯಾಗುತ್ತದೆ. ಇವಲ್ಲದೆ ಇನ್ನೂ
ಅನೇಕ ಶೈವ ವೈಷ್ಣವ ಜೈನದೇವಾಲಯಗಳೂ ಲಿಂಗಾಯಿತರ
ಮಠಗಳೂ ಇವೆ. ಇಂತಹ ಪವಿತ್ರ ಕ್ಷೇತ್ರ ಕೆಂಪೇಗೌಡನ ಮನ
ಸ್ಸನ್ನಾಕರ್ಷಿಸಿದುದರಲ್ಲಿ ಆಶ್ಚರ್ಯವಿಲ್ಲ.

ಗಂಗಾಧರೇಶ್ವರಸ್ವಾಮಿಯ ಮತ್ತು ಹೊನ್ನಾದೇವಿಯವರ
ವಿಗ್ರಹಗಳು ಮೊದಲು ಓಣಿಯಂತಿದ್ದ ಗವಿಗಳಲ್ಲಿ ಪ್ರತಿಷ್ಠಾಪಿತ
ವಾಗಿದ್ದುವು. ರಾಯ ಆ ಗವಿಗಳನ್ನು ವಿಶಾಲಗೊಳಿಸಿದುದಲ್ಲದೆ,
ಅವುಗಳಿಗೆ ಬೆಸುಗೆಹಾಕಿದಂತೆ ಗರ್ಭಗೃಹ, ಕಲ್ಯಾಣಮಂಟಪ
ಪಟ್ಟಸಾಲೆಗಳನ್ನೂ, ಮೇಲುಗಡೆ ಗೋಪುರಗಳನ್ನೂ ಕಟ್ಟಿಸಿದನು.
ಚೈತ್ರಮಾಸದಲ್ಲಿ ರಥೋತ್ಸವ ನಡೆಯುವಂತೆ ಏರ್ಪಾಡುಮಾಡಿದು
ದಲ್ಲದೆ ನಿತ್ಯಪೂಜೆಗಳೂ ವಿಶೇಷೋತ್ಸವಗಳೂ ಕ್ರಮವಾಗಿ ವೈಭವ
ದಿಂದ ನಡೆಯುವಂತೆ ಕಟ್ಟುಮಾಡಿ ಅದಕ್ಕಾಗಿ ಬೇಕಾದ ಅನು
ಕೂಲಗಳನ್ನೂ ಮಿರಾಸೆಗಳನ್ನೂ ಏರ್ಪಡಿಸಿದನು. ಗಂಗೋ
ತ್ಪತ್ತಿ ಸಮಯದಲ್ಲಿ ಕಲ್ಯಾಣೋತ್ಸವಗಳು ನಡೆಯುವಂತೆ ಮೊಟ್ಟ
ಮೊದಲು ಏರ್ಪಾಡುಮಾಡಿದವನು ರಾಯನೇ. ಪರ್ವತಾರೋ
ಹಣವು ಕಷ್ಟವಾಗಿದ್ದುದರಿಂದ ಊರಿನ ನಡುಬೀದಿಯಿಂದ ಬೆಟ್ಟದ
ತುದಿಯವರೆಗೂ ಸೋಪಾನಗಳನ್ನು ಹಾಕಿಸಿದನು. ಯಾತ್ರಿಕರು
ಇಳಿದುಕೊಳ್ಳಲು ಅನುಕೂಲವಾಗುವಂತೆ ಬೆಟ್ಟದ ಬುಡದಲ್ಲಿ

ಾಲು ಸಾಲಾಗಿ ಕಲ್ಲುಮಂಟಪಗಳನ್ನು ಕಟ್ಟಿಸಿದನು. ನೀರಿನ
ೌಕರ್ಯಕ್ಕಾಗಿ ದೊಡ್ಡದೊಂದು ಕಲ್ಯಾಣಿಯನ್ನು ಸೊಗಸಾಗಿ
ತೆಗೆಯಿಸಿದನು,

ಇಷ್ಟೆಲ್ಲಾ ಧರ್ಮಕಾರ್ಯಗಳನ್ನು ಕೈಗೊಂಡ ರಾಯ ಶಿವ
ಂಗೆಯಲ್ಲಿಯೇ ಬಹಳ ದಿನಗಳ ತನಕ ಉಳಿಯಬೇಕಾಯಿತು.
ೆಳಗು ಬೈಗುಗಳಲ್ಲಿ ಹುಣ್ಣಿಮೆಯಿರುಳಿನಲ್ಲಿ ಅವನು ವೀರಣ್ಣನೊಡ
ೂಡಿ ಬೆಟ್ಟದಲ್ಲೆಲ್ಲ ಅಲೆಯುತ್ತಿದ್ದನು. ಅಲ್ಲಿ ಅವನು ಕಾಣದ
ುರುಕಿರಲಿಲ್ಲ, ಕಾಲಿಡದ ಎಡೆಯಿರಲಿಲ್ಲ. ಮಳೆಗಾಲದಲ್ಲಿ
ವ್ನೊ [illegible] ಬೆಟ್ಟದ ತುದಿಯಲ್ಲಿ ನಿಂತು ಪೈರುಪಚ್ಚೆಗಳಿಂದ ಕಂಗೊಳಿ
ುತ್ತಿ[illegible] ಹೊಲಗದ್ದೆಗಳನ್ನೂ, ತುಂಬಿ ತುಂಬಿ ನಗುತ್ತಿದ್ದ ಕೆರೆ
ೂಳಗಳನ್ನೂ ನೋಡಿ ಆನಂದಿಸುತ್ತಿದ್ದನು. ಆ ಬೆಟ್ಟ ಅವನ
ಾಲಿಗೆ ಕಲ್ಲುಮಣ್ಣುಗಳ ನಿರ್ಜೀವವಾದ ಹೆಗ್ಗುಪ್ಪೆಯಾಗಿರಲಿಲ್ಲ.
ಮಾಧಿಯಲ್ಲಿದ್ದ ಋಷಿಯಂತಿತ್ತು. ಅದು ಅವನ ಮನಸ್ಸಿಗೆ
ಾಂತಿಯನ್ನೂ, ಬಾಳಿಗೆ ನೆಮ್ಮದಿಯನ್ನೂ ಕೊಡುತ್ತಿತ್ತು. ಅಲ್ಲಿಯ
ಾರ್ಯಗಳು ಮುಗಿದಮೇಲೆಯೂ ರಾಯ ಸಂಸಾರದೊಡ
ೂಡಿ ಹೆಚ್ಚು ದಿನಗಳನ್ನು ಅಲ್ಲಿಯೇ ಕಳೆಯಲಾರಂಭಿಸಿದನು.
ೃದ್ಧರೂ, ಮಂತ್ರಿಗಳೂ, ದಂಡನಾಯಕರೂ ಅನೇಕ ದಿನ
ಳು ಅಲ್ಲಿಯೇ ತಂಗಿ ರಾಜಕೀಯ ವ್ಯವಹಾರಗಳನ್ನೂ, ಆಡಳಿತಕ್ಕೆ
ಂಬಂಧಿಸಿದ ವಿಷಯಗಳನ್ನೂ ಪರ್ಯಾಲೋಚಿಸುತ್ತಿದ್ದರು. ಹಜಾ
ವೇ ಓಲಗಸಾಲೆಯಾಗುತ್ತಿತ್ತು. ಜತೆಗೆ ಒಂದು ಬೊಕ್ಕಸ
ನ್ನೂ ಏರ್ಪಡಿಸಿಕೊಂಡನು. ಅಂತು ಶಿವಗಂಗೆ ರಾಯನ ಉಪ
ಾಜಧಾನಿಯಾಯಿತು.

೬

ತಂದೆಯಂತೆ ಮಗ, ರಾಜನಂತೆ ಪ್ರಜೆ

ಕೆಂಪನಂಜೇಗೌಡನ ಯಲಹಂಕ ಕೆಂಪರಾಯನ ಕಾಲದಲ್ಲಿ
ಯಲಹಂಕ ನಾಡಾಯಿತು. ಉತ್ತರದಲ್ಲಿ ಹೊಳವನಹಳ್ಳಿಯ
ಹತ್ತಿರದ ರಾಮಪುರದವರೆಗೂ, ಪಶ್ಚಿಮದಲ್ಲಿ ಕುಣಿಗಲವರೆಗೂ,
ದಕ್ಷಿಣದಲ್ಲಿ ಆನೇಕಲ್ಲಿನತನಕವೂ, ಪೂರ್ವದಲ್ಲಿ ಹೊಸಕೋಟೆಯ
ವರೆಗೂ ಆ ನಾಡು ಹಬ್ಬಿತ್ತು. ಆ ನಾಡಿಗೆ ಭಾಗ್ಯ[illegible]ವತೆಯ
ನೆಲೆವೀಡಾದ ಬೆಂಗಳೂರು ರಾಜಧಾನಿಯಾಯಿತು; ಧ[illegible]ದೇವ
ತೆಯ ಆವಾಸಕ್ಷೇತ್ರವಾದ ಶಿವಗಂಗೆ ಉಪರಾಜಧಾನಿಯಾಯಿತು
ಆಡಳಿತದ ಸೌಕರ್ಯಕ್ಕಾಗಿ ರಾಜ ನಾಡನ್ನು ಮೂರು ಪ್ರಾಂ
ಗಳಾಗಿ ವಿಂಗಡಿಸಿದನು. ರಾಮಗಿರಿ ಪ್ರಾಂತಕ್ಕೆ ಬಸವಯ್ಯನೂ
ಹುತ್ರಿದುರ್ಗದ ಪ್ರಾಂತಕ್ಕೆ ಕೆಂಪಸೋಮಣ್ಣನೂ ಪಾರುಪತ
ಗಾರರು. ಬೆಂಗಳೂರು ಪ್ರಾಂತವನ್ನು ರಾಯ ತಾನೇ ಇಟ್ಟು
ಕೊಂಡನು. ಈ ಮೂವರೂ ನಾಡಿನ ಮೂರು ಮೂಲೆಗಳಲ್ಲಿ
ನೆಲಸಿದುದರಿಂದ ನಾಡಿನ ರಕ್ಷಣೆ ಸುಲಭವಾಯಿತು. ರಾಯನ
ಹಗೆಗಳಂತು ತಲೆಯೆತ್ತುವಂತಿರಲಿಲ್ಲ. ಯುದ್ಧದ ಭೀತಿಯಿಲ್ಲದ
ದೇಶದಲ್ಲ ಶಾಂತಿ ನೆಲಸಿ ಪ್ರಜೆಗಳು ನೆಮ್ಮದಿಯಿಂದ ಬಾಳುತ್ತಿ
ದ್ದರು. ರಾಯನೂ ಅವನ ತಮ್ಮಂದಿರೂ ಪ್ರಜೆಗಳ ಕಲ್ಯಾಣ
ವನ್ನು ಸಾಧಿಸುವುದರಲ್ಲಿ ನಿರತರಾದರು. ಬಸವಯ್ಯ ಕೆಂಪ
ಸೋಮಣ್ಣರು ತಮ್ಮ ತಮ್ಮ ಪ್ರಾಂತಗಳಲ್ಲಿ ಸ್ವತಂತ್ರರಾಗಿದ್ದರು
ರಾಯನಿಗೂ ಅವರಲ್ಲಿ ತುಂಬ ವಿಶ್ವಾಸವಿತ್ತು.

ರಾಯನಂತೆ ಅವನ ತಮ್ಮಂದಿರೂ ನಿಸ್ಪೃಹತೆ ನಿಷ್ಠ

ಾತ ನಿಷ್ಠೆಗಳಿಂದ ಆಡಳಿತವನ್ನು ನಿರ್ವಹಿಸುತ್ತಿದ್ದರು. ರಾಯನ
್ರೀಮುಖಕ್ಕನುಸಾರವಾಗಿ ಕಾಲಕ್ಕೆ ಸರಿಯಾಗಿ ಹೆಜ್ಜುಂಕವನ್ನು
ಸೂಲಿಮಾಡಿ ಶಿವಗಂಗೆಯ ಬೊಕ್ಕಸಕ್ಕೆ ಕಳುಹಿಸುತ್ತಿದ್ದರು.
ಿವರಿಗೆ ಆಡಳಿತದಲ್ಲಿ ನೆರವು ನೀಡಲು ಕರಣಿಕರು, ಕಾವಲು
ಾರರು, ಸುಂಕದ ಅಧಿಕಾರಿಗಳು ಮೊದಲಾದವರಿಂದ ಕೂಡಿದ
ಬ್ಬಂದಿಯಿತ್ತು. ಅವರಿಬ್ಬರೂ ಆಗಾಗ್ಗೆ ಹಳ್ಳಿಗಳನ್ನು ಸುತ್ತಿ
್ರಜೆಗಳ ಕಷ್ಟನಿಷ್ಠುರಗಳನ್ನು ವಿಚಾರಿಸಿಕೊಂಡು ಅವರಿಗೆ
ೇಕಾದ [illegible]ರ್ಯಗಳನ್ನು ಕಲ್ಪಿಸಿಕೊಡುತ್ತಿದ್ದರು. ವ್ಯವಸಾಯ
ಕ್ಕನು[illegible]ವಾಗುವಂತೆ ಕೆರೆಗಳನ್ನೂ ಅಣೆಕಟ್ಟುಗಳನ್ನೂ ಕಟ್ಟಿಸು
ವುದರ[illegible], ಸಾಲು ಮರಗಳನ್ನು ನೆಡಿಸುವುದರಲ್ಲಿ, ಗುಂಡು ತೋಪು
ಗಳನ್ನು ಹಾಕಿಸುವುದರಲ್ಲಿ ಅವರಿಗೆ ಅಮಿತವಾದ ಆಸಕ್ತಿ. ಬಡವರ
ುಯಿಲು ಕೇಳಿ ಬಂದಾಗ ಏನು ಕಾರ್ಯವಿದ್ದರೂ ಬಿಟ್ಟು ಅವರ
ೆರವಿಗೆ ನಿಲ್ಲುತ್ತಿದ್ದರು. ಕಳ್ಳಸುಳ್ಳರ ಪಡೆಯನ್ನು ಕಂಡ ಕಡೆ
ಿರ್ಮೂಲ ಮಾಡುತ್ತಿದ್ದರು. ತಮ್ಮ ತಮ್ಮ ಪ್ರಾಂತಗಳಲ್ಲಿ ಅವರೇ
್ಯಾಯಾಧೀಶರಾಗಿದ್ದು ರಾಯನ ಹೆಸರಿನಲ್ಲಿ ಪಕ್ಷಪಾತವಿಲ್ಲದೆ
ೀರ್ಪು ಕೊಡುತ್ತಿದ್ದರು.

ನಾಡಿನ ಹುಟ್ಟುವಳಿ ಸುಮಾರು ಐವತ್ತು ಸಾವಿರ ಪಾಗೋಡ
ಳಷ್ಟಾಗುತ್ತಿತ್ತು. ಇಷ್ಟೆಲ್ಲ ಸುಂಕ ತೆರಿಗೆಗಳ ರೂಪದಲ್ಲಿ ಬರು
ತ್ತಿತ್ತು. ನೆಲವನ್ನು ತರಗತಿಗಳಾಗಿ ವಿಂಗಡಿಸಿದ್ದರು. ಆಯಾಯ
ರಗತಿಗಳಿಗನುಗುಣವಾಗಿ ತೆರಿಗೆ ವಿಧಾಯಕವಾಗುತ್ತಿತ್ತು.
ಾಮಾನ್ಯವಾಗಿ ಪ್ರತಿಯೊಬ್ಬನೂ ತನ್ನ ಆದಾಯದ ಮೂರರ
ಲ್ಲೊಂದು ಪಾಲನ್ನು ರಾಜನಿಗೆ ಸಲ್ಲಿಸಬೇಕಾಗಿತ್ತು. ಮನೆ ತೆರಿಗೆ,
ುಲ್ಲುಬನ್ನಿ, ದನಕರುಗಳ ಮೇಲಣ ಸುಂಕ, ಅಂಗಡಿ ಸುಂಕ,
ುಚ್ಚೆ, ಕಾಣಿಕೆ, ಗಿಡಗಾವಲು, ಮಗ್ಗದ ತೆರಿಗೆ, ಉಪ್ಪಿನ ಸೋಳಿ

—ಇವೇ ಮೊದಲಾದುವು ನಾಡಿನ ಆದಾಯವನ್ನು ಹೆಚ್ಚಿಸಿದ್ದುವು. ಇವಲ್ಲದೆ ಸಂತೆಗೆ ಬರುತ್ತಿದ್ದ ಸರಕುಗಳ ಮೇಲೆಯೂ ಸುಂಕ ವಿಧಿಸಲ್ಪಡುತ್ತಿತ್ತು. ಇವುಗಳನ್ನು ವಸೂಲಿ ಮಾಡಲು ಮಣೆಗಾರ, ಗೌಡ, ಸೇನಬೋವ, ಮತ್ತು ಕೋಲುಕಾರರು ನೇಮಕವಾಗಿದ್ದರು. ಕರಕಾಣಿಕೆಗಳನ್ನು ಹಣದ ಮೂಲಕ ಅಥವಾ ಪದಾರ್ಥಗಳ ಮೂಲಕ ತೆರಬಹುದಾಗಿತ್ತು.

ನಾಡಿನ ಉತ್ಪತ್ತಿಯಲ್ಲಿ ಐದರಲ್ಲೊಂದು ಭಾಗ ಸೈನ್ಯದ ಖರ್ಚಿಗಾಗಿಯೂ ಮದ್ದು ಗುಂಡುಗಳ ತಯಾರಿಕೆಗಾಗಿಯೂ ವಿನಿಯೋಗವಾಗುತ್ತಿತ್ತು. ರಾಯ ಎಂಟುಸಾವಿರ ಕಾಲಾಳುಗಳನ್ನೂ ಒಂದು ಸಾವಿರ ಕುದುರೆ ಸವಾರರನ್ನೂ ಇಟ್ಟಿದ್ದನು. ಕಾಲಾಳುಗಳಲ್ಲಿ ಅನೇಕರು ಹೊಲ ಗದ್ದೆಗಳನ್ನು ಮಾಡಿಕೊಂಡಿದ್ದು ರಾಯ ಕರೆದಾಗ ಸಿದ್ಧರಾಗಿ ಬರುತ್ತಿದ್ದರು. ಈ ಸೈನ್ಯಕ್ಕೆ ರಾಯನೇ ಮಹಾದಂಡನಾಯಕ; ಬಸವಯ್ಯನೇ ದಂಡನಾಯಕ. ಸೈನ್ಯದ ಬಹುಭಾಗ ರಾಮಗಿರಿ ದುರ್ಗದಲ್ಲಿತ್ತು. ಒಂದೊಂದು ಸಾವಿರ ಕಾಲಾಳುಗಳಿಗೂ ಒಬ್ಬೊಬ್ಬ ಗುರಿಕಾರ ಮುಖಂಡನಾಗಿರುತ್ತಿದ್ದನು. ಮದ್ದು ಗುಂಡುಗಳ ತಯಾರಿಕೆ ರಾಮಗಿರಿಯಲ್ಲೇ ನಡೆಯುತ್ತಿತ್ತು.

ನಾಡಿನ ಮುಖ್ಯ ದೇವಾಲಯಗಳಿಗೆ ರಾಯನೇ ಒಡೆಯನಾಗಿದ್ದನು. ಧರ್ಮ ಕಾರ್ಯಗಳೆಲ್ಲ ಅವನ ಹೆಸರಿನಲ್ಲಿಯೇ ನಡೆಯುತ್ತಿದ್ದುವು. ದೇವಾಲಯಗಳಲ್ಲಿ ನಡೆಯುತ್ತಿದ್ದ ಪೂಜೆ ಉತ್ಸವಗಳ ಖರ್ಚಿಗಾಗಿ ರಾಯನೇ ಕೊಡುಗೆಗಳನ್ನು ಬಿಟ್ಟಿದ್ದನು. ಪೂಜಾರಿಗಳ ಜೀವನಕ್ಕಾಗಿ ದತ್ತಿಗಳಿದ್ದುವಲ್ಲದೆ, ನೆರೆಹೊರೆಯ ಗ್ರಾಮಸ್ಥರು ಸುಗ್ಗಿಯ ಕಾಲದಲ್ಲಿ ದವಸವನ್ನು ಕೊಡುತ್ತಿದ್ದರು. ದೇವಾಲಯ

ಮಠ ಮತ್ತು ಅಗ್ರಹಾರಗಳು ಧಾರ್ಮಿಕ ಕಾರ್ಯಗಳ ಮತ್ತು ಶಿಕ್ಷಣದ ಕೇಂದ್ರಗಳಾಗಿದ್ದುವು; ಸಂಗೀತ ಶಿಲ್ಪವೇ ಮೊದಲಾದ ಕಲೆಗಳ ತವರಾಗಿದ್ದುವು; ಅನೇಕ ಪಂಡಿತರ ಮತ್ತು ಧರ್ಮೋಪದೇಶಕರ ಆಶ್ರಯ ಸ್ಥಾನವಾಗಿದ್ದುವು; ಒಮ್ಮೊಮ್ಮೆ ಅವೇ ನ್ಯಾಯ ಮಂದಿರಗಳಾಗುತ್ತಿದ್ದುವು. ಹಲವಾರು ಊರುಗಳ ಉತ್ಪತ್ತಿ ಅವುಗಳಿಗೆ ಸಲ್ಲುವಂತೆ ದೊರೆ ನಿರೂಪವನ್ನು ಹೊರಡಿಸುತ್ತಿದ್ದನು. ಪ್ರಯಾಣಿಕರು ಇಳಿದುಕೊಳ್ಳಲು ಅನುಕೂಲವಾಗುವಂತೆ ಅಲ್ಲಲ್ಲಿ ಅರವಟ್ಟಿಗೆಗಳೂ ವಸತಿ ಗೃಹಗಳೂ ಏರ್ಪಾಡಾಗಿದ್ದುವು. ವಿಜಯನಗರದ ಅರಸುಗಳಿಗೆ ಪುಣ್ಯ ಒದಗಲೆಂದು, ತೀರಿಕೊಂಡ ತಮ್ಮ ಹಿರಿಯರಿಗೆ ಮೋಕ್ಷ ಸಿಗಲೆಂದು ರಾಯ ಅವರ ಹೆಸರಿನಲ್ಲಿ ಅಗ್ರಹಾರಗಳನ್ನು ಬಿಡುತ್ತಿದ್ದನು.

ರಾಜ್ಯಾಡಳಿತದಲ್ಲಿ ಸಲಹೆ ಕೊಡಲು ರಾಯ ಎಂಟು ಜನ ಮಂತ್ರಿಗಳನ್ನು ನೇಮಿಸಿಕೊಂಡಿದ್ದನು. ಇವರು ಪ್ರತಿನಿತ್ಯದ ಸಾಧಾರಣ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ಕಗ್ಗಂಟಾದ ಒಗಟುಗಳು ತಲೆದೋರಿದಾಗ ಈ ಮಂತ್ರಿಗಳ ಜತೆಗೆ ನಾಡಿನ ವೃದ್ಧ ಪ್ರಮುಖರನ್ನು ಸಹ ಕರೆಸಿಕೊಂಡು ಮಂತ್ರಾಲೋಚನೆ ನಡಸುತ್ತಿದ್ದನು. ರಾಜ್ಯಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸುವಾಗ ಅವರ ತೀರ್ಪೆ ಕೊನೆಯದಾಗಿತ್ತು. ದೇಶವನ್ನು ಶತ್ರುಗಳು ಆಕ್ರಮಿಸಿದಾಗ, ನಾಡಿನಲ್ಲಿ ಕ್ಷಾಮಡಾಮರಗಳು ತಲೆದೋರಿದಾಗ ವೃದ್ಧ ಪ್ರಮುಖರ ಸಲಹೆಯಿಲ್ಲದೆ ರಾಯ ಯಾವ ಕಾರ್ಯವನ್ನೂ ಕೈಗೊಳ್ಳುತ್ತಿರಲಿಲ್ಲ. ಈ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ರಾಯ ಸಾಕಾದಷ್ಟು ಸಿಬ್ಬಂದಿಯನ್ನು ಹೊಂದಿದ್ದನು. ಮೇಲ್ತರಗತಿಯ ಅಧಿಕಾರಿಗಳನ್ನು ನೇಮಿಸಿಕೊಳ್ಳುವಾಗ ರಾಯ ಎಚ್ಚರಿಕೆಯಿಂದಿರುತ್ತಿದ್ದನು. ಆ ಅಧಿಕಾರಿಗಳು ನೀಚರಾದರೆ ಪ್ರಜೆಗಳು

ಕೆಡುತ್ತಾರೆ, ಕೆಳಗಣ ಅಧಿಕಾರಿಗಳು ಕೆಡುತ್ತಾರೆ ಎಂಬುದು ರಾಯನಿಗೆ ಗೊತ್ತಿತ್ತು.

ರಾಷ್ಟ್ರದ ಮೂಲಾಧಾರ ಸಮಾಜವಾಗಿತ್ತು. ಸಹಕಾರ ಪದ್ಧತಿ ಸಾಂಘಿಕ ಜೀವನಗಳೇ ಈ ಸಮಾಜದ ತಿರುಳಾಗಿದ್ದುವು. ಹಳ್ಳಿಗಳಿಂದ ಹಿಡಿದು ನಗರದವರೆಗೆ ಈ ಸಾಂಘಿಕ ಜೀವನವನ್ನು ಕಾಣಬಹುದಾಗಿತ್ತು. ರಾಯ ಬೆಂಗಳೂರನ್ನು ಕಟ್ಟಿಸಿದಾಗ ನಾನಾ ಪ್ರಾಂತ್ಯಗಳಿಂದ ಹಲವಾರು ಕಸಬುಗಾರರನ್ನು ಕರೆಸಿ ಅವರಿಗೆಲ್ಲ ಪ್ರತ್ಯೇಕವಾದ ವಸತಿಗಳನ್ನು ಕಲ್ಪಿಸಿಕೊಟ್ಟಿದ್ದನು. ತಮ್ಮ ತಮ್ಮ ವೃತ್ತಿಗಳನ್ನು ಅಭಿವೃದ್ಧಿಪಡಿಸುವುದಕ್ಕೂ, ತಮ್ಮ ತಮ್ಮಲ್ಲಿಯೇ ತಲೆದೋರುತ್ತಿದ್ದ ಒಡಕು ಬಿರುಕುಗಳನ್ನು ಸರಿಪಡಿಸಿಕೊಳ್ಳುವುದಕ್ಕೂ ಈ ಹೂಟ ಅನುಕೂಲವಾಗಿತ್ತು. ಇದೇ ರೀತಿ ಹಳ್ಳಿಗಳಲ್ಲಿಯೂ ಒಂದೊಂದು ಜಾತಿಗೆ ಒಂದೊಂದು ಕೂಟವಿರುತ್ತಿತ್ತು. ಒಂದೊಂದು ಕೂಟಕ್ಕೂ ಒಬ್ಬೊಬ್ಬ ಪ್ರಮುಖನಿರುತ್ತಿದ್ದನು. ಆಯಾಯ ಜಾತಿಗೆ ಸಂಬಂಧಿಸಿದ ವಿವಾದಗಳನ್ನು ಅವನೇ ತೀರ್ಮಾನಿಸುತ್ತಿದ್ದನು. ಈ ಕೂಟಗಳಿಗೆ ಮೇಲ್ಪಟ್ಟು ಕಟ್ಟೆಮನೆಗಳಿರುತ್ತಿದ್ದುವು. ಕಟ್ಟೆಮನೆಯ ಯಜಮಾನ ನಾಡಗೌಡ. ಅವನ ತೀರ್ಪೇ ಕೊನೆಯ ತೀರ್ಪು. ಹೀಗಾಗಿ ಹಳ್ಳಿಗಳ ವ್ಯಾಜ್ಯಗಳು ಹಳ್ಳಿಗಳನ್ನು ಬಿಟ್ಟು ಹೊರಗೆ ತಲೆ ಹಾಕುತ್ತಿರಲಿಲ್ಲ.

ಜಾತಿಗೆ ಸಂಬಂಧಿಸಿದ ಕೂಟಗಳಿದ್ದಂತೆ ಇಡೀ ಹಳ್ಳಿಯ ಹಿತವನ್ನು ನೋಡಿಕೊಳ್ಳಲು ಗ್ರಾಮಸಭೆ ಅಥವಾ ಗ್ರಾಮಪಂಚಾಯಿತಿಗಳಿದ್ದುವು. ಪ್ರತಿಯೊಂದು ಮನೆಯ ಯಜಮಾನನೂ ಅದರ ಸದಸ್ಯನಾಗಿರುತ್ತಿದ್ದನು. ಊರಿಗೆ ಸಂಬಂಧಿಸಿದ ಆರ್ಥಿಕ ಸಾಮಾಜಿಕ ಮತ್ತು ಧಾರ್ಮಿಕ ವ್ಯವಹಾರಗಳನ್ನು ಆ ಸಭೆಯೇ ತೀರ್ಮಾನಿಸುತ್ತಿತ್ತು. ಅಲ್ಲದೆ ಸುಂಕ ತೆರಿಗೆಗಳನ್ನು ವಸೂಲಿ

ಮಾಡಿ ಬೊಕ್ಕಸಕ್ಕೆ ಕಳುಹಿಸುವುದು, ಕೂಲಿ ಮಠಗಳನ್ನು ವ್ಯವಸ್ಥೆ
ಗೊಳಿಸಿ ವಿದ್ಯಾಪ್ರಚಾರ ಮಾಡುವುದು, ಕೆರೆ ಕಾಲುವೆಗಳನ್ನು ಸರಿ
ಪಡಿಸುವುದು, ಮಾರ್ಗಗಳನ್ನು ಗೇಯಿಸುವುದು, ದೇವಾಲಯಗಳ
ಮತ್ತು ಉತ್ಸವ ಸಮಾರಂಭಾದಿಗಳ ಮೇಲ್ವಿಚಾರಣೆ—ಮುಂತಾದ
ವ್ಯವಹಾರಗಳನ್ನು ನೋಡಿಕೊಂಡು ರಾಜ್ಯದ ಆಡಳಿತದಲ್ಲಿ ಆ ಸಭೆ
ರಾಯನಿಗೆ ನೆರವಾಗುತ್ತಿತ್ತು. ರಾಯನೂ ಹಳ್ಳಿಗಳ ಒಳ ಆಡಳಿತ
ದಲ್ಲಿ ಹೆಚ್ಚಾಗಿ ತಲೆ ಹಾಕುತ್ತಿರಲಿಲ್ಲ. ಹಳ್ಳಿಗರು ತಮಗೆ ಸಂಬಂಧಿ
ಸಿದ ವ್ಯವಹಾರಗಳನ್ನು ಹಚ್ಚಿಕೊಳ್ಳದೆ ತಂತಮ್ಮ ಕಾರ್ಯದಲ್ಲಿ
ನಿರತರಾಗಿದ್ದರು. ಕಮ್ಮಾರ, ಕೆಲಸಿ, ಅಗಸ, ತೋಟಿ, ತಳವಾರ,
ನೀರುಗಂಟಿ, ಓಜ ಮೊದಲಾದವರು ಕೃಷಿಕನಿಗೆ ನೆರವಾಗಿದ್ದರು.
ಅವರ ಸಂಸಾರಕ್ಕೆ ಸಾಕಾಗುವಷ್ಟು ಸಾಮಗ್ರಿಗಳನ್ನು—ರಾಗಿ,
ಭತ್ತ, ಮೆಣಸಿನಕಾಯಿ, ತರಕಾರಿ ಇತ್ಯಾದಿ—ಕೃಷಿಕ ಅವರಿಗೆ
ಕೊಡುತ್ತಿದ್ದನು. ಅವರಲ್ಲಿ ಮೇಲುಕೀಳೆಂಬ ಭಾವನೆಯಿರಲಿಲ್ಲ.
ಯಾವನೊಬ್ಬ ತನ್ನ ಕರ್ತವ್ಯವನ್ನು ಮಾಡದಿದ್ದರೂ ಇಡೀ ಹಳ್ಳಿಯ
ಬಾಳಿನ ಯಂತ್ರವೇ ಹದಗೆಡುತ್ತಿತ್ತು.

ಪರಾವಲಂಬನವಿಲ್ಲದ ಸ್ವಪ್ರಭುತ್ವ ಹಳ್ಳಿಗಳ ಮೂಲತತ್ತ್ವ
ವಾಗಿತ್ತು. ದಂಡು ದಾಳಿಯಿಡಲಿ, ದೊರೆ ಗದ್ದುಗೆಯಿಂದಿಳಿಯಲಿ
ಹಳ್ಳಿಯು ಬಾಳು ನಿರಂತರವಾಗಿ ಸುಲಲಿತವಾಗಿ ಸಾಗುತ್ತಿತ್ತು.
ಇಲ್ಲಿ ಒಳ್ಳೆಯ ಬಾಳನ್ನು ಅನುಭವಿಸಬೇಕು, ಮುಂದೆ ಈ ಲೋಕದ
ಋಣ ತೀರಿದ ಮೇಲೆ ಒಳ್ಳೆಯ ಗತಿ ದೊರೆಯಬೇಕು–ಇದೇ
ಹಳ್ಳಿಗರ ಜೀವನತತ್ತ್ವವಾಗಿತ್ತು. ಚೆನ್ನಾಗಿ ದುಡಿದು ಸಂಪಾದಿಸಿ
ತಾನುಂಡು, ತನ್ನವರು ತಿಂದು, ಪರರಿಗೂ ಕೈನೀಡಿ ಇಕ್ಕಬೇಕು.
ತನ್ನನ್ನು ಆಶ್ರಯಿಸಿರುವ ಜೀವರಾಶಿಗೆ ತೃಪ್ತಿಯನ್ನುಂಟುಮಾಡ
ಬೇಕು. ಅಲಸ ಜೀವನ ಶ್ರೇಯೋಭಿವೃದ್ಧಿಯ ಕುರುಹಲ್ಲ. ಪರರ

ಎಂಜಲಿಗೆ ಬಾಯಿ ಬಾಯಿ ಬಿಡುತ್ತ ತಲೆಬಾಗಿ ದೇಹವನ್ನು ಕುಗ್ಗಿಸಿ ಕೈಯೊಡ್ಡಿ ಕಾಯಬಾರದು. ಬೆವರು ಸುರಿದರೆ ದೇಹ ಶುದ್ಧವಾಗುತ್ತದೆ, ದೇಗುಲವಾಗುತ್ತದೆ. ದುಡಿಮೆಯ ಮೂಲಕ ಭಗವಂತನನ್ನು ಒಲಿಸಿಕೊಳ್ಳಬೇಕು. ನೆರೆಹೊರೆಯವರ ಮೇಲ್ಮೆ ಸಿರಿಗಳನ್ನು ನೋಡಿ ಕರುಬಬಾರದು; ಅವರು ಕೆಳಗೆ ಕುಸಿದಾಗ ಹಿಗ್ಗಬಾರದು. ಇವು ಹಳ್ಳಿಗರ ಆದರ್ಶ ಜೀವನದ ಆದರ್ಶ ತತ್ತ್ವಗಳಾಗಿದ್ದುವು. ಆದುದರಿಂದ ಜನತೆಯಲ್ಲಿ ಬಡತನವಿರಲಿಲ್ಲ, ದ್ವೇಷಾಸೂಯೆಗಳಿರಲಿಲ್ಲ. ಜನರ ಆಶೆ ಆಕಾಂಕ್ಷೆಗಳಿಗೆ ಮಿತಿಯಿತ್ತು. ಹೊಟ್ಟೆ ಬಟ್ಟೆಗಳಿಗೆ ಕೊರತೆಯಿರಲಿಲ್ಲ. ಸುಗ್ಗಿ ಬಂತೆಂದರೆ ಹಾಡು ತಾನಾಗಿಯೇ ಚಿಮ್ಮಿ ಹರಿಯುತ್ತಿತ್ತು. ಹಳ್ಳಿಗರ ಕೆಚ್ಚು ನೆಚ್ಚುಗಳು, ನಲವು ಒಲವುಗಳು, ಔದಾರ್ಯ ಸೌಜನ್ಯಗಳು, ಆತ್ಮಗೌರವ ಆತ್ಮತೃಪ್ತಿಗಳು ಅನೇಕ ಭಂಗಿಗಳಲ್ಲಿ, ಅನೇಕ ನಿಲವುಗಳಲ್ಲಿ, ಅನೇಕ ಸನ್ನಿವೇಶಗಳಲ್ಲಿ—ಅವರ ಕುಣಿತದ ಮೂಲಕ ನಗುವಿನ ಮೂಲಕ, ಹಬ್ಬ ಹರಿದಿನ ಜಾತ್ರೆಗಳ ಮೂಲಕ, ಬೆಳುದಿಂಗಳ ಕೋಲಾಟ ಕತ್ತಿವರಸೆ ದೊಣ್ಣೆವರಸೆಗಳ ಮೂಲಕ, ಯಕ್ಷಗಾನದ ಮೂಲಕ—ವ್ಯಕ್ತವಾಗುತ್ತಿದ್ದುವು.

ಯಥಾ ರಾಜ ತಥಾ ಪ್ರಜಾಃ ಎಂಬ ಹಿರಿಯರ ವಚನ ಎಂದೂ ಹುಸಿಯಾಗದು. ಗುರುವಿನಂತೆ ಶಿಷ್ಯ, ತಂದೆಯಂತೆ ಮಗ, ಹಿರಿಯ ಅಧಿಕಾರಿಯಂತೆ ಕಿರಿಯ ಅಧಿಕಾರಿ, ಹಾಗೆಯೇ ರಾಜನಂತೆ ಪ್ರಜೆ. ಕೆಂಪರಾಯನ ಸತ್ಯ ಪಕ್ಷಪಾತ ಧರ್ಮಾಭಿಮಾನ ಕರ್ತವ್ಯನಿಷ್ಠೆಗಳು ಪ್ರತಿಯೊಂದು ಹಳ್ಳಿಯಲ್ಲಿಯೂ ಮನೆಮಾತಾಗಿದ್ದುವು. ಪ್ರಜೆಗಳ ಸುಖವೇ ತನ್ನ ಸುಖವೆಂದು ರಾಯ ಅರಿತಿದ್ದನು. ಅದೇ ರೀತಿಯಲ್ಲಿ ಪ್ರಜೆಗಳು ಸಹ ರಾಯನಿಗೆ ತಮ್ಮ

ಪ್ರಾಣಗಳನ್ನು ಕೊಡಲು ಸಿದ್ಧರಾಗಿದ್ದರು. ಅಂತಹವರಿಗೆ ರಾಯ ನೆತ್ತರುಕೊಡುಗೆಗಳನ್ನು ಬಿಡುತ್ತಿದ್ದನು. ಪ್ರಜೆಗಳು ಸಹ ರಾಜನ ಹೆಸರಿನಲ್ಲಿ ದೇವಾಲಯಗಳಿಗೆ ದತ್ತಿಗಳನ್ನು ಬಿಡುತ್ತಿದ್ದರು. ಒಮ್ಮೆ ಬಿಟ್ಟ ದತ್ತಿಗಳನ್ನು, ಮಾಡಿದ ಧರ್ಮಕಾರ್ಯಗಳನ್ನು ಯಾರೂ ಅಪಹರಿಸುವಂತಿರಲಿಲ್ಲ. ಸುಗ್ಗಿಯ ಕಾಲದಲ್ಲಂತು ಜನರ ಔದಾರ್ಯಕ್ಕೆ ಪಾರವೇ ಇರಲಿಲ್ಲ.

ಮತೀಯ ಸ್ವಾತಂತ್ರ್ಯ ಪರಮತ ಸಹಿಷ್ಣುತೆಗಳು ಆ ಯುಗದ ವಿಶಿಷ್ಟ ಲಕ್ಷಣಗಳಾಗಿದ್ದುವು. ಮತೀಯ ಕಲಹಗಳೇ ಇರಲಿಲ್ಲ. ಇದ್ದರೂ ಸರಾಗವಾಗಿ ತೀರ್ಮಾನವಾಗುತ್ತಿದ್ದುವು. ಅನೇಕ ಮತೀಯರು ಒಟ್ಟಾಗಿ ಸೇರಿ ಧರ್ಮಕಾರ್ಯಗಳನ್ನು ಕೈಗೊಳ್ಳುತ್ತಿದ್ದ ಸಂದರ್ಭಗಳು ಬೇಕಾದಷ್ಟಿದ್ದುವು.

ಕೆಂಪರಾಯನ ಯುಗ ಪೌರುಷಯುಗ. ಕಳ್ಳಕಾಕರು ಮನೆಗಳಿಗೆ ನುಗ್ಗಿ ಕೊಳ್ಳೆ ಹೊಡೆದರೆ, ದನಗಳ ದೊಡ್ಡಿಗಳಿಗೆ ನುಗ್ಗಿ ತುರುಗಳನ್ನು ಅಪಹರಿಸಿಕೊಂಡು ಹೋಗುತ್ತಿದ್ದರೆ ಅಥವಾ ದುಷ್ಟರ ಕೈಗೆ ನಿರಪರಾಧಿಗಳು ಸಿಕ್ಕಿ ನರಳುತ್ತಿದ್ದರೆ ಜನರು ಒಗ್ಗಟ್ಟಿನಿಂದ ಮುನ್ನುಗ್ಗಿ ಪೀಡಕರನ್ನು ಸದೆಬಡಿಯುತ್ತಿದ್ದರು. ಕಳ್ಳಕಾಕರೊಡನೆ ಹೋರಾಡಿ ಮಡಿದ ವೀರರ ಜ್ಞಾಪಕಾರ್ಥವಾಗಿ ಅವರವರ ಕಡೆಯವರು ವೀರಗಲ್ಲುಗಳನ್ನು ಸ್ಥಾಪಿಸಿ ತಮ್ಮ ಭಕ್ತಿ ಗೌರವಗಳ ಕಾಣಿಕೆಯನ್ನು ಸಲ್ಲಿಸುತ್ತಿದ್ದರು.

೭

ಬಾಳು ಕಣ್ಣೀರಿನ ಕಣಿವೆಯೆ!

ಹುಣ್ಣಿಮೆಯ ರಾತ್ರಿ. ನಿರ್ಮಲಾಕಾಶ. ಎಲ್ಲೆಲ್ಲಿಯೂ ಹಾಲ್ದಿಂಗಳು ಹರಡಿತ್ತು. ಗಾಳಿಯ ಸಂಚಾರವಿಲ್ಲ. ಇಡೀ ಜಗತ್ತೇ

ನಿಶ್ಚೇಷ್ಟಿತವಾಗಿ ಬಿದ್ದಿದ್ದಂತೆ, ಶೂನ್ಯತೆಯಲ್ಲಿ ಅದ್ದಿದ್ದಂತೆ ಭಾಸವಾಗುತ್ತಿತ್ತು. ಈ ಜಗತ್ತಿನ, ಇಲ್ಲಿಯ ಜೀವಕೋಟಿಗಳ ಸಂತಾಪ ಸಂಕಟಗಳನ್ನು ನೋಡಿ ಪರಿಹಾಸ್ಯ ಗೈಯುವಂತೆ ನಿಶಾಪತಿ ಕಾಣುತ್ತಿದ್ದನೇ ಹೊರತು ತನ್ನ ಕಾರುಣ್ಯದ ಹೊನಲನ್ನು ಹರಿಸುವಂತಿರಲಿಲ್ಲ. ಶಿವಗಂಗೆಯ ಹಜಾರದಲ್ಲಿ ರಾಯನೊಬ್ಬನೇ ಶತಪಥ ತಿರುಗುತ್ತಿದ್ದನು. ಒಮ್ಮೆ ರಾಯ ಗಂಗಾಧರೇಶ್ವರಸ್ವಾಮಿಯ ದೇವಾಲಯದ ಕಡೆಗೆ ನೋಡಿ ನಿಟ್ಟುಸಿರುಬಿಡುತ್ತಿದ್ದನು; ಒಮ್ಮೆ ನಿದ್ರಾಮುದ್ರಿತವಾಗಿದ್ದ ಜಗತ್ತನ್ನು ನೋಡಿ ಸಂಕಟಪಡುತ್ತಿದ್ದನು; ಮತ್ತೊಮ್ಮೆ ಕಣ್ದಿಟ್ಟಿ ಹರಿಯುವ ತನಕ, ದೂರದ [illegible]ನೂರದ ಬೆಂಗಳೂರಿನವರೆಗೆ ನೋಡಿ ನೋಡಿ ನಿಶ್ಚೇಷ್ಟಿತನಾಗುತ್ತಿದ್ದನು. ಹೊರಬೇಗೆ ಆತನ ಎದೆಯ ಬೇಗೆಯನ್ನು ಅಧಿಕಗೊಳಿಸಿತ್ತು. ಹಜಾರದಲ್ಲಿ ತಿರುಗಾಡುತ್ತಿದ್ದವನು ಹಾಗೆಯೇ ದೇವಾಲಯದ ಕಡೆಗೆ ನಡೆದನು. ಗರ್ಭಗುಡಿಯಲ್ಲಿ ಸಣ್ಣ ಹಣತೆಯೊಂದು ಉರಿಯುತ್ತಿತ್ತು. ಒಳಗಡೆ ಪ್ರವೇಶಿಸಿ ದೇವರ ಎದುರು ನಿಂತು ಕೈಜೋಡಿಸಿ ತುಸುಹೊತ್ತು ಮೌನವಾಗಿದ್ದು, ಅನಂತರ “ಹೇ ದೇವದೇವ, ಅಂದೊಮ್ಮೆ ನನ್ನನ್ನು ಪರೀಕ್ಷೆಗೊಡ್ಡಿದೆ; ಮತ್ತೆ ಇಂದು ನನ್ನನ್ನು ಪರೀಕ್ಷೆಗೀಡುಮಾಡಿದ್ದೀಯೆ. ನಾನೆಷ್ಟರವನು? ನನ್ನ ಶಕ್ತಿ ಸಾಮರ್ಥ್ಯಗಳ ಆಳವನ್ನು ಕೆದಕಿ ಬೆದಕಿ ನೋಡುವುದೆ, ತಂದೆ. ಅಂದಿನ ಸಂಕಟ ನನ್ನೊಬ್ಬನದಾಗಿತ್ತು; ಇಂದಾದರೋ ಇಡೀ ರಾಜ್ಯದ, ಇಡೀ ಪ್ರಜಾಸ್ತೋಮದ ದುರ್ಭರವಾದ ಸಂಕಟವನ್ನು ಸಹಿಸಬೇಕಾಗಿದೆ. ನಮ್ಮ ಪೂರ್ವಜರ ಕಾಲದಲ್ಲೆಂದೂ ನಾಡಿನಲ್ಲಿ ಇಂತಹ ಭೀಕರ ಕ್ಷಾಮವೊದಗಿರಲಿಲ್ಲ. ಬಡವಬಲ್ಲಿದರೆಲ್ಲರು ಕಂದಮೂಲಗಳನ್ನು ತಿನ್ನುತ್ತಿದ್ದಾರೆ; ಇನ್ನೆರಡು ದಿನಗಳಲ್ಲಿ ಅದೂ ಸಿಗುವಂತಿಲ್ಲ. ಮೃಗ ಪಕ್ಷಿಗಳೂ ಸಹ ಕುಡಿಯಲು ನೀರಿಲ್ಲದೆ

ಕುಟುಕು ಜೀವದಿಂದಿವೆ. ಇದೇನು ಪ್ರಜೆಗಳ ದೌರ್ಭಾಗ್ಯವೋ ನನ್ನ ದೌರ್ಭಾಗ್ಯವೋ ಕಾಣೆ...........ನನ್ನದೇ ಇರಬೇಕು” ಎಂದು ಆರ್ತಸ್ವರದಿಂದ ಉಸುರಿದನು. ಮಹಾದೇವನಲ್ಲಿಯೇ ನಾಟಿದ ನೋಟವುಳ್ಳವನಾಗಿ ಬಹಳ ಹೊತ್ತು ಕುಳಿತನು. ಅಲ್ಲಿಂದೆದ್ದು ಹೊರಗಡೆ ಬರುವಷ್ಟರಲ್ಲಿಯೇ “ಅಯ್ಯೋ ಹಾಳು ದೊರೆಯೇ, ನಿನ್ನ ಬೊಕ್ಕಸವೆಲ್ಲಿ, ನಿನ್ನ ಧರ್ಮವೆಲ್ಲಿ, ನಿನ್ನ ಸತ್ಯವೆಲ್ಲಿ; ಅ....ಯ್ಯೋ....ಸಾವೇ ನಿನಗಾದರೂ ಕರುಣೆಯಿಲ್ಲವೇ” ಎಂಬ ಆ[illegible]ರ ಜಗತ್ತಿನ ನಿಶ್ಶಬ್ದತೆಯನ್ನೇ ಕದಡಿತು. ಬೆಟ್ಟ ಬಂಡೆ [illegible]ಗೋಪುರ, ಗಿಡಗೆಂಡೆ, ಮೃಗಪಕ್ಷಿ, ಪ್ರತಿಯೊಂದು ಸಜ[illegible]ವ ವಸ್ತುವೂ ಆ ಧ್ವನಿಯನ್ನೇ ಪ್ರತಿಧ್ವನಿಸಿದುವು. ಕಂಪನಗೊಂಡ ರಾಯನ ಎದೆಯೂ ಆ ಧ್ವನಿಗೆ ಮರುದನಿಗೊಟ್ಟಿತು. ರಾಯನಿಗೆ ಉಸಿರುಕಟ್ಟಿದಂತಾಯಿತು. ಅವಸರವಸರವಾಗಿ ಹಜಾರದೆಡೆಗೆ ಹೋಗಿ ಕಾವಲುಗಾರನನ್ನು ಕೂಗಿದನು. ಆತನಿಗೆ ಎಚ್ಚರವಾಗಲಿಲ್ಲ. “ಪ್ರಪಂಚದಲ್ಲಿ ಅರಸಾಗುವುದಕ್ಕಿಂತ ಆಳಾಗುವುದೇ ಮೇಲು. ಅವನಿಗೆ ಆಳಾದೆನೆಂಬ ಒಂದು ಸಂಕಟವಿರಬಹುದು, ಆದರೆ ರಾಜನಿಗಾದರೋ ಕೋಟಿಕೋಟಿ ಚಿಂತೆಗಳ ಕಂತೆ ಅವನು ಹುಟ್ಟಿದಾಗಲೇ ಕಟ್ಟಿಟ್ಟ ಬುತ್ತಿ. ಆಹಾ! ಅವನೆಷ್ಟು ನಿರಾತಂಕವಾಗಿ ನಿದ್ರಿಸುತ್ತಿದ್ದಾನೆ. ಆತನ ಮುಖದ ಮೇಲೆ ಎಷ್ಟು ಪ್ರಶಾಂತತೆ ಕಳಕಳಿಸುತ್ತಿದೆ. ಪಾಪ ಮಲಗಿ ನಿದ್ರಿಸಲಿ. ಆತನ ನಿದ್ದೆಯನ್ನೇಕೆ ಭಂಗಪಡಿಸಲಿ” ಎಂದುಕೊಂಡು ಲೋಡುದಿಂಬನ್ನೊರಗಿ ಕುಳಿತನು. ಮತ್ತೆ ಆ ಆರ್ತಧ್ವನಿಯೇ ಗಿರಿದುರ್ಗವನ್ನು ಭೇದಿಸಿತು; ರಾಯನ ಎದೆಯನ್ನು ಜರ್ಝರಗೊಳಿಸಿತು. ಭಟನ ಹತ್ತಿರ ಹೋಗಿ ಅವನನ್ನು ತಟ್ಟಿ ‘ತಿಮ್ಮ’ ಎಂದನು.

"ಬುದ್ಧಿ" ಎಂದು ತಿಮ್ಮ ಕಕಮಕಹಿಡಿದವನಂತೆ ಎದ್ದು ನಿಂತನು. ಆತನಿಗೆ ನಡುಕ ಹತ್ತಿತು. ತಾನು ನಿದ್ರಿಸುತ್ತಿದ್ದುದಕ್ಕಾಗಿ ಎಲ್ಲಿ ರಾಜ ಶಿಕ್ಷಿಸುವನೋ ಎಂದು ಭಯಗೊಂಡನು.

"ಹೆದರಬೇಡ, ತಿಮ್ಮ"

"ತಪ್ಪಾಯ್ತು, ಬುದ್ಧಿ"

"ನೀನೇನೂ ತಪ್ಪುಮಾಡಿಲ್ಲ. ಬಾ ಇಲ್ಲಿ, ಊರಿನ ಬೀದಿಯಲ್ಲಿ ಯಾರೋ ನನ್ನನ್ನು ನಿಂದಿಸಿ ಸಾರುತ್ತಿದ್ದಾರೆ. ಹೋಗಿ ಕರೆದು ತರುವೆಯಾ"

"ಆಗಲಿ, ಮಹಾಸ್ವಾಮಿ" ಎಂದು ಕಠಾ[illegible]ಹಿಡಿದು ತಿಮ್ಮ ಮೆಟ್ಟಲುಗಲ್ಲನ್ನಿಳಿಯುತ್ತಿದ್ದನು.

"ತಿಮ್ಮ, ಬಾ ಇಲ್ಲಿ. ಕಠಾರಿ ತಾ."

ತಿಮ್ಮ ಆಶ್ಚರ್ಯಚಕಿತನಾಗಿ ಕಠಾರಿಯನ್ನು ರಾಯನ ಕೈಗೆ ಕೊಟ್ಟನು.

"ಈಗ ಹೋಗು"

ತಿಮ್ಮ ಹೊರಟನು. ರಾಯ ಚಿಂತೆಗೆ ಸೆರೆಯಾದನು. ಒಂದೆರಡು ಗಳಿಗೆಯಲ್ಲಿಯೇ ಕಂಗೆಟ್ಟು ಕಂಗಾಲಾಗಿದ್ದ, ಹರಕು ಬಟ್ಟೆಯ ಗೂನುಬೆನ್ನಿನ ಬಡಕಲು ಮನುಷ್ಯನೊಡನೆ ರೇಗಾಡುತ್ತ ತಿಮ್ಮ ಬಂದನು.

"ಲೇ, ಹೆಚ್ಚು ಮಾತಾಡಿದೆಯೋ ಈ ನನ್ನ ಬಡಿಗೆಗೆ ಜೀವ ಕೊಡಬೇಕಾಗ್ತದೆ ನೋಡು."

"ಏನೋ ನೀನು ರಾಜನ ಕಡೆಯೋನು ಅಂತ ಜಂಬವೇನೋ. ಯಾರೋ ರಾಜ. ಜನ ಅಂಬಲಿ ಸಿಗದೆ ಬಾಯ್ ಬಾಯ್ ಬಿಡುವಾಗ ರಾಜ ಪೂಜೆ ಮಾಡ್ತಾ ಇದ್ದಾನೆಯೆ."

ತಿಮ್ಮ ತನ್ನ ಬಡಿಗೆಯನ್ನೆತ್ತಿದನು. ಆದರೆ ಅದು ಮುಂದಿದ್ದ

ವನ ಮೇಲೆ ಬೀಳುವ ಹೊತ್ತಿಗೆ, ಹಿಂದಿನಿಂದ ರಾಯ ತಿಮ್ಮನ ತೋಳನ್ನು ಬಿಗಿಯಾಗಿ ಹಿಡಿದಿದ್ದನು. ರಾಯನನ್ನು ನೋಡಿದ ರೈತ ಅಪ್ರತಿಭನಾದನು; ಮಿಳ್‌ಮಿಳನೆ ಕಣ್ ಬಿಟ್ಟನು; ಕಣ್ಣೀರು ಸುರಿಸಿದನು; ರಾಯನ ಕಾಲುಗಳ ಮೇಲೆ ಉರುಳಿದನು. "ಅಯ್ಯೋ ಏನ್ ಹೊಳಪು, ಏನ್ ಕರುಣ, ನನ್ನೊಡೆಯ ಕಾಣದೆ ಬಯ್ದೆ, ಕಾಪಾಡಿ, ತಂದೆ" ಎಂದನು. ರಾಯ ಆತನ ಮುಖದಲ್ಲಿ ಕ್ಷಾಮ ದೇವತೆಯ ನರ್ತನವನ್ನು ಕಂಡನು; ಇಡೀ ದೇಶದ ಬಡತನದ ಪ್ರತಿಬಿಂಬವ[illegible]ಡನು. ರಾಯ ಆತನ ಮೈಸವರಿ "ಹೆದರಬೇಡ, ಅಜ್ಜ, [illegible]ರಬೇಡ. ಹಣೆಯ ಬರಹವನ್ನು ಮೀರುವವರಾರು? ಏಕೆ [illegible]ರೋದನ."

"ತಂದೆ, ಈ ವರ್ಸ ಬೆಳೆ ಆಗ್ಲಿಲ್ಲ; ಕುಡಿಯೋಕೆ ನೀರಿಲ್ಲ; ದನ್ನ ಉಳ್ಳೋರು ದನ್ನ ಕೊಡಲಿಲ್ಲ. ಕೈಲಿ ಕಾಸಿಲ್ಲ. ಹೆಂಡ್ತಿ ಮಕ್ಳೆಲ್ಲ ಸತ್ರು. ಉಳಿದೋವ ನಾನೊಬ್ಬ. ಇಲ್ಲಾದ್ರೂ ಸಾಯೋಣ ಅಂತ ಬಂದೆ. ಜವರಾಯನಿಗೂ ನಾನು ಬೇಡ ಅಂತ ಕಾಣ್ತದೆ" ಎಂದು ಒಂದೇ ಸಮನೆ ಹೇಳಿದನು, ರೈತ. ರಾಯನಿಗೆ ರೈತನ ಮೇಲೆ ಸ್ವಲ್ಪವು ಕ್ರೋಧ ಮೂಡಲಿಲ್ಲ. ಅವನ ಹಿಂದಿನ ಬೈಗುಳ ನಿರಾಶೆಯ ಹೃದಯದಿಂದ ಹೊರಟುವೆಂದರಿತನು. ಬಡತನದ ಭೀಕರತೆಯನ್ನು ಕಣ್ಣಾರೆ ನೋಡಿದನು. ಆ ಮುದುಕನ ಕೈಯಲ್ಲಿ ಒಂದೆರಡು ಹೊನ್ನುಗಳನ್ನಿರಿಸಿ ಕಳುಹಿಸಿಕೊಟ್ಟು, ತಾನು ತನ್ನ ಬೀಡಾರವನ್ನು ಸೇರಿದನು.

ಮಾರನೆಯ ಬೆಳಗ್ಗೆ ಎಂದಿನಂತೆ ಹಜಾರದಲ್ಲಿ ಒಡ್ಡೋಲಗ ಸೇರಿತು. ಅಂದಿನ ಒಡ್ಡೋಲಗದಲ್ಲಿ ಹಿಂದಿನ ವೈಭವ ಕಾಣಲಿಲ್ಲ. ಚಿಂತಾಮಗ್ನರಾದ ವೃದ್ಧ ಪ್ರಮುಖರೂ, ಮಂತ್ರಿಗಳೂ, ದಂಡನಾಯಕರೂ ರಾಯನ ಸಮ್ಮುಖದಲ್ಲಿ ಕುಳಿತರು. ಹಿಂದಿನ ರಾತ್ರಿ

ನಡೆದ ಘಟನೆಯನ್ನೂ, ಬೇಹುಗಾರರಿಂದ ಅರಿತ ನಾಡಿನ ಸಮಾಚಾರವನ್ನೂ ರಾಯ ವಿವರಿಸಿದನು. ತನ್ನ ದೌರ್ಭಾಗ್ಯದಿಂದ ಬೊಕ್ಕಸ ಬರಿದಾಯಿತೆಂದೂ, ಅದೇ ಸಮಯಕ್ಕೆ ಸರಿಯಾಗಿ ಕ್ಷಾಮದ ಪೀಡೆ ಪ್ರಲಯ ನರ್ತನವೆಸಗುತ್ತಿದೆಯೆಂದೂ ನುಡಿದನು. ಸೊರಗಿ ಸುಕ್ಕು ಹಿಡಿದ ಮೋರೆಯ ಬೆಳ್ನವಿರ ತಲೆಯ ವೃದ್ಧ ಪ್ರಮುಖನೊಬ್ಬ ಎದ್ದು ಕೈಮುಗಿದು "ಜೀಯಾ, ಇಂದಿನ ಕ್ಷಾಮಕ್ಕೆ ತಾವು ಖಂಡಿತವಾಗಿ ಕಾರಣರಲ್ಲ, ಪ್ರಜೆಗಳೂ ಕಾರಣರಲ್ಲ. ಇದೆಲ್ಲವೂ ದೈವೇಚ್ಛೆ. ಇಂತಹ ಪರಿಸ್ಥಿತಿ[illegible] ಕೆಚ್ಚೆದೆಯಿಂದ ಎದುರಿಸುವುದು ನಮ್ಮೆಲ್ಲರ ಪ್ರಮುಖ ಕರ್ತ[illegible]ವಾಗಿದೆ. ಪ್ರಜೆಗಳಾದರೂ ಪ್ರಭುಗಳಲ್ಲಿ ಅಚಲವಾದ ಪ್ರೇಮ ವಿ[illegible]ಗಳನ್ನಿಟ್ಟಿದ್ದಾರೆ. ಯಾವನೋ ಒಬ್ಬ ಯಃಕಶ್ಚಿತ್ ಮನುಷ್ಯ ಆನೆಯನ್ನು ನೋಡಿ ಬಗುಳುವ ನಾಯಿಯಂತೆ, ಪ್ರಭುಗಳನ್ನು ನಿಂದಿಸಿದರೆ, ಅದರಿಂದ ಪ್ರಭುಗಳ ಚಿತ್ತ ವ್ಯಾಕುಲಗೊಳ್ಳಬಾರದು. ತಮ್ಮಂತಹ ರಾಜರ್ಷಿಗಳನ್ನು ಪಡೆದ ನಾವು, ತಮ್ಮಂತಹ ಮಾಂಡಲಿಕರನ್ನು ಪಡೆದ ವಿಜಯನಗರದ ಅರಸುಗಳು, ಎಲ್ಲರೂ ಧನ್ಯರೇ ಸರಿ. ಪ್ರಭುಗಳ ಭೋಗವಿಲಾಸಕ್ಕಾಗಿ ಬೊಕ್ಕಸ ಬರಿದಾಗಲಿಲ್ಲ; ಕೆರೆ ಗುಂಡಿ ಗೋಪುರಗಳ ಕಟ್ಟಡಕ್ಕೆ, ದಾನಧರ್ಮಗಳಿಗೆ ವಿನಿಯೋಗವಾಯಿತು. ಸಮುದ್ರದಿಂದ ಆವಿಯಾಗಿ ಹೊರಟ ನೀರು ಮತ್ತೆ ಮೋಡವಾಗಿ ಮಳೆಯ ರೂಪದಲ್ಲಿ ಸುರಿದು ಸಮುದ್ರವನ್ನು ಸೇರುವಂತೆ ಪ್ರಜೆಗಳ ದುಡ್ಡು ಪ್ರಜೆಗಳನ್ನೇ ಸೇರಿತು. ಅಲ್ಲಿ ಇಲ್ಲಿ ಅಲ್ಪ ಸ್ವಲ್ಪ ದವಸ ಸಾಮಗ್ರಿಗಳು ದೊರಕುತ್ತಿದ್ದರೂ ಅವುಗಳನ್ನು ಕೊಳ್ಳಲು ಪ್ರಜೆಗಳ ಹತ್ತಿರ ದುಡ್ಡಿಲ್ಲ. ಅವರಿಗೆ ದುಡ್ಡು ಸುಲಭೋಪಾಯದಲ್ಲಿ ದೊರಕುವಂತೆ ಮಾಡಬೇಕಾದುದೇ ನಮ್ಮ ಕರ್ತವ್ಯವಾಗಿದೆ." ಎಂದು ಹೇಳಿ ಕುಳಿತನು. "ಪ್ರಜೆಗಳಿಂದಂತೂ

ಈ ಸಾರಿ ಒಂದು ಬಿಲ್ಲೆಯೂ ಹುಟ್ಟುವಳಿ ಬರುವಂತಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಯಾರು ತಾನೇ ತೆರಿಗೆಗಳನ್ನು ಕೊಟ್ಟಾರು? ಆದುದರಿಂದ ನಾವೇ ಒಂದು ಟಂಕಶಾಲೆಯನ್ನು ಏರ್ಪಡಿಸಿಕೊಂಡು ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತರಬೇಕಾಗುತ್ತದೆ. ಬೇರೆ ಯಾವುದೂ ದಾರಿಯಿಲ್ಲ. ಆದರೆ ಈ ಉದ್ಯಮಕ್ಕೆ ಚಕ್ರವರ್ತಿಗಳ ಅನುಮತಿ ಅವಶ್ಯವೆಂದು ಕಾಣುತ್ತದೆ" ಎಂದು ರಾಯ ಹೇಳಿದನು. ಅದಕ್ಕೆ ಪ್ರತ್ಯುತ್ತರವಾಗಿ ಮತ್ತೊಬ್ಬ ವೃದ್ಧಮಂತ್ರಿ "ಯಲಹಂಕ ನಾಡಿನ [illegible]ಳು ಹಿಂದಿನಿಂದಲೂ ಧರ್ಮದಿಂದ ಈ ರಾಜ್ಯವನ್ನು ಪರಿಪ[illegible] ಕೊಂಡು ಬಂದಿದ್ದಾರೆ. ಅವರು ಯಾವಾಗಲೂ ವಿಜಯನಗ[illegible]ಮ್ರಾಜ್ಯದ ಹಿತಪ್ರಗತಿಗಳನ್ನೇ ಕೋರುತ್ತ ಬಂದಿದ್ದಾರೆ. ಆ ಸಾಮ್ರಾಜ್ಯವನ್ನು ತೊಡೆಯಲು ಯತ್ನಿಸಿದ ಹಲವಾರು ಪುಂಡರನ್ನು ಮುರಿದಿದ್ದಾರೆ. ಕೃಷ್ಣದೇವರಾಯ ಅಚ್ಯುತರಾಯರು ಪ್ರಭುಗಳ ಗುಣಾತಿಶಯವನ್ನು ಔದಾರ್ಯದಿಂದ ಕೊಂಡಾಡಿ ಸನ್ಮಾನಿಸಿದ್ದಾರೆ. ಈಗ ತಾನೆ ಪಟ್ಟಕ್ಕೆ ಬಂದಿರುವ ಸಾರ್ವಭೌಮ ಸದಾಶಿವರಾಯರೂ ತಮ್ಮ ಪೂರ್ವಜರಂತೆಯೇ ಔದಾರ್ಯದಿಂದ ನಡೆದುಕೊಳ್ಳುವುದರಲ್ಲಿ ಸಂದೇಹವಿಲ್ಲ. ಯಲಹಂಕನಾಡು ಆ ಸಾಮ್ರಾಜ್ಯದ ಒಂದು ಪ್ರಧಾನಾಂಗ ಮಾತ್ರ. ಆದುದರಿಂದ ಇಲ್ಲಿ ಉಂಟಾಗಿರುವ ಕ್ಷಾಮರೋಗ ಇಡೀ ಸಾಮ್ರಾಜ್ಯವನ್ನೆ ತೊಂದರೆಗೀಡು ಮಾಡಬಹುದು. ಆದುದರಿಂದ ಪ್ರಜೆಗಳ ನೆಮ್ಮದಿಯ ದೃಷ್ಟಿಯಿಂದ ನಾಣ್ಯಗಳನ್ನು ಮುದ್ರಿಸುವುದೇನೂ ತಪ್ಪಲ್ಲ. ಸಾಮ್ರಾಜ್ಯದ ಹಿತವನ್ನು ಕೋರುವವರೆಲ್ಲ ಈ ಉದ್ಯಮವನ್ನು ಮನ್ನಿಸಲೇಬೇಕು" ಎಂದು ಸ್ವಲ್ಪ ಆವೇಶದಿಂದ ನುಡಿದು ಕುಳಿತನು. ಸಭಿಕರೆಲ್ಲರೂ ಏಕಕಂಠದಿಂದ ಈ ಅಭಿಪ್ರಾಯವನ್ನೇ ಅನುಮೋದಿಸಿದರು.

ರಾಯನು ವೃದ್ಧಮಂತ್ರಿಯ ಹುರುಪು ಹುಮ್ಮಸ್ಸುಗಳನ್ನು

ಶ್ಲಾಘಿಸಿದನು. ಆದರೆ ವಿಜಯನಗರದ ಅರಸು ಸದಾಶಿವರಾಯ ಹಿಂದಿನ ಅರಸುಗಳಂತಿರಲಿಲ್ಲವೆಂಬುದನ್ನು ನೆನೆದುಕೊಂಡನು. ಅವನು ಹೆಸರಿಗೆ ಮಾತ್ರ ರಾಜನಾಗಿದ್ದನು. ರಾಜ್ಯದ ಆಡಳಿತ ಸೂತ್ರಗಳು ಕೃಷ್ಣದೇವರಾಯನ ಅಳಿಯನಾದ ರಾಮರಾಜನ ಹಿಡಿತದಲ್ಲಿದ್ದುವು. ರಾಮರಾಜ ಶೂರ, ದಕ್ಷ, ಆದರೆ ದರ್ಪಿಷ್ಠ, ನಿಷ್ಕರುಣಿ, ಸದಾಶಿವರಾಯ ಆತನ ಕೈಗೊಂಬೆಯಾಗಿದ್ದನು. ಹೊಸ ನಾಣ್ಯಗಳ ಚಲಾವಣೆಯೇ ಕಾರಣವಾಗಿ ರಾಮರಾಜ ತನ್ನ ಮೇಲೆ ಕೋಪಕಾರಲು ಯತ್ನಿಸಬಹುದೆಂದು ಶಂಕಿಸಿದನು. ನೆನೆದ ಕಾರ್ಯವನ್ನು ಕೈಗೊಳ್ಳದಿದ್ದರೆ ಪ್ರಜೆಗಳ ತಾಪ ಹೆಚ್ಚುವುದೆಂದು ಬೆದರಿದನು. ಇತ್ತ ದರಿ ಅತ್ತ ಪುಲಿ. ಹಾಗೆಯೇ ಸ್ವಲ್ಪ ಹೊತ್ತು ತನ್ನೊಳಗೆ ಯೋಚಿಸುತ್ತಿದ್ದು “ಅಹುದು, ನನ್ನ ರಾಜ್ಯದಲ್ಲಿ ನನ್ನ ಪ್ರಜೆಗಳಿಗಾಗಿ ಇಂತಹದೊಂದು ಉದ್ಯಮವನ್ನು ಕೈಗೊಳ್ಳಲು ನನಗೆ ಸ್ವಾತಂತ್ರ್ಯವಿಲ್ಲವೇ? ಹಾಗಾದರೆ ನಾನು ರಾಜನಾಗಿದ್ದು ಪ್ರಯೋಜನವೇನು? ನಾನು ಆ ಅರಸುಗಳಿಗೆ ಗೆಳೆಯನೇ ಹೊರತು ಆಳಲ್ಲ. ವಿಜಯನಗರ ಸಾಮ್ರಾಜ್ಯಕ್ಕೆ ಚ್ಯುತಿಸಂಭವಿಸದಂತೆ, ನನ್ನ ಪ್ರಜೆಗಳ ಕ್ಷೇಮಕ್ಕಾಗಿ ಈ ಉದ್ಯಮವನ್ನು ಕೈಗೊಳ್ಳುವುದರಲ್ಲಿ ತಪ್ಪೇನಿದೆ?” ಎಂದು ನಿರ್ಧರಿಸಿಕೊಂಡನು. ಸಭಿಕರಿಗೆ ತನ್ನ ಮನೋನಿಶ್ಚಯವನ್ನು ತಿಳಿಸಿದನು. ಭೈರವದೇವರ ಹೆಸರಿನಲ್ಲಿ ನಾಣ್ಯಗಳನ್ನು ಮುದ್ರಿಸುವುದೆಂದು ಕೊನೆಗೆ ತೀರ್ಮಾನವಾಯಿತು. ಅಂದಿನ ಓಲಗ ಅಲ್ಲಿಗೆ ಹರಿಯಿತು. ಅಂದೇ ಕೆಂಪರಾಯ ತನ್ನ ನಿರ್ಧಾರವನ್ನು ಸೂಚಿಸಿ ಸದಾಶಿವರಾಯನಿಗೆ ಪತ್ರ ಬರೆದನು.

ಮಾನವನ ಬಾಳು ನಿಲ್ಲಬಹುದು; ಕಾಲನದಿ ಮಾತ್ರ ಯಾರಿಗೂ ಕಾಯದೆ ಹರಿಯುತ್ತಿರುತ್ತದೆ. ಈ ನದಿಯಲ್ಲಿ ಮಾನವ ಸೋಗೆಯಂತೆ ತೇಲುತ್ತಿರುತ್ತಾನೆ. ಅವನು ಎಷ್ಟೇ ಪ್ರಬಲನಾದರೂ

ಸಾಹಸಿಗನಾದರೂ ದೈವೇಚ್ಛೆಗೆ ಮಣಿಯಬೇಕಾಗುತ್ತದೆ. ಮಣಿಯ ಬೇಕಾಗಬಹುದು, ಅಷ್ಟೆ; ಅಂಜಬೇಕಾಗಿಲ್ಲ. ವಿನಯದಿಂದ ಮಣಿದು ಮುನ್ನುಗ್ಗಿದರೆ ಗುರಿ ಎಟಕುತ್ತದೆ; ಅಂಜಿ ಮಣಿದು ಗೋಳಾಡಿದರೆ ಪತನ ಸಿದ್ಧವಾಗುತ್ತದೆ. ಜೀವನ ಎಂದೂ ಶಿರೀಷ ಪುಷ್ಪದ ಹಾಸುಗೆಯೆಂದು ಗಣಿಸಬಾರದು. ಬಾಳೆಂಬ ಚಿನ್ನ ಜಗತ್ತಿನ ಕುಲುಮೆಯಲ್ಲಿ ಕಷ್ಟಗಳ ಬೆಂಕಿಯಲ್ಲಿ ಬೆಂದು ಬಂದಾಗ ಮಾತ್ರ ಹಸನಾಗುತ್ತದೆ. ಪ್ರಜಾವತ್ಸಲನೂ, ಧರ್ಮಜ್ಞನೂ, ದೈವಭಕ್[illegible]ದ ಕೆಂಪರಾಯ ತನಗೊದಗಿದ ಗಂಡಾಂತರಗಳನ್ನು [illegible]ಗಿಲ್ಲದೆ ದಾಟಿದನು; ಆದರೆ ಅವು ಮುಂದೊದಗಬಹುದಾ[illegible]ಡಾಂತರಗಳಿಗೆ ಕೇವಲ ಪೀಠಿಕೆಯಂತಿದ್ದುವು.

[illegible]ನ್ನಪಟ್ಟಣದ ಜಗದೇವರಾಯ ಹಿಂದಿನಿಂದ ರಾಯನ ಮೇಲೆ ಹಠವನ್ನು ಸಾಧಿಸುತ್ತಿದ್ದನಷ್ಟೆ. ಬೆಂಗಳೂರಿನ ಸ್ಥಾಪನೆ, ವಿಜಯನಗರದ ದೊರೆಗಳಿಂದ ದೊರೆತ ಸನ್ಮಾನ—ಇವುಗಳಿಂದ ಅವನ ಕ್ರೋಧಾನಲ ಮತ್ತಷ್ಟು ಉಜ್ಜ್ವಲವಾಯಿತು. ಬಲಪ್ರಯೋಗದಿಂದ ರಾಯನನ್ನು ಸೋಲಿಸಲಾಗುವುದಿಲ್ಲವೆಂದು ತಿಳಿದು ಭೇದೋಪಾಯದಿಂದಾದರೂ ಆತನ ಯಶಶ್ಚಂದ್ರಿಕೆಗೆ ಕಳಂಕವನ್ನು ತರಬೇಕೆಂದು ಹವಣಿಸುತ್ತಿದ್ದನು. ರಾಮಗಿರಿದುರ್ಗದಲ್ಲಿದ್ದ ಬಸವಯ್ಯನೊಡನೆ ಗೆಳೆತನವನ್ನು ಬೆಳೆಸಲುಪಕ್ರಮಿಸಿದನು. ಬಸವಯ್ಯ ಪರಾಕ್ರಮಿ, ನಿಷ್ಕಪಟಿ; ಆದರೆ ಸಮಯೋಪಾಯಚತುರನಲ್ಲ, ಪರರ ಕುಟಿಲತನವನ್ನು ಅರಿಯಲು ಶಕ್ತನಲ್ಲ. ಚನ್ನಪಟ್ಟಣದವನು ತನ್ನ ಹಿಂದಿನ ದುಷ್ಕೃತ್ಯಗಳಿಗಾಗಿ ಪಶ್ಚಾತ್ತಾಪವನ್ನು ನಟಿಸಿದಾಗ ಅವನು ನಿಜವಾಗಿಯೂ ನಿಷ್ಕಪಟಿಯೆಂದೇ ಬಸವಯ್ಯ ಭಾವಿಸಿದನು. ಬಸವಯ್ಯನ ದೌರ್ಬಲ್ಯವನ್ನರಿತ ಪಾಳೆಯಗಾರ ಅವನನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡನು. ಕೆಂಪ

ರಾಯ ರೈತರನ್ನೆಲ್ಲ ಸುಲಿದು ಶಿವಗಂಗೆಯ ಬೊಕ್ಕಸವನ್ನು ತುಂಬಿ
ಕೊಂಡಿದ್ದುದಾಗಿಯೂ, ಅಜೇಯನಾದ ತಮ್ಮನಿದ್ದೂ ತನ್ನ ಮಗ
ನಿಗೆ ಯೌವರಾಜ್ಯಾಭಿಷೇಕ ಮಾಡಲು ಹವಣಿಸುತ್ತಿದ್ದುದಾಗಿಯೂ
ಪಾಳೆಯಗಾರ ಸುಳ್ಳು ಸಮಾಚಾರ ಹುಟ್ಟಿಸಿದನು. ಬಸವಯ್ಯ
ಆ ಸುದ್ದಿಗೆ ಕಿವಿಗೊಡಲಿಲ್ಲ. ಆದರೆ ಆ ಪಿಸುಣ ಸುಮ್ಮನಿರಲಿಲ್ಲ.
ಒಂದು ದಿನ ಬೇಟೆಯನ್ನು ನೆಪಮಾಡಿಕೊಂಡು ಬಸವಯ್ಯನನ್ನು
ಕಾಡಿಗೆ ಕರೆದುಕೊಂಡು ಹೋದನು. ಆತನ ಮುಂದೆ ಈ ವಿಷಯ
ವನ್ನು ಎತ್ತುವ ಹಾಗೆ ಮೊದಲೇ ಪಾಳೆಯಗಾರ[illegible] ಮಂತ್ರಿಗೆ
ನಿಯಾಮಕಮಾಡಿದ್ದನು. ಮಂತ್ರಿ ಆ ವಿಷಯವನ್ನೆತ್ತಿ[illegible] ಪಾಳೆ
ಯಗಾರ ತಾನೇ ಅದು ಗಾಳಿಮಾತೆಂದು ಮೊದಮೊದ[illegible]ರಾ
ಕರಿಸಿದನು. ಮಂತ್ರಿ ಅಷ್ಟಕ್ಕೆ ಬಿಡಲಿಲ್ಲ. ಅಂತು ಪಾಳೆಯ
ಗಾರನಿಗೆ ಅಂದು ಅರಣ್ಯದ ಬೇಟೆ ಲಭಿಸದಿದ್ದರೂ ತನ್ನ ಇಚ್ಛೆಯ
ಬೇಟೆ ಸಿದ್ಧಿಸಿತು. ಬಸವಯ್ಯನ ಎದೆಯ ಬಟ್ಟಲಲ್ಲಿ ನಂಜನ್ನು
ತುಂಬಿದನು. ಬಸವಯ್ಯ ಹಿಂದು ಮುಂದುಗಳನ್ನು ಆಲೋಚಿ
ಸದೆಯೇ ಯೌವರಾಜ್ಯಾಭಿಷೇಕದ ಪ್ರಸ್ತಾಪವನ್ನೆತ್ತಿ ಅಣ್ಣನಿ
ಗೊಂದು ಕಾಗದವನ್ನು ಬರೆದನು. ರಾಯ ಆ ವಿಷಯವನ್ನು
ಯಾರಿಗೂ ತಿಳಿಸಲಿಲ್ಲ. ಅಲ್ಲದೆ ಪಿಸುಣರಿಂದ ನಡೆದ ಕಾರ್ಯ
ವೆಂದು ತೀರ್ಮಾನಿಸಿಕೊಂಡನು. ಆದರೂ ತಮ್ಮನ ಆ ವರ್ತ
ನೆಗೆ ಬಹುವಾಗಿ ಮರುಗಿದನು. ರಾಜ್ಯಲೋಭದಿಂದ ಭ್ರಾತೃ
ವಾತ್ಸಲ್ಯವನ್ನು ಬಗ್ಗಡಗೊಳಿಸುವುದು ತರವೇ ಎಂದು ಹಲುಬಿ
ದನು. ತನ್ನ ಮಗನಿಗೆ ಯೌವರಾಜ್ಯಾಭಿಷೇಕ ಮಾಡುವುದು
ಸುಳ್ಳೆಂದೂ, ಎಂದಿದ್ದರೂ ಅದು ತಮ್ಮನಿಗೇ ಸಲ್ಲಬೇಕೆಂದೂ,
ಶಿವಗಂಗೆಯಲ್ಲಿ ಹಿಡಿದ ಕೆಲಸಗಳು ಮುಗಿದ ಮಾರನೆಯ ವರ್ಷವೇ
ಆ ಉತ್ಸವವನ್ನು ನೆರವೇರಿಸುವುದಾಗಿಯೂ, ಅಷ್ಟಕ್ಕೂ ಸಮಾ

ಧಾನವಿಲ್ಲದಿರುವುದಾದರೆ ಆತನಿಗೆ ಕೂಡಲೇ ಪಟ್ಟಗಟ್ಟುವು
ದಾಗಿಯೂ ರಾಯ ತಮ್ಮನಿಗೆ ಪ್ರತ್ಯುತ್ತರವನ್ನು ಬರೆಸಿದನು.
ತನ್ನ ಹೃದಯದ ಭ್ರಾತೃವಾತ್ಸಲ್ಯವನ್ನೆಲ್ಲ ಬರೆವಣಿಗೆಯಲ್ಲಿ ಬಸಿದು
ವ್ಯಕ್ತಪಡಿಸಿದನು. ಇಷ್ಟರಿಂದ ಬಸವಯ್ಯನ ಹೃದಯದ ವಿಷಾಗ್ನಿ
ನಂದಲಿಲ್ಲ. ಶಿವಗಂಗೆಯ ಕಾರ್ಯಗಳು ಮುಗಿದ ಕೂಡಲೆ ದೇಶ
ಕ್ಷಾಮದ ಕ್ಷೋಭೆಗೆ ತುತ್ತಾದುದರಿಂದ ರಾಯನ ಗಮನವೆಲ್ಲ ಆ
ಕಡೆ ಹರಿಯಿತು. ಬಸವಯ್ಯನ ಕುದಿಯಂತು ಆರಲಿಲ್ಲ.

ಈ [illegible]ಲೇ ಚನ್ನಪಟ್ಟಣದ ಪಾಳೆಯಗಾರ ಬಸವಯ್ಯನ
ಮೂ[illegible]ಜಯನಗರದ ಅರಸುಗಳ ವಿಶ್ವಾಸವನ್ನು ಸಂಪಾದಿ
ಸ[illegible]ರಂಭಿಸಿದ್ದನು. ವಿಜಯನಗರದ ವೈಭವ ಇಳಿಮುಖ
ವಾ[illegible]ತ್ತಿದ್ದ ಕಾಲವದು. ಅವನು ಸದಾಶಿವರಾಯನ ದೌರ್ಬಲ್ಯ
ವನ್ನು ಚೆನ್ನಾಗಿ ಅರಿತುಕೊಂಡಿದ್ದನು. ಗುಣಶೀಲಗಳಲ್ಲಿ ತನ್ನನ್ನೇ
ಹೋಲುತ್ತಿದ್ದ ರಾಮರಾಜನನ್ನು ಒಲಿಸಿಕೊಳ್ಳಲು ಯತ್ನಿಸಿದನು.
ತೋರಿಕೆಯ ಮಾತುಗಳಿಂದ, ಹಲವಾರು ನಟನೆಗಳಿಂದ ಪಾಳೆಯ
ಗಾರ ಆಸ್ಥಾನದ ವಿಶ್ವಾಸವನ್ನು ಗಳಿಸಿದುದರಲ್ಲಿ ಆಶ್ಚರ್ಯವಿಲ್ಲ.
ಕೆಂಪರಾಯನಂತು ಈ ವಿಷಯದಲ್ಲಿ ಬಾಯಿ ಹಾಕಿರಲಿಲ್ಲ. ರಾಯ
ಕ್ಷಾಮನಿವಾರಣೆಯಲ್ಲಿ ಮಗ್ನನಾಗಿದ್ದಾಗಲಂತು ಅವನ ಬೆನ್ನಿನ
ಹಿಂದೆ ನೂರಾರು ಘಟನೆಗಳು ನಡೆದುಹೋದುವು. ಬಸವಯ್ಯ
ನಿಗೂ ರಾಯನಿಗೂ ಮನಸ್ತಾಪ ಬಂದಿದೆಯೆಂದು ಚನ್ನಪಟ್ಟಣ
ದವನು ಸದಾಶಿವರಾಯನಿಗೆ ದೂರಿದನು. ರಾಯ ಮದ್ದುಗುಂಡು
ಗಳನ್ನು ಹೆಚ್ಚಾಗಿ ಶೇಖರಿಸಿಕೊಂಡು ಸಾಮ್ರಾಜ್ಯದ ಮೇಲೆ ಯುದ್ಧ
ಹೂಡಿ ಸ್ವತಂತ್ರನಾಗಲು ಬಯಸಿದ್ದುದಾಗಿ ರಾಮರಾಜನಿಗೆ ತಿಳಿಸಿ
ದನು. ದೇಶದಲ್ಲಿ ತಲೆದೋರಿದ ಕ್ಷಾಮ ಆತನ ಕುಟಿಲನೀತಿಗೆ ಸಹಾ
ಯಕವಾಯಿತು. ಪ್ರಜೆಗಳನ್ನೆಲ್ಲ ಸುಲಿದು ಶಿವಗಂಗೆಯಲ್ಲಿ

ಬೊಕ್ಕಸವನ್ನು ತುಂಬಿಕೊಂಡುದರಿಂದ ಆ ಕ್ಷಾಮ ತಲೆದೋರಿ
ತೆಂದೂ, ಅದೇ ಕಾರಣವಾಗಿ ಪ್ರಜೆಗಳಲ್ಲಿ ಅಸಮಾಧಾನ ಮೂಡಿ
ತೆಂದೂ ಚಕ್ರವರ್ತಿಯ ಕಿವಿಗೆ ಮುಟ್ಟಿಸಿದನು. ಚಕ್ರವರ್ತಿ
ಇವೊಂದನ್ನೂ ಗಣನೆಗೆ ತಂದುಕೊಂಡಿರಲಿಲ್ಲ. ಆ ವಿಷ ನಿವಿಷ
ದಲ್ಲಿ ರಾಯನ ಪತ್ರ ಅಳಿಯ ರಾಮರಾಜನ ಕೈಸೇರಿತು. ಉರಿಯು
ತ್ತಿದ್ದ ಬೆಂಕಿಗೆ ತುಪ್ಪ ಹೊಯ್ದಂತಾಯಿತು, ಹೆಂಡ ಕುಡಿದ
ಮಂಗನನ್ನು ಚೇಳು ಕಚ್ಚಿದಂತಾಯಿತು. ಅವನ ಕೋಪದ ಸರ್ಪ
ಹೆಡೆ ಬಿಚ್ಚಿತು; ಕಟಕಟನೆ ಹಲ್ಲುಕಡಿದನು. [illegible]ಲಹಂಕ
ನಾಡಿನ ಆ ನುಸಿ, ಆ ಹುಳು ಏನು ಮಾಡೀತು ನೋ[illegible] ಆ
ಪತ್ರಕ್ಕೆ ಪ್ರತ್ಯುತ್ತರವೂ ಅನಗತ್ಯ" ಎಂದು ಬಿಸಾಡಿದನು. [illegible]ಸಾ
ಶಿವರಾಯ ಅವನನ್ನು ಸಮಾಧಾನಪಡಿಸಲು ಮಾಡಿದ ಪ್ರ[illegible]ತ್ನ
ವಿಫಲವಾಯಿತು.

ಚಕ್ರವರ್ತಿಯ ಉತ್ತರಕ್ಕಾಗಿ ರಾಯ ಒಂದೆರಡು ತಿಂಗಳು
ಕಾದನು. ಮತ್ತೆರಡು ಓಲೆಗಳನ್ನು ಬರೆದನು. ಅವುಗಳಿಗೂ
ಉತ್ತರವಿಲ್ಲ. ನಾಡಿನ ಪರಿಸ್ಥಿತಿಯೂ ಕೈಮೀರುತ್ತ ಬಂದಿತು.
ಕೊನೆಗೆ ಭೈರವನಾಣ್ಯವನ್ನು ಮುದ್ರಿಸಿ ಚಲಾವಣೆಗೆ ತಂದನು.
ಜಗದೇವರಾಯನ ಇಷ್ಟಾರ್ಥವೂ ಸಿದ್ಧಿಸಿತು. ಆದಷ್ಟು ಶೀಘ್ರ
ವಾಗಿ ಈ ವರ್ತಮಾನವನ್ನು ಆಸ್ಥಾನಕ್ಕೆ ಮುಟ್ಟಿಸಿದನು. ರಾಮ
ರಾಜನ ಕೋಪ ಗಡಿಮೀರಿತು. ಜಗದೇವರಾಯನ ಹಿಂದಿನ
ಚಾಡಿಮಾತುಗಳಿಗೆ ಬೆಲೆ ಬಂದಿತು, ಚೈತನ್ಯ ಒದಗಿತು. ಆದರೆ
ಕೆಂಪರಾಯನನ್ನು ಜಯಿಸುವುದು ಹೇಗೆ? ರಾಯನ ಶಕ್ತಿಸಾಮರ್ಥ್ಯ
ಗಳು ಅವನಿಗೆ ಗೊತ್ತಿದ್ದುವು. ಅವನಮೇಲೆ ದಂಡೆತ್ತಿ ಹೋದಾಗ
ಇತರ ಪಾಳೆಯಗಾರರೂ ಅವನಿಗೆ ನೆರವಾಗಿ ಮೇಲೆ ಬೀಳಬಹು
ದೆಂಬ ಶಂಕೆಯೂ ರಾಮರಾಜನನ್ನು ಬಾಧಿಸುತ್ತಿತ್ತು. ಸದಾಶಿವ

ರಾಯ ರಾಯನ ಸದ್ಗುಣಗಳನ್ನು ಮತ್ತೆ ಮತ್ತೆ ನೆನೆಸಿಕೊಂಡನು. ಹಿಂದಿನ ಚಕ್ರವರ್ತಿಗಳಿಗೂ ಅವನಿಗೂ ಇದ್ದ ಗಾಢ ಸಂಬಂಧ ವನ್ನು ಬಗೆಗೆ ತಂದುಕೊಂಡನು. ದಸರೆಯ ಸಮಯದಲ್ಲಿ ರಾಯ ನನ್ನು ಗೌರವಪೂರ್ವಕವಾಗಿ ಬರಮಾಡಿಕೊಂಡು, ವಿಚಾರಿಸಿ, ಮುಂದಿನ ಕಾರ್ಯಕ್ರಮಗಳನ್ನು ಕೈಗೊಳ್ಳುವುದೆಂದು ಚಕ್ರವರ್ತಿ ನಿಶ್ಚಯಿಸಿದನು. ರಾಮರಾಜನೂ ತಣ್ಣಗಾದನು.

ಭೈರವನಾಣ್ಯಗಳು ಚಲಾವಣೆಗೆ ಬಂದಮೇಲೆ ನಾಡಿನ ಪರಿ ಸ್ಥಿತಿ ಸ್ವಲ್ಪ [illegible] ಸುಧಾರಿಸಿತು. ಪ್ರಜೆಗಳು ಹೇಗೋ ಜೀವನ ವನ್ನು [illegible] ಕೊಂಡರು. ಮಾರನೆಯ ವರ್ಷ ಮುಂದಾಗಿಯೇ ಮಳೆ [illegible]. ರೈತರೂ ಸಮಾಧಾನಗೊಂಡರು. ರಾಯ ಶಿವ ಗಂಗ[illegible]ನ್ನು ಬಿಟ್ಟು ಬೆಂಗಳೂರಿಗೆ ಬಂದನು. ಆಶ್ವಯುಜ ಮಾಸವೂ ಬಂದಿತು. ವಿಜಯದಶಮಿಯ ಉತ್ಸವಕ್ಕೆ ಬರಲೇ ಬೇಕೆಂದು ಒತ್ತಾಯಮಾಡಿ ಸದಾಶಿವರಾಯ ತಾನೇ ಬರೆದ ಕಾಗದ ಕೆಂಪರಾಯನ ಕೈಸೇರಿತು. ತನ್ನ ನಾಡಿನ ಪರಿಸ್ಥಿತಿ ಸಂಪೂರ್ಣವಾಗಿ ಹತೋಟಿಗೆ ಬರುವತನಕ ಊರುಬಿಟ್ಟು ಕದಲ ಕೂಡದೆಂದು ರಾಯ ಮೊದಲೇ ನಿಶ್ಚಯಿಸಿಕೊಂಡಿದ್ದನು. ಆದರೆ ಚಕ್ರವರ್ತಿಯ ಸ್ವಹಸ್ತಾಕ್ಷರದ ಪತ್ರವನ್ನು ಕಡೆಗಣಿಸುವಂತಿರಲಿಲ್ಲ. ಈ ಚಕ್ರವರ್ತಿ ಪಟ್ಟಕ್ಕೆ ಬಂದಮೇಲೆ ರಾಯ ಆ ಕಡೆ ಸುಳಿದಿರ ಲಿಲ್ಲ. ಅಲ್ಲದೆ ಚಕ್ರವರ್ತಿಯ ವರ್ತನೆ ವ್ಯವಹಾರಗಳಲ್ಲಿ ಏನೋ ನವೀನತ್ವ ವ್ಯಕ್ತವಾಗುತ್ತಿದ್ದಂತೆ ಭಾಸವಾಯಿತು. ಚಕ್ರವರ್ತಿಯ ಆಹ್ವಾನವನ್ನು ಅಂಗೀಕರಿಸಿ ನಗರಕ್ಕೆ ಹೋದರೆ ಸಂಶಯಾಸ್ಪದ ವಿಲ್ಲದಂತೆ ಪರಸ್ಪರ ಬಾಂಧವ್ಯ ಕುದುರುವುದೆಂದು ರಾಯನಿಗೆ ಅನ್ನಿಸಿತು.

ವಿಜಯನಗರಕ್ಕೆ ಹೊರಡುವ ದಿನ. ರಾಯನಿಗೆ ಹಿಂದೆಂದೂ

ಇಲ್ಲದ ಸಂತೋಷ. ಮತ್ತೊಮ್ಮೆ ಪಂಪಾನಾಥನ ಸಂದರ್ಶನ ಲಾಭ ಒದಗುವುದೆಂದು ರಾಯ ಆನಂದಪರವಶನಾದನು. ಬೆಳಗ್ಗೆ ಎದ್ದು ತಾನೇ ಉಳಿಸಿ ಬಿತ್ತಿಸಿದ ಹೊಲಗದ್ದೆಗಳ ಸೊಂಪನ್ನು ನೋಡಿ ತಣಿದು ಬಂದನು. ರಾಣಿಯನ್ನೂ ಮಕ್ಕಳನ್ನೂ ಮಾತಾಡಿಸಿದನು. ಚೆನ್ನಾಂಬೆಯ ಹೃದಯ ಏಕೋ ಉದ್ವೇಗ ಕಳವಳಗಳಿಂದ ಕೂಡಿತ್ತು. ರಾಯ ಹೊರಗಡೆ ಹೊರಟಾಗ ತಾನೆಂದೂ ಅವನ ಜೊತೆಯಲ್ಲಿ ಹೋಗಬೇಕೆಂದು ಅಪೇಕ್ಷಿಸಿದವಳಲ್ಲ. ಅವನು ಕರೆದರೆ ಸದ್ದಿಲ್ಲದೆ ಹಿಂಬಾಲಿಸುತ್ತಿದ್ದಳು. ಅಂದ[illegible]ತ್ರ ತನ್ನನ್ನು ನಗರಕ್ಕೆ ಕೊಂಡೊಯ್ದು ಪಂಪಾನಾಥನ ದರ್ಶನ[illegible]ಸುವಿರಾ ಎಂದು ಪತಿಯನ್ನು ಕೇಳಿದಳು. ರಾಯ ಏನನ್ನೋ [illegible]ಚಿಸಿ "ಈಗ ಬೇಡ" ಎಂದನು. ವಿಜಯನಗರ ಸಂಸ್ಥಾನದ ವೈಭ[illegible]ನ್ನು ನೋಡುವ ಸಲುವಾಗಿ ತಾವೂ ಜೊತೆಯಲ್ಲಿ ಬರುವುದಾಗಿ ಇಬ್ಬರು ಮಕ್ಕಳೂ ಕೇಳಿಕೊಂಡರು. ಕಿರಿಯವನಂತು ಒತ್ತಾಯಮಾಡಿದನು. ಮತ್ತೊಂದು ಸಾರಿ ಕರೆದುಕೊಂಡು ಹೋಗುವುದಾಗಿ ಹೇಳಿ ರಾಯ ಅವರನ್ನು ತಡೆದನು. ಮಿತಪರಿವಾರದೊಡನೆ ರಾಯನ ಪ್ರಯಾಣ ಸಾಗಿತು. ವೀರಣ್ಣನೂ ಜತೆಗೂಡಿದನು.

ವಿಜಯನಗರದಲ್ಲಿ ಒಂದರ ಮೇಲೊಂದು ಉತ್ಸವಗಳು ವೈಭವದಿಂದ ನಡೆದುವು. ಇತರ ಮಾಂಡಲಿಕರಂತೆ ರಾಯನೂ ಸನ್ಮಾನಿತನಾದನು. ಆದರೆ ಊರುಬಿಟ್ಟಾಗ ಇದ್ದ ಉತ್ಸಾಹ ನಗರವನ್ನು ತಲುಪಿದಾಗ ಇರಲಿಲ್ಲ. ಹಿಂದೊಮ್ಮೆ ತಾನು ಆ ನಗರಕ್ಕೆ ಹೋಗಿದ್ದಾಗ ಅನುಭವಿಸಿದ ಸಲುಗೆಯ ಪ್ರೀತ್ಯಾದರಗಳು ಈಗ ಕಂಡುಬರಲಿಲ್ಲ. ಅಂದಿನ ವಾತಾವರಣದಲ್ಲಿ ಹಿರಿಮೆ, ಗಾಂಭೀರ್ಯ ಸೌಜನ್ಯಗಳು ಎದ್ದು ಕಾಣುತ್ತಿದ್ದುವು. ಇಂದಿನ ವಾತಾವರಣದಲ್ಲಿ ಏನೋ ಒಂದು ವಿಧವಾದ ಅಟ್ಟಹಾಸ, ಬಿಂಕ, ಸ್ವಾಭಿಮಾನ

ಗಳ ತೆಳ್ಳನೆಯ ತೆರೆ ಕವಿದಿದ್ದಂತೆ ಭಾಸವಾಗುತ್ತಿತ್ತು. ಉತ್ಸವಗಳು ಮುಗಿದು ಇತರರಂತೆ ರಾಯನೂ ಹೊರಡಲು ಅನುವಾದನು. ಮತ್ತೆರಡು ದಿನ ನಿಂತು ಹೋಗುವಂತೆ ರಾಯನಿಗೆ ಚಕ್ರವರ್ತಿ ಹೇಳಿಕಳುಹಿಸಿದನು. ರಾಯನ ಮನಸ್ಸಿನಲ್ಲಿ ಸಂತೋಷಕಳವಳ ವಿಸ್ಮಯಗಳು ಏಕಕಾಲದಲ್ಲಿಯೇ ಉದಯಿಸಿದುವು.

ಈಗಲೋ ಆಗಲೋ ಚಕ್ರವರ್ತಿ ಕರೆಸಬಹುದೆಂಬ ನಿರೀಕ್ಷೆ ಯಲ್ಲಿ ಎರಡು ದಿನಗಳುರುಳಿದುವು. ರಾಯನ ಸಂತೋಷ ಬತ್ತಿತು [illegible]ಮಾನ ಪ್ರಬಲವಾಯಿತು. ಮೂರನೆಯ ದಿನ ಬೆಳಗೆ ಚಕ್ರವರ್ತಿ ರಾಯನನ್ನು ತನ್ನ ಏಕಾಂತಗೃಹಕ್ಕೆ ಬರ ಮಾಡಿಕೊಂಡನು. ಅವನು ತೋರಿಸಿದ ಉಚ್ಚಾಸನದಲ್ಲಿ ರಾಯ ಕುಳಿತನು. ಕುಶಲಪ್ರಶ್ನೆಗಳಿಂದ ಮಾತುಕತೆ ಪ್ರಾರಂಭವಾಯಿತು. ವಿನಯದೊಡನೆ ಬೆರೆತ ಗಾಂಭೀರ್ಯದಿಂದ ಚಕ್ರವರ್ತಿ ರಾಯ ನನ್ನು ಕುರಿತು,

"ಹಿಂದಿನಿಂದ ವಿಜಯನಗರಕ್ಕೂ ಯಲಹಂಕ ನಾಡಿಗೂ ಮಧುರ ಬಾಂಧವ್ಯ ಬೆಳೆದು ಬಂದಿರುವುದು ಸರಿಯಷ್ಟೆ."

"ಅದು ಜಗತ್ಪ್ರಸಿದ್ಧವಾದುದು."

"ಇನ್ನು ಮುಂದೆಯೂ ಇದೇ ಬಾಂಧವ್ಯ ಏಕರೀತಿಯಾಗಿ ಬೆಳೆಯುತ್ತಿರಬೇಕೆಂಬುದೇ ನಮ್ಮ ಆಶಯ."

"ನಿಸ್ಸಂಶಯವಾಗಿ"

"ಈ ಮಾತು ನಿಜವಷ್ಟೆ"

"ಮಹಾಪ್ರಭುಗಳ ಸಂಶಯಕ್ಕೆ ಕಾರಣವೇನು."

"ನಿಮ್ಮಂತಹವರ ಬೆಂಬಲವಿಲ್ಲದಿದ್ದರೆ ಪುಂಡರ ಹಾವಳಿ ಕುಗ್ಗುತ್ತಿರಲಿಲ್ಲ. ಸಾಮ್ರಾಜ್ಯದ ಅಸ್ತಿತ್ವಕ್ಕೆ ನೀವು ಕಾರಣರಾಗಿ ದ್ದೀರಿ"

"ನಮ್ಮ ಕರ್ತವ್ಯವನ್ನು ನಾವು ಮಾಡಿದೆವೇ ಹೊರತು ಹೆಚ್ಚಾಗಿ ಏನನ್ನೂ ಮಾಡಿಲ್ಲ."

"ಚನ್ನಪಟ್ಟಣದ ಪಾಳೆಯಗಾರರು ಹೇಗಿದ್ದಾರೆ."

"ಈಗ ನೇರವಾದ ದಾರಿಯಲ್ಲಿ ನಡೆಯುತ್ತಿರುವಂತೆ ತೋರುತ್ತದೆ."

"ಸಂತೋಷ, ನಿಮ್ಮ ನಾಡಿನ ಪ್ರಜೆಗಳು ಕ್ಷೇಮದಿಂದಿರುವರಷ್ಟೆ."

"ತಮ್ಮ ಪೂರ್ವಜರ ಆಶೀರ್ವಾದದಿಂದ [illegible] ಹಿರಿಯರ ಧರ್ಮದ ಬಲದಿಂದ ಪ್ರಜೆಗಳ ನೆಮ್ಮದಿಗೆ ಎಂದೂ [illegible]ಪ್ಪೊದಗಲಿಲ್ಲ. ಆದರೆ ಕಳೆದ ವರ್ಷ ಕ್ಷಾಮದ ವಿಪತ್ತಿಗೆ [illegible]ಾದ ಪ್ರಜಾಸ್ತೋಮ ತುಂಬ ನೊಂದಿತು. ಈಗ ತಾನೆ ಮ[illegible]ದ್ದು ಬೆಳೆ ಚೆನ್ನಾಗಿದೆ. ಪ್ರಜೆಗಳು ಸಂತೋಷಚಿತ್ತರಾಗಿದ್ದಾರೆ. ಈ ವಿಷಯ ತಮ್ಮ ಚಿತ್ತಕ್ಕೆ ಈಗಾಗಲೇ ಗೊತ್ತಾಗಿರಬಹುದು."

"ಕ್ಷಾಮಕ್ಕೆ ಮಳೆಬೆಳೆ ಆಗದುದೇ ಕಾರಣವೇನು"

"ಹೌದು"

"ಪ್ರಜೆಗಳು ಆಹಾರ ಸಿಗದೆ ತುಂಬ ಕಷ್ಟಪಟ್ಟರೊ, ಕೊಳ್ಳಲು ಹಣ ಸಿಗದೆ ಸಂಕಟಪಟ್ಟರೋ." ಚಕ್ರವರ್ತಿಯ ಧ್ವನಿಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬಂದಿತು. ರಾಯನ ಮನಸ್ಸಿನಲ್ಲಿ ಸಂಶಯ ಭದ್ರವಾಗಿ ಬೇರೂರಿತು.

"ಎರಡೂ ನಿಜವೆ" ಎಂದು ರಾಯ ಕುಗ್ಗಿದ ದನಿಯಿಂದ ಹೇಳಿದನು.

"ಹಾಗಾಗಲು ದೈವ ಕಾರಣವೋ, ಮಾನವ ಕಾರಣನೋ."

"ದೈವವೆಂದೇ ಹೇಳಬೇಕು."

"ಪ್ರಜೆಗಳಿಂದ ಹಣವನ್ನು ವಿಶೇಷವಾಗಿ ಸುಲಿದಿರಂತೆ ನಿಜವೆ. ಅದಕ್ಕೆ ಶಿವಗಂಗೆಯ ಬೊಕ್ಕಸವೇ ಸಾಕ್ಷಿಯಂತೆ; ಮದ್ದು

ಗುಂಡುಗಳೇ ನಿಜವನ್ನು ಹೇಳುತ್ತವೆಯಂತೆ.'' ರಾಯನ ಮುಖದ ಕಳೆ ಕುಂದಿತು. ಚಕ್ರವರ್ತಿಯ ಮುಖದ ಬಣ್ಣವೂ ವ್ಯತ್ಯಾಸ ಹೊಂದಿತು. ಆದರೂ ಅವನು ತನ್ನ ಗಾಂಭೀರ್ಯವನ್ನು ಬಿಡಲಿಲ್ಲ.

"ಇದನ್ನು ನಾನೊಪ್ಪಲಾರೆ. ಬೇಕಾದರೆ ಪ್ರಭುಗಳೇ ಬಂದು ಪರಿಸ್ಥಿತಿಯನ್ನು ಅರಿಯಬಹುದು. ನಮ್ಮ ಕರ್ತವ್ಯಪರಿಪಾಲನೆಯಲ್ಲಿ ತಮಗೇನೋ ಹುಳುಕು ಕಂಡಿರುವಂತಿದೆ. ಅಷ್ಟೇ ಅಲ್ಲ; ನಮ್ಮ ನಿಮ್ಮ [illegible]ಶ್ವಾಸದ ಸೇತುವೆಯನ್ನು ಯಾರೋ ಬಿರುಕು ಬಿಡಿಸು[illegible]ತೆ ಕಾಣುತ್ತಿದೆ.''

"ಕ[illegible]ನುರೇ, ನಾವು ಪಿಸುಣರ ಮಾತಿಗೆ ಕಿವಿಗೊಡುವುದಿಲ್ಲವೆ[illegible] ನಿಮಗೆ ತಿಳಿದಿರಲಿ. ವಿಜಯನಗರಸಾಮ್ರಾಜ್ಯದಿಂದ ಕಳ[illegible]ೊಂಡು ಸ್ವತಂತ್ರರಾಗಬೇಕೆಂಬ ಅಪೇಕ್ಷೆ ನಿಮಗಿರುವುದಿಲ್ಲವೆ.''

"ಖಂಡಿತವಾಗಿಯೂ ಇಲ್ಲ''

''ಹಾಗಾದರೆ ಮದ್ದುಗುಂಡುಗಳ ತಯಾರಿಕೆ ಏಕೆ"

"ಅದೆಲ್ಲವೂ ಹಿಂದೆ ತಯಾರಿಸಿದುದು; ಅದೂ ಸಾಮ್ರಾಜ್ಯದ ಸುಭದ್ರತೆಗಾಗಿ.''

''ಹಾಗಾದರೆ ಬೊಕ್ಕಸದ ದುಡ್ಡೆಲ್ಲ ಏನಾಯಿತು.''

"ದಾನಧರ್ಮಗಳಿಗೆ, ದೇವಾಲಯದ ಕಟ್ಟಡಗಳಿಗೆ ಹೆಚ್ಚು ದುಡ್ಡು ವಿನಿಯೋಗವಾದುದು ನಿಜ.''

"ಅದಿರಲಿ; ನಿಮಗೂ ನಿಮ್ಮ ತಮ್ಮಂದಿರಿಗೂ ಯೌವ ರಾಜ್ಯಾಭಿಷೇಕದ ವಿಷಯದಲ್ಲಿ ಮನಸ್ತಾಪವುಂಟಾಗಿರುವುದಾಗಿ ಸುದ್ದಿ ಹರಡಿದೆ, ನಿಜವೆ.''

"ಹಿಂದೊಂದು ಸಾರಿ ಆ ಸುದ್ದಿ ಹರಡಿತ್ತು ನಿಜ. ಆ ಸುದ್ದಿಯಲ್ಲಿ ಸ್ವಲ್ಪ ತಿರುಳೂ ಇತ್ತು. ಆದರೆ ನನಗೂ ನನ್ನ ತಮ್ಮಂದಿ

ರಿಗೂ ಮನಸ್ತಾಪ ಉಂಟಾಗುವಷ್ಟರಮಟ್ಟಿಗೆ ಪರಿಸ್ಥಿತಿ ವಿಷಮಿ
ಸಿರಲಿಲ್ಲ.

"ನೀವು ಭೈರವನಾಣ್ಯವನ್ನು ಚಲಾವಣೆಗೆ ತಂದಿರುವುದು
ನಿಜವೆ'' ಚಕ್ರವರ್ತಿ ಬಿಂಕದಿಂದ ಪ್ರಶ್ನಿಸಿದನು.

''ಅದು ನಿಜ; ಕ್ಷಾಮದ ಭೀಕರ ಪರಿಸ್ಥಿತಿಯನ್ನು ಎದುರಿ
ಸಲು ಅದು ಆವಶ್ಯಕವೆಂದು ಕಂಡುಬಂದಿತು. ವೃದ್ಧಪ್ರಮುಖರ
ಸಲಹೆಯ ಮೇರೆಗೆ ಹಾಗೆ ಮಾಡಿದುದಾಯಿತು[illegible]

''ಈ ಸಂಸ್ಥಾನದಿಂದ ದೂರ ಸಿಡಿಯಲು [illegible] ಪ್ರಥಮ
ಸನ್ನಾಹವೆಂದು ಭಾವಿಸಬಾರದೇಕೆ,'' ಈ ಮಾತು[illegible]ಡಿಲ
ತುಂಡುಗಳಂತೆ ರಾಯನ ಕಿವಿಯಮೇಲೆ ಬಿದ್ದುವು. ಅ[illegible]ದೆ
ಗೆಡಲಿಲ್ಲ. ಆತನ ಧಾರ್ಮಿಕ ಸತ್ವ ನಾಡಿ ನಾಡಿಗಳಲ್ಲಿ ಪ್ರವ[illegible]ತು.
ಭಾವಾವೇಶದಿಂದ ರಕ್ತದಲ್ಲಿ ಕಾವು ಸಂಚರಿಸಿತು. ಮೀಸೆ ತುಸು
ಅದುರಿತು. ಮಾತುಗಳು ಧಾರಾಕಾರವಾಗಿ ಹೊರನುಗ್ಗಿದುವು:

"ಮಹಾಪ್ರಭು, ಕ್ಷಮಿಸಬೇಕು. ಹಿಂದಿನಿಂದ ನಮ್ಮ
ಪೂರ್ವಜರು ವಿಜಯನಗರಸಂಸ್ಥಾನಕ್ಕೆ ಅಧೀನವಾಗಿಯೇ ಯಲ
ಹಂಕ ನಾಡನ್ನು ಧರ್ಮದಿಂದ ಪಾಲಿಸಿಕೊಂಡು ಬಂದಿದ್ದಾರೆ.
ಇತರ ಮಾಂಡಲಿಕರಂತೆ ಅವರೆಂದೂ ಸಂಸ್ಥಾನದಮೇಲೆ ಬೀಳ
ಲಿಲ್ಲ; ಅದರ ಪ್ರಗತಿಗೆ ತೊಡಕನ್ನು ತಂದೊಡ್ಡಲಿಲ್ಲ. ಈ ಸಾಮ್ರಾ
ಜ್ಯದ ಏಳಿಗೆಯಲ್ಲಿ ಅವರು ತಮ್ಮ ಏಳಿಗೆಯನ್ನು ಕಂಡರು, ಹಿಂದೂ
ಧರ್ಮದ ಉಳಿವನ್ನು ಕಂಡರು. ಅದೊಂದೇ ಧ್ಯೇಯದಿಂದ
ಇಲ್ಲಿಯತನಕ ನಮ್ಮ ತನುಮನಧನಗಳನ್ನು ಅರ್ಪಿಸುತ್ತಾ ಬಂದಿ
ದ್ದೇವೆ. ಈ ಸಂಸ್ಥಾನದ ಅಭಿವೃದ್ಧಿಕಾರ್ಯದಲ್ಲಿ ನೆರವಾಗುವುದೇ
ನಮ್ಮ ಧರ್ಮವೆಂದು ಅರಿತಿದ್ದೇವೆ; ಅದಕ್ಕೆ ವಿರೋಧವಾಗಿ ವರ್ತಿಸಿ
ದಾಗಲೇ ನಾವು ಧರ್ಮ ಬಾಹಿರರಾಗುತ್ತೇವೆ. ಕರ್ತವ್ಯಚ್ಯುತ

ಗೆ ಇಹಪರವೆರಡೂ ಇಲ್ಲವೆಂದು ನಮಗೆ ತಿಳಿದೇ ಇದೆ........
...ರ....ವನಾಣ್ಯವನ್ನು ಮುದ್ರಿಸಿದುದು ನಿಜ. ಆದರೆ ಧರ್ಮದ
ಡಿಯನ್ನು ಮೀರಿ ಕೈಕೊಂಡ ಕೆಲಸವಲ್ಲ. ಯಲಹಂಕ ನಾಡಿನ
ೇಮಸಾಧನೆಗೆ ಮಾತ್ರವಲ್ಲ, ಇಡೀ ಸಂಸ್ಥಾನದ ಕಲ್ಯಾಣಕ್ಕಾಗಿ ಆ
ಾರ್ಯವನ್ನು ಕೈಗೊಂಡುದು...... ಇದರಿಂದ ಪ್ರಭುಗಳು ಕೆರಳಿ
ುವ ಪಕ್ಷಕ್ಕೆ ಅದು ನನ್ನ ದೌರ್ಭಾಗ್ಯವೆಂದೇ ಭಾವಿಸುತ್ತೇನೆ.''

ಭೀತಿಯ [illegible]ೋಂಕಿಲ್ಲದ, ಪಾಪದ ಕಿಲ್ಬಿಷವಿಲ್ಲದ ಆ ದೃಢ
ಾಣಿಗೆ [illegible] ಬೆರಗಾದನು. ಒಂದೆರಡು ನಿಮಿಷ ಕಾಲ
[illegible]ತಾಡಲಿಲ್ಲ. ರಕ್ತ ಹೆಪ್ಪುಗಟ್ಟಿತೋ ಎನ್ನುವಹಾಗೆ
[illegible] ಜಗತ್ತಿನ ಚಲನಕ್ರಿಯೆಗಳೆಲ್ಲ ಕ್ಷಣಕಾಲ ನಿಂತಂತೆ
[illegible]ಗುತ್ತಿತ್ತು.

"ಕೋಪವೇಕೆ ರಾಯರೆ. ಭೈರವನಾಣ್ಯಗಳಿಂದ ತಮ್ಮ
ನೋಭಾವನೆಯೇನಿರಬಹುದೆಂಬುದು ಸ್ಪಷ್ಟವಾಗಿ ವ್ಯಕ್ತವಾಗು
ದೆ. ಅಲ್ಲದೆ ತಾವು ಈಗ ತಾನೆ ಹೇಳಿದ ಕೆಲವು ಮಾತುಗಳಿಂದ
ನಗೆ ಏಕೋ ಸಂದೇಹ ಮೂಡುತ್ತದೆ. ಇಗೋ, ಇಲ್ಲಿ ನೋಡಿ
ಕಾಗದಗಳನ್ನು" ಎಂದು ಸದಾಶಿವರಾಯ ಹಿಂದಿನಿಂದ ಚನ್ನ
ಟ್ಟಣದ ಪಾಳೆಯಗಾರ ಬರೆದಿದ್ದ ಪತ್ರಗಳನ್ನು ತೋರಿಸಿದನು.
ಾಯ ಅವುಗಳನ್ನು ಓದಿ ನೋಡಿ ಅವಾಕ್ಕಾದನು.

"ಚನ್ನಪಟ್ಟಣದ ಪಾಳೆಯಗಾರ ನೇರವಾದ ದಾರಿಯಲ್ಲಿ
ಡೆಯುತ್ತಿರುವುದಾಗಿ ಈಗ ತಾನೇ ನೀವು ಹೇಳಲಿಲ್ಲವೆ, ರಾಯರೆ"
ಂದು ಚಕ್ರವರ್ತಿ ಕೇಳಿದನು.

"ಇಂತಹ ಪಿಸುಣರ ಮತ್ತು ನಂಬಿಸಿ ಕೊರಳುಕೊಯ್ಯು
ವರ ಎಡೆಯಲ್ಲಿ ಯಾರು ತಾನೆ ಬದುಕಬಲ್ಲರು....ಅದು ಅವನ
ಪ್ಪಲ್ಲ. ನನ್ನ ದೌರ್ಭಾಗ್ಯ. ಆ ಪಾಳೆಯಗಾರ ಬರೆದಿರುವುದೇ

ನಿಜವೆಂದು ತಾವು ನಂಬುವುದಾದರೆ ನಾನು ಏನು ಮಾಡಬ
ಆದರೆ ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಈ
ವಾರು ಸುದ್ದಿಗಳಿಗೆ ಪಿಸುಣರ ಕೈವಾಡವೇ ಮೂಲವೆಂಬ
ಮಾತ್ರ ವಾಸ್ತವವಾದುದು. ಹಿಂದಿನ ರಾಜರು ನಮ್ಮ ನಾ
ಒಳ ಆಡಳಿತದ ವಿಷಯದಲ್ಲಿ ಎಂದೂ ಇಣಿಕಿದವರಲ್ಲ. ಎಲ್ಲ ವಿಷ
ಗಳಲ್ಲಿಯೂ ಯಲಹಂಕನಾಡು ಸ್ವತಂತ್ರವಾಗಿಯೇ ಇತ್ತು. ನ
ಸಹ ಸಾಮ್ರಾಜ್ಯದ ಐಕಮತ್ಯಕ್ಕೆ ಭಂಗ[illegible]ತೆ ನಾ
ಏಳಿಗೆಗಾಗಿ ಶ್ರಮಿಸಿದ್ದೇವೆ. ಇದರ ಮೇಲೆ [illegible]ವತ
ದಯೆಯಿದ್ದಂತಾಗಲಿ" ಎಂದು ರಾಯ ನುಡಿದು [illegible]

"ಹಾಗಾದರೆ ರಾಯರೆ, ಈ ವಿಷಯಗಳನ್ನೆಲ್ಲ ನಾ[illegible]
ಮಾಡಬೇಕಾಗಿದೆ ಅಲ್ಲಿಯ ತನಕ ತಾವು ಆನೆಗೊಂದಿ[illegible]
ಬೇಕೆಂಬುದೇ ನಮ್ಮ ಬಯಕೆಯಾಗಿದೆ. ತಾವು ಅಲ್ಲಿರುವ ತ
ಏನು ಅನುಕೂಲ್ಯಗಳು ಬೇಕಾದರೂ ಒದಗಿಸಿಕೊಡಲು
ವಾಗಿರುತ್ತೇವೆ."

"ಇದೇ ತಮ್ಮ ಕೊನೆಯ ತೀರ್ಮಾನವೇ"

"ಅ....ಹು....ದು."

ಅಂದೇ ರಾಯ ಆನೆಗೊಂದಿಯನ್ನು ಸೇರಿದನು. ಬೆ
ಬುಡದಲ್ಲೊಂದು ರಾಜಯೋಗ್ಯವಾದ ಸೌಧ ಅವನಿಗಾಗಿ
ಸಿದ್ಧವಾಗಿತ್ತು. ಮನೆಯ ಸುತ್ತಲೂ ಸುಂದರವಾದ ಉದ
ವನ; ಆ ವನದಲ್ಲೊಂದು ಕೊಳ. ಮನೆಯ ಹಿಂದುಗಡೆ
ಬಾನುಗಳನ್ನು ಸಂಧಿಸುವ ಬೆಟ್ಟಗೋಡೆ; ಅನತಿದೂರದಲ್ಲಿ
ಕಾನು. ರಾಜಯೋಗ್ಯವಾದ ಸೌಕರ್ಯಗಳು ಏರ್ಪಾಡಾಗಿದ್ದ
ಆನೆಗೊಂದಿಯ ಗಡಿಯೊಳಗೆ ಎಲ್ಲೆಂದರೆ ಅಲ್ಲಿ ಸುತ್ತಾಡಲು
ಕಾಶವಿತ್ತು. ಆದರೆ ಅವನೊಡನೆ ಯಾವಾಗಲೂ ಮೂರ್ನಾ

ಕಾಪಿನಾಳ್ಗಳು ಇರುತ್ತಿದ್ದರು. ಮನೆಯ ಸುತ್ತಲೂ
ು ಕಾವಲಿರುತ್ತಿದ್ದರು. ಜೊತೆಗೆ ಕೆಲವರು ಬೇಹುಗಾರರು
ಬೆನ್ನು ಹತ್ತಿಯೇ ತಿರುಗುತ್ತಿದ್ದರು. ಎಷ್ಟೇ ಸೌಕರ್ಯವಿದ್ದ
ಷ್ಟೇ ಸ್ವಾತಂತ್ರ್ಯವಿರಲಿ, ಅವನಿಗೆ ಇಷ್ಟರಾದವರು ಹತ್ತಿರ
. ವೀರಣ್ಣನಾದರೂ ವಿಜಯನಗರವನ್ನು ಬಿಟ್ಟಿಲುಗಲಿಲ್ಲ.
ಮಕ್ಕಳನ್ನು ಬಿಟ್ಟು ಬಂದುದಕ್ಕಾಗಿ ಅವನಿಗೆ ದುಃಖ
ಗಲಿ [illegible] ರಾಯ ತನ್ನಿಂದ ಅಗಲಿದುದಕ್ಕಾಗಿ ತುಂಬ
[illegible]. ಅವನು ರಾಯನ ನೋವುನಲ್ಮೆಗಳಲ್ಲಿ ಸಮ
[illegible]ದ್ದನು; ಅವನ ಬಾಳಿನ ಉಸಿರಾಗಿದ್ದನು. ರಾಯನಿ
[illegible]ೀರಣ್ಣನ ಚಿಂತೆಯೇ ಚಿಂತೆಯಾಯಿತು. ಒಂದೆರಡು
[illegible]ಯೇ ಈ ಸುದ್ದಿ ಚಕ್ರವರ್ತಿಗೆ ತಿಳಿಯಿತು. ರಾಯನೊಡ
ಅವನು ವೀರಣ್ಣನಿಗೆ ಅನುಮತಿ ಕೊಟ್ಟನು. ಆಪ್ತಮಿತ್ರನ
ಸದಿಂದ ರಾಯನ ಹೃದಯದ ಭಾರ ಸ್ವಲ್ಪ ಕಡಮೆ
ತು. ಅವನ ದೇಹ ಆನೆಗೊಂದಿಯ ಗಡಿಯನ್ನು ದಾಟ
ೂ, ಅವನ ಮನಸ್ಸು ಪ್ರತಿನಿತ್ಯವೂ ಆ ಕಾರ್ಮಲೆಗಳನ್ನು
ತುಂಗಾಪ್ರವಾಹದಲ್ಲಿ ಮಿಂದು, ವಿಜಯನಗರವನ್ನು ಬಳಸಿ,
ಂಕವನ್ನು ಸುತ್ತಿ, ಬೆಂಗಳೂರಿನ ಕೇರಿಕೇರಿಗಳಲ್ಲಿ ಅಲೆದು,
ಲುಮೆಯ ಆ ಹೆಂಡತಿ, ಆ ಮಕ್ಕಳು, ಆ ಜಿಂಕೆ, ಆ
ಲೆಯ ಕರು, ಅವುಗಳಿಗಿಂತ ಮಿಗಿಲಾಗಿ ಯಾರಿಗಾಗಿ ತನ್ನ
ಸಧನಗಳನ್ನು ವಿನಾಸಲಾಗಿರಿಸಿದ್ದನೋ ಯಾರ ಅಭ್ಯುದಯ
ನಿತ್ಯವೂ ಎಡೆಬಿಡದೆ ದುಡಿಯುತ್ತಿದ್ದನೋ ಆ ಪ್ರಜಾ
ದ ಹೃದಯವನ್ನು ಹೊಕ್ಕು ನಲಿದು, ಕೋರಮಂಗಲದ
ದ ಲಕ್ಷ್ಮಮ್ಮನ ಗುಡಿಯಲ್ಲಿ ತುಸು ನಿಂತು ಉಸಿರೆಳೆದು,
ಶಿವಗಂಗೆಗೆ ಬಂದು ಸಿಡುಪವಣದ ಬೇಗೆಬಳಲಿಕೆಗಳನ್ನು

ನೀಗಿಕೊಂಡು ಆ ಪವಿತ್ರ ಯಾತ್ರೆಯ ಅಂತ್ಯದಲ್ಲಿ ತನ್ನ ಗೂಡನ್ನು ಸೇರುತ್ತಿತ್ತು. ಆ ಗೆಳೆಯರಿಬ್ಬರೂ ಪ್ರತಿನಿತ್ಯ ಉದ್ಯಾನವನದ ಕೊಳದ ದಿಬ್ಬದ ಮೇಲೆ ಕುಳಿತು ತಮ್ಮ ಬಾಳಿನ ಸಿಹಿಯಾದ ಕಹಿಯಾದ ಅನುಭವಗಳನ್ನೆಲ್ಲ ಸ್ಮರಿಸಿಕೊಳ್ಳುತ್ತಿದ್ದರು. ರಾಯ ತಾನು ಕಂಡ ಕನಸುಗಳನ್ನೆಲ್ಲ ನೆನೆಸಿಕೊಂಡು ಅವುಗಳಲ್ಲಿ ಕೆಲವು ಕೈಗೂಡಿದುದಕ್ಕಾಗಿ ಸಮಾಧಾನಗೊಳ್ಳುತ್ತಿದ್ದನು; ಕೆಲವು ಕೈಗೂಡದೆ ಹಾಗೆಯೇ ಉಳಿದಿದ್ದುದಕ್ಕಾಗಿ ದುಗುಡದಿಂದ [illegible]ಡುತ್ತಿದ್ದನು. ಒಮ್ಮೆ ಪಿಸುಣರ ನುಡಿಗೆ ಕಿವಿಗೊಟ್ಟ ಚಕ್ರವರ್ತಿ[illegible]ನೆಗಾಗಿ ಕನಿಕರಿಸುತ್ತಿದ್ದನು; ಮತ್ತೊಮ್ಮೆ ಅವನ [illegible]ವನ್ನು ಶ್ಲಾಘಿಸುತ್ತಿದ್ದನು.

ಇತ್ತ ಯಲಹಂಕನಾಡಿನಲ್ಲಿ ಘಟನೆಗಳಮೇಲೆ [illegible]ಗಳು ಉರುಳಿದುವು. ವಿಜಯನಗರಕ್ಕೆ ತಮ್ಮ ದೊರೆ ಹೋದಾಗ ಬೆಂಗಳೂರಿನ ಪ್ರಮುಖರೆಲ್ಲರು ಹರ್ಷದಿಂದಿದ್ದರು. ದೊರೆಯ ಪುನರಾಗಮನದ ವಾರ್ತೆಯನ್ನು ಕುತೂಹಲದಿಂದ ನಿರೀಕ್ಷಿಸಿದರು. ಹಿಂದಿನ ಸಾರಿ ವಿಜಯನಗರಕ್ಕೆ ಹೋಗಿದ್ದ ದೊರೆ ಅಚ್ಯುತರಾಯನ ಗೌರವಾದರಗಳಿಗೆ ಪಾತ್ರನಾಗಿ, ಬಿರುದು ಬಾವಲಿಗಳನ್ನು ಪಡೆದು ಬಂದಿದ್ದನು; ಮತ್ತೊಮ್ಮೆ ತಮ್ಮ ದೊರೆ ಚಕ್ರವರ್ತಿಯ ಮೆಚ್ಚುಗೆಯನ್ನು ಪಡೆದು ಬರುವನೆಂದು ಪ್ರಜೆಗಳು ದಾರಿಯನ್ನು ಕಾದರು. ವಿಜಯದಶಮಿ ಮುಗಿದು ನಾಲ್ಕಾರು ದಿನಗಳು ಕಳೆದರೂ ರಾಯ ಹಿಂದಿರುಗಲಿಲ್ಲ; ಹಿಂದಿರುಗುವ ವಾರ್ತೆಯೂ ಬರಲಿಲ್ಲ. ರಾಯ ಬಂದಿಯಾಗಿ ಆನೆಗೊಂದಿಯಲ್ಲಿದ್ದಾನೆಂಬ ಸುದ್ದಿ ಕ್ರಮೇಣ ಹರಡಿತು. ಅಷ್ಟರಲ್ಲಿಯೇ ರಾಮಗಿರಿಯಲ್ಲಿದ್ದ ಬಸವಯ್ಯ, ಹುತ್ರಿದುರ್ಗದಲ್ಲಿದ್ದ ಕೆಂಪಸೋಮಣ್ಣ ಇಬ್ಬರೂ ಆಯಾಯ ದುರ್ಗದಲ್ಲಿಯೇ ಬಂಧಿತರಾದರೆಂಬ ಸಮಾಚಾರವು ಹಬ್ಬಿತು. ಕೂಡಲೇ

ಹೊಸ ಸೈನ್ಯಾಧಿಕಾರಿಗಳು ನೇಮಿತರಾದರು. ಒಡನೆಯೇ ರಾಮ
ರಿಯ ಶಸ್ತ್ರಾಗಾರ ಹೊಸಬರ ವಶವಾಯಿತು. ಬೆಂಗಳೂರಿನ
ಾವಲಿಗೆ ಹೊಸಬಂಟರು ಬಂದರು. ಮಂತ್ರಿಮಂಡಲ ಬದಲಾವಣೆ
ಾಯಿತು. ಈ ಹೊಸಮಂತ್ರಿಮಂಡಲ ಚನ್ನಪಟ್ಟಣದ ಪಾಳೆಯ
ಾರನ ಅಂಕೆಗೊಳಪಟ್ಟಿತ್ತು. ಇಷ್ಟೆಲ್ಲ ಮಾರ್ಪಾಡುಗಳು ಮಿಂಚಿನ
ೇಗದಲ್ಲಿ ನಡೆದಿದ್ದುವು. ಕೆಂಪರಾಯನ ಬಂಧನದ ಸುದ್ದಿ ಜನರ
ಿವಿಗೆ ಬಿದ್ದು ಅವರು ಉರಿದೇಳುವುದಕ್ಕೆ ಮುಂಚೆಯೇ ಇಷ್ಟೆಲ್ಲ
ಡೆದಿರಬೇ[illegible]ರಾಮರಾಜ ಮೊದಲೇ ಉದ್ದೇಶಿಸಿ ಪೂರ್ವ
ದ್ಧತೆ[illegible]ಮಾಡಿಕೊಂಡಿದ್ದನು. ಹಾಗೆಯೇ ಉದ್ದೇಶವೂ
[illegible]

[illegible]ನಾಡಿಗೆ ಅಂತಹ ದುರ್ದಶೆ ಒದಗುವುದೆಂದು ಪ್ರಜೆ
[illegible]ದೆಂದೂ ಊಹಿಸಿರಲಿಲ್ಲ. ಮೊದಮೊದಲು ಈ ಘಟನೆ
ಳು ಬೆಂಗಳೂರಿನ ಪ್ರಮುಖರಿಗೆ ಕನಸಿನ ದೃಶ್ಯಗಳಂತೆ ಕಂಡುವು.
ನಸಿನಿಂದ ಎಚ್ಚತ್ತುಕೊಳ್ಳುವ ವೇಳೆಗೆ ಅವರು ಘಟನಾವಳಿಗಳ
ುಳಿಯಲ್ಲಿ ಸಿಕ್ಕಿ ಪೇಚಾಡುತ್ತಿದ್ದರು. ಪುರಪ್ರಮುಖರು ಒಂದೆಡೆ
ೆತು ಪರ್ಯಾಲೋಚಿಸಲು ಅವಕಾಶವೇ ಇರಲಿಲ್ಲ. ನಿರಾಶೆಯ
ಬ್ಬುಗತ್ತಲು ಇಡೀ ಪುರವನ್ನೆ ಮುಸುಗಿತು. ದುಃಖದ ಕುಟ್ಟಿ
ಳು ಜನತೆಯ ಹೃದಯವನ್ನು ಕೊರೆಯುತ್ತಿತ್ತು. ಜನರಲ್ಲಿ
ತನ್ಯದ ಚಿಹ್ನೆಗಳಿರಲಿಲ್ಲ, ಕಾರ್ಯೋತ್ಸಾಹದ ಕುರುಹುಗಳಿರ
ಲ್ಲ. ಅವರ ಪಾಲಿಗೆ ಹಬ್ಬ ಹರಿದಿನಗಳೇ ಇಲ್ಲವಾದುವು.
ನೆಗಳ ಮುಂದೆ ರಂಗವಲ್ಲಿಗಳು ಕಾಣದಾದುವು; ತಳಿರು
ೋರಣಗಳು ಮರೆಯಾದುವು. ರಾಯ ಕಟ್ಟಿಸಿದ ಗುಡಿಗಳಿಂದ
ಿನಿತ್ಯ ಸೂರ್ಯೋದಯ ಸಮಯಕ್ಕೆ ಸರಿಯಾಗಿ ಉಣ್ಮುತ್ತಿದ್ದ
ಂಗಳಘೋಷ, ಘಂಟಾನಾದದ ಅಲೆಗಳು ಕ್ರಮೇಣ ತಗ್ಗುವಂತೆ,

ತೆಗ್ಗಿ ಮಾಯವಾಯಿತು. ಮೌನನಿದ್ರೆ ಇಡೀ ಪಟ್ಟಣವನ್ನೇ ಆವರಿಸಿತು. ಆ ನಿದ್ರೆಯನ್ನು ಅರಮನೆಯ ಮೌನ ಮಾತ್ರ ಆಗಾಗ್ಗೆ ಕದಡುತ್ತಿತ್ತು. ಪತಿ ಊರು ಬಿಟ್ಟಾಗಲೇ ಚೆನ್ನಾಂಬೆಯ ಎದೆ ಕಳವಳಗೊಳ್ಳುತ್ತಿತ್ತು. ಆ ಎದೆಯಿಂದ ಚಿಮ್ಮಿದ ಅಸ್ಪಷ್ಟವಾದ ಧ್ವನಿ ಏನೋ ಅಶುಭವನ್ನು ನುಡಿಯುತ್ತಿತ್ತು. ಸೃಷ್ಟಿಯಲ್ಲಿ ಹೃದಯ ಶಕ್ತಿಗಿಂತಲೂ ಸೂಕ್ಷ್ಮವಾದ, ಅದಕ್ಕಿಂತಲೂ ಸತ್ಯವಾದ ಬೇರೊಂದು ಶಕ್ತಿಯಿಲ್ಲ. ಜ್ಞಾನವಿಜ್ಞಾನಗಳ ಅರಿವಿಗೆ ನಿಲುಕದ ವಿಷಯ ಆ ಶಕ್ತಿಯ ಹಿಡಿತಕ್ಕೆ ಸಿ[illegible] ಚೆನ್ನಾಂಬೆಯ ಎದೆಯ ದನಿ ನಿಜವಾಗಿ ಪರಿಣಮಿಸಿತು. [illegible]ಯೇ ಒಂದು ದಿನ ಬೆಳಕು ಹರಿಯುವ ಮುನ್ನವೇ ಅ[illegible]ದ ಕಾವಲಾಳುಗಳ ತಂಡ ಮುಳ್ಳುಬೇಲಿಯಂತೆ ಅರ[illegible]ನ್ನು ಸುತ್ತುವರಿದಿತ್ತು. ದುಃಖದ ಒತ್ತಡದಿಂದ ರಾಣಿ ಮೈಮ[illegible]; ಮೈತಿಳಿದ ಮೇಲೆ ಊಟವನ್ನೇ ಮರೆತಳು. ಆದರೆ ಅವಳ ಕಣ್ಣುಗಳಲ್ಲಿ ನೀರು ತೊಟ್ಟಿಡಲಿಲ್ಲ. ಕಾದು ಕುದಿದ ಸಮುದ್ರದ ನೀರು ಆವಿಯ ರೂಪದಲ್ಲಿ ಆಕಾಶಕ್ಕೇರುವುದನ್ನು ಯಾರು ತಾನೆ ಕಾಣಬಲ್ಲರು! ಆ ಎದೆಯ ತಾಪದ ಬಿಸುಪನ್ನು ಅವಳ ಮುಖ ಅಳೆದು ತೋರಿಸುತ್ತಿತ್ತು. ಬೋನಿನಲ್ಲಿ ಸಿಕ್ಕಿಬಿದ್ದ ಸಿಂಹದ ಶಿಶುಗಳಂತೆ ರಾಯನ ಮಕ್ಕಳು ಮಿಲಮಿಲನೆ ಒದ್ದಾಡುತ್ತಿದ್ದರು.

ಕ್ರಮೇಣ ಆ ದುಃಖ ವಾರ್ತೆ ನಾಡಿನ ಮೂಲೆಮೊಡಕುಗಳಿಗೆಲ್ಲ ಹಬ್ಬಿತು. ಕೆಂಪರಾಯ ವಿಜಯನಗರದ ಚಕ್ರವರ್ತಿಗಳಿಗೆ ಮಾತ್ರ ಮಾಂಡಲಿಕ. ತನ್ನ ಪ್ರಜೆಗಳಿಗೆ ಅವನು ಚಕ್ರವರ್ತಿಯಾಗಿದ್ದನು, ತಂದೆಯಾಗಿದ್ದನು, ಪ್ರಾಣಪದಕವಾಗಿದ್ದನು, ದೈವವಾಗಿದ್ದನು—ಸರ್ವಸ್ವವಾಗಿದ್ದನು. ತಮ್ಮ ದೊರೆ ಮತ್ತೊಬ್ಬರಿಗೆ ಅಧೀನನೆಂಬುದು ಅವರ ತಿಳಿವಳಿಕೆಗೆ ಬಂದಿರಲಿಲ್ಲ. ಅಂತಹ

ಸ್ಥಿತಿ ಹಿಂದೆಂದೂ ಒದಗಿರಲಿಲ್ಲ. ಒದಗಿದ್ದರೆ ಪರಿ
ತಿಯೇ ಬೇರೆಯಾಗುತ್ತಿತ್ತು. ಅಂತಹ ಧರ್ಮಪ್ರಭುವಿನ
ಂಧನವನ್ನು ತಮ್ಮ ಬಂಧನವೆಂದು ಗಣಿಸಿದರು. ರಾಯನನ್ನು
ರವಯುತವಾಗಿ ಹಿಂದಕ್ಕೆ ಕಳುಹಿಸುವ ತನಕ ತಮ್ಮ ಪ್ರಾಣದ
ೇಲಣ ಆಶೆಯನ್ನುಳಿದು ಶ್ರಮಿಸುವುದಾಗಿ ನಾಡಿನ ಮುಖಂಡರು
ಕಣಬದ್ಧರಾಗಿ ನಿಂತರು.

ಕೆಂಪರಾಯನ ಭಾಗ್ಯದ ಬೆಳಸನ್ನು ಕಂಡು ಕರುಬುತ್ತಿದ್ದ
ದೇವರ [illegible] ತೋಷಕ್ಕೆ ಪಾರವೇ ಇರಲಿಲ್ಲ. ಅನಾಯಾಸ
ಗಿ [illegible] ಷ್ಟು ದೊಡ್ಡ ನಾಡನ್ನು ಹೇಗಾದರೂ ನುಂಗ
[illegible] ಪಾಯವನ್ನು ಹುಡುಕುತ್ತಿದ್ದನು, ಬೇಗನೆ ಸ್ವತಂತ್ರ
[illegible] ಕಾತರಿಸುತ್ತಿದ್ದನು. ತನ್ನ ಆಪ್ತಮಿತ್ರರನ್ನು ನಾಡಿನ
[illegible] ಲೆಗಳಿಗೆ ಕಳುಹಿಸಿ ಜನರ ಒಲವು ನೆರವುಗಳನ್ನು ಗಳಿ
ು ಯತ್ನಿಸಿದನು. ಮುಖಂಡರನ್ನು ತನ್ನ ಕಡೆಗೆ ಸೆಳೆದು
ಳ್ಳಲು ಹೊನ್ನುಮಣ್ಣುಗಳ ಆಶೆಯನ್ನು ತೋರಿಸಿದನು. ಅವನ
ಪಾಯಗಳೆಲ್ಲ ನಿಷ್ಫಲವಾದುವು. ಕಡೆಗೆ ಹೆಚ್ಚು ಹಣ ಗಳಿಸ
ಕೆಂದು ಮದುವೆ ತೆರಿಗೆ, ವೀಳೆಯದೆಲೆ ತೆರಿಗೆ, ಹೊಗೆಸೊಪ್ಪಿನ
ಂಕ, ಮಸಣದೆರಿಗೆ ಮೊದಲಾದ ಹೊಸ ತೆರಿಗೆಗಳನ್ನು ವಿಧಿಸಿ
ು. ಆದರೆ ಆ ತೆರಿಗೆಗಳನ್ನು ವಸೂಲಿ ಮಾಡಲು ಯಾರಿಗೂ
ಯಿರಲಿಲ್ಲ, ಧೈರ್ಯವಿರಲಿಲ್ಲ. ಕಡೆಗೆ ತೆರಿಗೆಗೆ ಬದಲಾಗಿ
ದು ಕಾಳು ಧಾನ್ಯ ಸಹ ಕೈಸೇರಲಿಲ್ಲ. ಹೀಗಾಗಿ ಬೊಕ್ಕಸ
ದಾಗುತ್ತ ಬಂದಿತು. ಸೈನಿಕರಿಗೆ ಸಂಬಳ ಕೊಡಲು ದುಡ್ಡಿರ
. ಅವರು ರೈತರ ಹೊಲಗದ್ದೆಗಳನ್ನು ಲೂಟಿಮಾಡಲೂ
ಂಭಿಸಿದರು.

ಎಲ್ಲಕ್ಕೂ ಮಿತಿಯುಂಟು. ಮಾನವ ಪ್ರೇಮಕ್ಕೆ ಸಗ್ಗುವಂತೆ

ಕ್ರೂರಹಿಂಸೆಗಳಿಗೆ ಸಗ್ಗುವುದಿಲ್ಲ. ನಿರಾಶೆಯ ಉನ್ಮಾದದಲ್ಲಿ
ಸಾಮಾನ್ಯ ಜನತೆ ಎಂತಹ ಶಕ್ತಿಯನ್ನೂ ಲೆಕ್ಕಿಸದು. ತಮ್ಮ ದೊರೆ
ಯನ್ನು ಬಿಡುಗಡೆ ಮಾಡಬೇಕೆಂದು ಕೆಂಪರಾಯನ ಪ್ರಜೆಗಳು ಸದಾ
ಶಿವರಾಯನಿಗೆ ಪತ್ರದ ಮೇಲೆ ಪತ್ರ ಬರೆದರು. ಕಾರಣಾಂತರ
ಗಳಿಂದ ಚಕ್ರವರ್ತಿ ಅವುಗಳಿಗೆ ಕೂಡಲೇ ತಕ್ಕಷ್ಟು ಗಮನಕೊಡ
ಲಿಲ್ಲ. ಅಲ್ಲದೆ ಬೆನ್ನುಹತ್ತಿದ ಭೇತಾಳನಂತಿದ್ದ ಜಗದೇವರಾಯನಿಂದ
ಅಷ್ಟುಬೇಗನೆ ಯಲಹಂಕನಾಡನ್ನು ಹಿಂದಕ್ಕೆ ತೆಗೆದುಕೊಳ್ಳುವುದೂ
ಸುಲಭವಾಗಿರಲಿಲ್ಲ. ಕಡೆಗೆ ಪ್ರಜೆಗಳೇ [illegible]ವಿಷ್ಯವನ್ನು
ನಿರ್ಧರಿಸಬೇಕಾಯಿತು. ಸಾಮಾನ್ಯ ಜನತೆಯ [illegible] ಸಿಡಿ
ಮದ್ದಿಗೆ ಯಾವ ಸೈನ್ಯ ತಾನೇ ಎದೆಗೊಟ್ಟು ನಿಂತೀ[illegible]ಮ
ಗಿರಿಯ ಮದ್ದಿನ ಮನೆಯು ಸಹ ಉಳಿದೀತೇ! ಕ[illegible]ತಿ
ಹಾಹಾಕಾರಗಳು ನಾಡನ್ನೆಲ್ಲ ಆವರಿಸಿದುವು. ಪಾಳು[illegible]ರನ
ದಕ್ಷತೆ ಸಾಮರ್ಥ್ಯಗಳು ಕರಗಿಹೋದುವು. ಚಕ್ರವರ್ತಿಯು ಸಹ
ಅಂತಹ ಸಮಯವನ್ನೇ ನಿರೀಕ್ಷಿಸುತ್ತಿದ್ದನು.

೮

ತಾಳ್ಮೆಯೇ ಬಾಳ್ಮೆ

ಕೆಂಪರಾಯನ ಹಿರಿದಾದ ಸಿಡುಬಾಳಿನಲ್ಲಿ ಐದು ವರ್ಷ
ಗಳು-ಗಡಿಬಿಡಿಯಿಲ್ಲದ ಆ ಐದು ವರ್ಷಗಳು—ತುಂಬುತ್ತಿದ್ದುವು.
ವಿಜಯದಶಮಿಯಮೇಲೆ ವಿಜಯದಶಮಿಯುರುಳಿ ಐದನೆಯದು
ಬಳಿಸಾರುವುದರಲ್ಲಿತ್ತು. ಅವನ ಪಾಲಿಗೆ ಒಂದೊಂದು ವಿಜಯ

ಶಮಿಯೂ ಅಪಜಯದ ದಶಮಿಯಾಗಿತ್ತು. ಅದು ಬಾಳಿನ
ಾರ್ಥಕತೆಯನ್ನು ಎತ್ತಿ ತೋರಿಸುವಂತಿತ್ತು! ಬಾಳ ಪಯಣದ
ಳಲಿಕೆ ಆತನ ಎಣ್ಣೆಗೆಂಪಿನ ಮುಖದ ಮೇಲೆ ಕಂಡರೂ ಕಾಣ
ಂತಿತ್ತು; ಸುಕ್ಕು ಹಿಡಿದ ಚರ್ಮ, ಬಿಳಿಯ ಕೂದಲ ದೊಂದಿ
ಾಸೆ! ಆದರೂ ಆ ಹೃದಯದ ಶಾಂತಿ ನಿರ್ಮಲತೆಗಳು ಮುಖದ
ೀಲೆ ಅಚ್ಚೊತ್ತಿದಂತಿದ್ದುವು. ಒಮ್ಮೊಮ್ಮೆ ನಿರಾಶೆಯ ಮುಗಿಲೂ
ಮುಖದ [illegible] ಸುಳಿಯುತ್ತಿತ್ತು. ತನ್ನ ಪ್ರಜೆಗಳ ದೀನಾ
ಸ್ಥಿಯ[illegible]ಜನರ ಘೋರ ಸಂಕಟವನ್ನು, ತನ್ನ ತಾಯ್ನಾ
ಸ[illegible]ನ್ನು ನೆನೆದಾಗಲೆಲ್ಲ ಆ ನಿರಾಶೆ ಮೂಡುತ್ತಿತ್ತು.
[illegible]ವನದಲ್ಲಿ ವೀರಣ್ಣನೊಡನೆ ಕುಳಿತಿದ್ದಾಗ, ಆಗಾಗ್ಗೆ ಅವನ
[illegible]ತ್ತಮುತ್ತಣ ಮಲೆಗಳನ್ನು ಏರುತ್ತಿದ್ದಾಗ ಆ ಜೀವ
ದ [illegible]ನುಭವಗಳನ್ನು ಮತ್ತೆಮತ್ತೆ ನೆನೆದು, ಅವನ ಕಿವಿಗೂ
ರಿದು, ಸವಿದು ತಣಿಯುತ್ತಿದ್ದನು. ಒಮ್ಮೊಮ್ಮೆ ಒಬ್ಬನೇ
ೊಳದ ಬಳಿಯೋ, ಮರದಡಿಯೋ ಕುಳಿತು ಆ ಅಗಲಿದವರಿಗಾಗಿ
ಸುಸುಯ್ಯುತ್ತಿದ್ದನು. ಆದರೂ ಅವನ ಕೆಚ್ಚುನೆಚ್ಚುಗಳು
ಳಿಯಲಾಗಲಿಲ್ಲ. ಒಮ್ಮೆಯಾದರೂ ಚಕ್ರವರ್ತಿಯನ್ನು ಶಪಿಸ
ಲ್ಲ. ತಾಳ್ಮೆಯಲ್ಲಿ ಬಾಳ್ಮೆಯಿದೆಯೆಂದುಕೊಂಡು ಸಮಾಧಾನ
ೊಂದುತ್ತಿದ್ದನು.

ಆ ಕಡೆ ಚಕ್ರವರ್ತಿಯಾದರೂ ತೆಪ್ಪಗಿರಲಿಲ್ಲ. ಯಲಹಂಕ
ಾಡಿನ ಸ್ಥಿತಿಗತಿಗಳನ್ನು ತನ್ನ ಗೂಢಚಾರರ ಮೂಲಕ ಅರಿತು
ೊಳ್ಳುತ್ತಿದ್ದನು. ತಾನು ಮಾಡಿದುದು ತಪ್ಪೋ ನಿಜವೋ ಎಂಬ
ಂಶಯ ಅವನನ್ನು ಸದಾ ಬಾಧಿಸುತ್ತಿತ್ತು. ರಾಯ ಭೈರವ
ಾಜ್ಯವನ್ನು ಚಲಾವಣೆಗೆ ತಂದುದು ನಿಜ; ತಾನು ಸ್ವತಂತ್ರನಾಗ
ೇಕೆಂಬುದು ಇದರಿಂದ ವ್ಯಕ್ತವಾಗುತ್ತಿದ್ದುದೂ ನಿಜ. ಆ ಇಚ್ಛೆ

ಅಪರಾಧವೆ, ಅದು ಮಾನವನ ಸಹಜ ಧರ್ಮವಲ್ಲವೇ ಎಂದು
ಒಮ್ಮೊಮ್ಮೆ ಅಂದುಕೊಳ್ಳುತ್ತಿದ್ದನು. ರಾಯನ ಧರ್ಮಾಭಿಮಾನ
ದೇಶಾಭಿಮಾನಗಳು ಅವನ ಮನಸ್ಸನ್ನು ಆಕರ್ಷಿಸಿದ್ದುವು. ರಾಯನ
ಆಡಳಿತಕ್ರಮವನ್ನೂ, ಅವನಿಗೂ ಅವನ ಪ್ರಜೆಗಳಿಗೂ ಇದ್ದ
ಮಧುರಬಾಂಧವ್ಯವನ್ನೂ ತಿಳಿದುಕೊಂಡನು. ಮೊದಲೇ ಸತ್ಯಾಂಶ
ವನ್ನು ಅರಿಯಲು ಯತ್ನಿಸದೆ ಚಾಡಿಕೋರರ ಮಾತಿಗೆ ಕಿವಿ
ಗೊಟ್ಟುದು ಸರಿಯಲ್ಲವೆಂದು ಕ್ರಮೇಣ [illegible]ಗೆ ಮನವರಿಕೆ
ಯಾಯಿತು. ಬೆಂಗಳೂರಿನ ಅರಮನೆಯನ್ನು [illegible]ಗಾರರ
ಪಡೆಯಿಂದ ಬಿಡುಗಡೆಮಾಡಿದನು. ರಾಯ ಆಗ[illegible]ಂದಿ
ಯಿಂದ ವಿಜಯನಗರಕ್ಕೆ ಬಂದು ಹೋಗಬಹುದೆಂದು [illegible]
ಇತ್ತನು. ಜಗದೇವರಾಯನ ದೌರ್ಜನ್ಯವನ್ನರಿತ [illegible]
ಚಕ್ರವರ್ತಿಯ ಆಜ್ಞೆಗೆ ಅಡ್ಡಿ ತರಲಿಲ್ಲ.

ಈ ಹೊಸ ಸ್ವಾತಂತ್ರ್ಯದಿಂದ ರಾಯ ಸಮಾಧಾನ
ಗೊಂಡನು. ಆಗಾಗ್ಗೆ ವಿಜಯನಗರದ ಉನ್ನತಾಧಿಕಾರಿಗಳು
ಬಂದು ಮಾತಾಡಿಸಿಕೊಂಡು ಹೋಗುತ್ತಿದ್ದರು. ಅವರ ಮೂಲಕ
ಅಲ್ಲಿನ ಆಡಳಿತಕ್ರಮವನ್ನು ಚೆನ್ನಾಗಿ ಅರಿತುಕೊಂಡನು. ಒಮ್ಮೊಮ್ಮೆ
ಗೆಳೆಯನೊಡನೆ ಮಾಲ್ಯವಂತ, ಹೇಮಕೂಟ, ಬಸವಶೃಂಗ,
ಮಾತಂಗ, ಕಿಷ್ಕಿಂಧಾ ಪರ್ವತಗಳ ಶಿಖರಗಳನ್ನೇರಿ ಬೆಳಗುಬೈಗು
ಗಳ ರಮ್ಯದೃಶ್ಯವನ್ನು ನೋಡಿ ರೋಮಾಂಚಗೊಳ್ಳುತ್ತಿದ್ದನು.

ಮತ್ತೆ ಆಶ್ವಯುಜಮಾಸ ಸಾರಿ ಬಂತು. ವಿಜಯನಗರ
ಎಂದಿನಂತೆ ಹಬ್ಬದ ಸಂಭ್ರಮದಿಂದ ಮೆರೆಯಿತು. ನಾಡಿಗೆಲ್ಲ
ಹಿರಿಯ ಹಬ್ಬ! ದೇಶವಿದೇಶಗಳಿಂದ ಅನೇಕ ಗಣ್ಯಪುರುಷರು
ನೋಟಕ್ಕಾಗಿ ಬಂದು ನೆರೆದರು ವ್ಯಾಪಾರಕ್ಕಾಗಿ ವರ್ತಕರು,
ವಿರೂಪಾಕ್ಷನ ದರ್ಶನಾರ್ಥವಾಗಿ ಭಕ್ತರು ಆಗಮಿಸಿದರು. ದೇಶ

ಮ ರಾಜಭಕ್ತಿಗಳಿಂದ ಉಬ್ಬಿ ಉತ್ಸಾಹಗೊಂಡ ಜನರು
ಡಿನ ಮೂಲೆ ಮೂಲೆಗಳಿಂದ ಗುಂಪುಗುಂಪಾಗಿ ಬಂದು ಕಿಕ್ಕಿರಿ
ು. ವಿಜಯನಗರವೇ ಒಂದು ಸಂಕ್ಷಿಪ್ತ ಪ್ರಪಂಚವಾಗಿತ್ತು.
ವೇಂದ್ರನ ನಗರಿಯಾಗಿತ್ತು; ಸೌಂದರ್ಯದ ಆಗರವಾಗಿತ್ತು.
ಮಿಯು ಹಿಂದಿನ ದಿನವೂ ಸಾರಿತು. ಎಲ್ಲೆಲ್ಲೂ ಉತ್ಸಾಹ
ಗರಗಳು. ಆದರೆ ಚಕ್ರವರ್ತಿಯ ಹೃದಯ ಮಾತ್ರ ತಳಮಳ
ಂಡಿತ್ತು. [illegible]ಲಹಂಕ ನಾಡಿನ ಭೀಕರ ಪರಿಸ್ಥಿತಿ ಅವನ
ದುಪ[illegible]ತ್ತು. ಶ್ರೇಷ್ಠನಾದ ಮಾಂಡಲಿಕನೊಬ್ಬನನ್ನು
[illegible]ಚರಿಸುವ ದಶಮಿ ನಿಜವಾಗಿ ವಿಜಯದಶಮಿ
[illegible]ನ್ನಿಸಿತು. ಕೂಡಲೇ ತನ್ನ ಕಡೆಯ ಪ್ರತಿನಿಧಿಗಳನ್ನು
[illegible]ಯನನ್ನು ಕರೆಸುವುದು ಒಳ್ಳೆಯದೆಂದುಕೊಂಡನು.
[illegible]ಗಿ ಕರೆತಂದರೆ ರಾಯನ ನೊಂದೆದೆಗೆ ಸ್ವಲ್ಪ ಹಿತ
ಗಬಹುದೆಂದು ಯೋಚಿಸಿ ಬೆಳಕು ಹರಿಯುವುದರೊಳಗೆ ಮಿತ
ವಾರದೊಡನೆ ಆನೆಗೊಂದಿಯ ಕಡೆಗೆ ತೆರಳಿದನು.

ಬೆಳಗಿನ ಪೂಜಾವಿಧಿಗಳನ್ನು ಮುಗಿಸಿಕೊಂಡು ರಾಯ
ರಣ್ಣನೊಡನೆ ಉದ್ಯಾನವನದಲ್ಲಿ ತಿರುಗಾಡುತ್ತಿದ್ದನು. ಮುಂದೆ
ನು, ಹಿಂದೆ ವೀರಣ್ಣ ತುಟಿಪಿಟಿಕ್ಕೆನ್ನದೆ ಸುತ್ತಾಡುತ್ತಿದ್ದರು.
ಸ್ಮಾತ್ತಾಗಿ ತೇಜಿಗಳ ಗೊರಸಿನ ಶಬ್ದ ಕೇಳಿಸಿತು, ಅವರಿಬ್ಬ
ೂ ವಿಸ್ಮಯವಾಯಿತು. ದ್ವಾರಪಾಲಕನೊಬ್ಬ ಓಡಿಬಂದು
ಶಾಪ್ರಭುಗಳ ಸವಾರಿ ಚಿತ್ತೈಸಿತೆಂದು ಉಸುರಿದನು. ರಾಯ
ಕಡೆಗೆ ನಡೆದನು. ಚಕ್ರವರ್ತಿ ಕುದುರೆಯಿಂದಿಳಿದನು. ಕಣ್ಸನ್ನೆ
ಂದ ಪರಿವಾರವನ್ನು ದೂರವಿರಿಸಿದನು. ಆತನ ಮುಖ
ಡಿತ್ತು; ಆದರೂ ಮೆಲ್ಲಗೆ ನೂಸುತ್ತಿತ್ತು. ನಮಸ್ಕಾರ ಪ್ರತಿ
ಸ್ಕಾರಗಳ ಶಾಸ್ತ್ರ ಮುಗಿಯಿತು. ಇಬ್ಬರೂ ಮನೆಯೊಳಗೆ

ಪ್ರವೇಶಿಸಿದರು. ಕ್ಷಣಕಾಲ ಯಾರೂ ಮಾತಾಡಲಿಲ್ಲ. ಆ ಮೇಲೆ ರಾಯನೇ ಮಾತನ್ನು ಆರಂಭಿಸಿದನು:

"ಇಷ್ಟು ದೀರ್ಘಕಾಲದಮೇಲೆ ಮಹಾಪ್ರಭುಗಳ ದರ್ಶನ ಲಾಭ ದೊರೆತುದು ನನ್ನ ಭಾಗ್ಯವಿಶೇಷವೆಂದೇ ಭಾವಿಸುತ್ತೇನೆ."

"ರಾಯರು ಕುಶಲರಷ್ಟೆ" ಚಕ್ರವರ್ತಿ ಕುಗ್ಗಿದ ದನಿಯಿಂದ ಕೇಳಿದನು.

"ಪ್ರಭುಗಳ ಕೃಪಾವಿಶೇಷದಿಂದ"

"ಎಲ್ಲ ಸೌಕರ್ಯಗಳೂ ಕಾಲಕ್ಕೆ ಸರಿ[illegible]ಸುತ್ತಿದ್ದುವಷ್ಟೆ"

"ಏನೂ ಕೊರತೆಯಿರಲಿಲ್ಲ."

"ಆ ಮಾತನ್ನು ನಂಬಲಾರೆ"

"ವಂಚನೆಯಿಲ್ಲದೆ ಹೇಳುತ್ತಿದ್ದೇನೆ. ಉಪಚಾರದ [illegible]ತಲ್ಲ"

"ಅದು ತಮ್ಮ ಔದಾರ್ಯವನ್ನು ವ್ಯಕ್ತಪಡಿಸುತ್ತದೆ"

"ನೀವು ವಿಜಯನಗರದ ಕಡೆಗೆ ಏಕೆ ಬರಬಾರದಾಗಿತ್ತು."

"ನಾನು ಬಂಧನದಲ್ಲಿದ್ದೇನೆಂಬುದನ್ನು ಮರೆಯಲಾಗುವುದೇ; ನಾನು ಮರೆತರೂ ಜನ ಮರೆತಿರುವುದೇ; ಇತರ ರಾಜರು ಮರೆತಿರುವರೇ."

"ನಾನೀಗ ಕರೆದರೆ ನನ್ನೊಡನೆ ಬರಲಾರಿರಾ"

"ಆ ಮಾತನ್ನು ಕೇಳುವ ಭಾಗ್ಯವೇ ಸಾಕು ನನಗೆ"

"ಹಾಗಾದರೆ ನಿಮ್ಮ ನಾಡಿಗೆ ಹೋಗಲು ನಿಮಗೆ ಇಷ್ಟವಿಲ್ಲವೋ"

"ತಾಯ್ನಾಡಿನ ಹಂಬಲ, ಹೆಂಡತಿ ಮಕ್ಕಳ ಹಂಬಲ ಯಾರಿಗಿಲ್ಲ. ಆದರೆ ಹಗೆಗಳ ಅಣಕಕ್ಕೆ ಗುರಿಯಾಗಿ ಧೂರ್ತರ ಕೀಳಿನಲ್ಲಿರುವುದಕ್ಕಿಂತ ಹೀಗಿರುವುದೇ ಲೇಸು."

"ರಾಜಕೀಯ ಕಾರಣಗಳಿಂದ ನಿಮಗೆ ಈ ದುರ್ದಶೆ ಒದ
ತು. ನಾನೂ ತಕ್ಕ ಫಲವನ್ನು ಅನುಭವಿಸಿ ಆಯಿತು. ಮತ್ತೆ
ಣ್ಣನ್ನು ಕೆದಕುವಿರಾ"

"ನನ್ನ ಇಂದಿನ ಸ್ಥಿತಿಗೆ ಯಾರೂ ಕಾರಣರಲ್ಲ; ಯಾರೂ
ಪರಾಧಿಗಳಲ್ಲ. ಇದೇ ಭೂಮಿಯಲ್ಲಿ ಶ್ರೀರಾಮಚಂದ್ರ ಹೆಂಡತಿ
ನ್ನು ಕಳೆದುಕೊಂಡು ಗೋಳ್ಗರೆಯಲಿಲ್ಲವೆ. ಅದು ತಾಯಿ
ಕೆಯ ತಪ್ಪಲ್ಲ. ಬಾಳೆಂಬುದೊಂದು ಗುಲಾಬಿ ಗಿಡ. ಸುಖದ
ೂವಿನ ... ಖದ ಮುಳ್ಳುಗಳು ಹೆಣೆದುಕೊಂಡಿರುತ್ತವೆ.
... ಯಸ್ಸುಗಳು ಕಷ್ಟಸಹಿಷ್ಣುತೆಯಲ್ಲಿದೆಯೆಂಬು
... ಲ್ಲಿ. ಬಾಳಿನಲ್ಲಿ ಇಂತಹ ಪರೀಕ್ಷೆಯ ಸಂದರ್ಭ
... ದೂ ಒಂದು ಭಾಗ್ಯವಿಶೇಷವೇ ಸರಿ."

... ದನ್ನೆಲ್ಲ ಮರೆತು, ನಿಮ್ಮ ಪ್ರಜೆಗಳ ಕೋರಿಕೆ
ನ್ನು ಮನ್ನಿಸಿ, ಅವರ ಕಲ್ಯಾಣಕ್ಕಾಗಿ ನಿಮ್ಮ ನಾಡಿಗೆ ತೆರಳಿ,
ನ್ನಿನಂತೆ ನಿಮ್ಮ ನಮ್ಮ ಬಾಂಧವ್ಯಕ್ಕೆ ಊನ ಬರದಂತೆ ಆಡಳಿತ
ಸಲು ಒಪ್ಪಬೇಕೆಂಬುದೇ ನಮ್ಮ ಇಚ್ಛೆ"

"ಪ್ರಜೆಗಳ ಇಷ್ಟವೇ ನನ್ನ ಇಷ್ಟ. ಆದರೆ ಪ್ರಜೆಗಳ ಕ್ಷೇಮ
ಕ್ಕಾಗಿ ಕೈಗೊಳ್ಳುವ ಯೋಜನೆಗಳಿಂದ ವಿಷಮಪರಿಸ್ಥಿತಿ ಒದಗುವು
ದಾದರೆ...." ಚಕ್ರವರ್ತಿ ನಡುವೆ ಬಾಯಿ ಹಾಕಿ "ಮತ್ತೆ ಅಂತಹ
ರಿಸ್ಥಿತಿ ಒದಗಲಾರದು, ರಾಯರೇ. ಆದರೆ ಸಾಮ್ರಾಜ್ಯದ ಭವಿಷ್ಯ
ನ್ನು ಇಂತಹ ಯೋಗ್ಯರನ್ನವಲಂಬಿಸಿದೆ."

"ಹೆಚ್ಚಿಗೆ ಹೇಳಲಾರೆ. ಪ್ರಭುಗಳ ಇಷ್ಟವಿದ್ದಂತಾಗಲಿ."

ಚಕ್ರವರ್ತಿ ರಾಯನೊಡಗೂಡಿ ಅಂದೇ ವಿಜಯನಗರಕ್ಕೆ
ದನು. ಅನಿರೀಕ್ಷಿತವಾಗಿ ಚಕ್ರವರ್ತಿ ಆನೆಗೊಂದಿಗೆ ಹೋದುದೂ
ಯಲ್ಲಿ ಕೆಂಪರಾಯನನ್ನು ಕರೆತಂದುದೂ ಜನರಿಗೆ ಆಶ್ಚರ್ಯ

ವನ್ನುಂಟುಮಾಡಿದುವು. ಸಜ್ಜನರಿಗಂತು ಅದೊಂದು ಸಂತೋಷದ ಸುಗ್ಗಿಯೇ ಆಯಿತು. ವಿಜಯದಶಮಿಯ ದಿವಸ ವಿಶೇಷವಾದ ದರ್ಬಾರನ್ನು ಏರ್ಪಡಿಸಿ ಅನೇಕ ಮಾಂಡಲಿಕರ ಸಮ್ಮುಖದಲ್ಲಿ ಚಕ್ರವರ್ತಿ ರಾಯನ ಗುಣಗಾನವನ್ನು ಮಾಡಿದನು. ಆತನಿಗೆ ಆ ದುರ್ದಶೆ ಕಾಲವಶದಿಂದ ಪ್ರಾಪ್ತವಾಯಿತೇ ಹೊರತು ಆತನ ತಪ್ಪಿಲ್ಲವೆಂದು ವಿಶದಪಡಿಸಿದನು. ದಸರೆಗೆ ಬಂದಿದ್ದ ಜಗದೇವ ರಾಯನ ಹೊಟ್ಟೆಯಲ್ಲಿ ಸುಣ್ಣ ಸುರಿದಂತಾಯಿತು. ಉಳಿದ ಮಾಂಡಲಿಕರು ಹರ್ಷಚಿತ್ತರಾದರು.

ನಗರದಲ್ಲಿ ದಸರೆಯ ಉತ್ಸವಗಳು ಮು[illegible]ತ್ತಿಗೆ ಯಲಹಂಕ ನಾಡಿನಲ್ಲಿ ಆ ಸಂತೋಷವಾರ್ತೆ ಹರಡ[illegible]ಕ್ರ ವರ್ತಿ ಏರ್ಪಡಿಸಿದ್ದನು. ಸುದ್ದಿ ನಾಡಿನ ಗಡಿಯನ್ನು [illegible] ತಡ ಸರಕ್ಕನೆ ಎಲ್ಲಕಡೆಯೂ ಹಬ್ಬಿತು. ಹಳ್ಳಿಗಳ [illegible]ಡ ರಂತು "ನಮ್ಮ ದೊರೆ ಬಂದ, ನಮ್ಮ ಭಾಗ್ಯ ಬಂದಿತು, ನಮ್ಮ ಬಾಳು ಸಾರ್ಥಕವಾಯಿತು" ಎಂದು ಡಂಗುರ ಹೊಡೆಸಿದರು. ದೊರೆ ರಾಜಧಾನಿಯನ್ನು ಪ್ರವೇಶಿಸುವ ದಿನ ಊರಲ್ಲೆಲ್ಲ ಹಬ್ಬ ವೆಂದು ಸಾರಿದರು. ಬೆಂಗಳೂರಿನಲ್ಲಂತು ವಿಜಯದಶಮಿಯು ಹಬ್ಬವೇ ಆಯಿತು. ಮನೆ ಮನೆಗಳನ್ನು ಸಿಂಗರಿಸುವುದೇ ಗಂಡ ಸರ ಹೆಂಗಸರ ಕೆಲಸವಾಯಿತು. ಸರ್ವಮಂಗಳೆಯಾದ ಭಾಗ್ಯೇ ಶ್ವರಿ ಮತ್ತೆ ರಾಯನ ಪುರವನ್ನು ಪ್ರವೇಶಿಸಿದಳು. ರಾಯನ ತಮ್ಮಂದಿರು ಬಿಡುಗಡೆಹೊಂದಿ ಅಕ್ಕರೆಯ ಅಣ್ಣನನ್ನು ನೋಡಲು ರಾಜಧಾನಿಗೆ ಬಂದರು. ರಾಜಕುಮಾರರು ತಂದೆ ಬರುವ ದಾರಿ ಯನ್ನು ಕಾದರು. ಪತಿಯ ಅಗಲಿಕೆಯಿಂದ ಕೊರಗಿ ಮುಪ್ಪಾ ಗಿದ್ದ ಚೆನ್ನಾಂಬೆ ಕೆಂಪಮ್ಮನ ವಿಗ್ರಹದ ಮುಂದೆ ಹಣತೆ ಹಚ್ಚಿ ದಳು. ಆದರೆ ಲಕ್ಷ್ಮಮ್ಮನ ಜತೆಯಲ್ಲಿ ನಕ್ಕವಳು ಮತ್ತೆ ನಗಲೇ

ಲ್ಲ. ಉದ್ಯಾನವನ ಕಳಕಳಿಸಲಾರಂಭಿಸಿತು. ಬೆಂಗಳೂರಿನ
ುತ್ತು ಶಿವಗಂಗೆಯ ಗುಡಿಗಳಲ್ಲಿ ದೀಪೋತ್ಸವ ಪ್ರಾರಂಭ
ಾಯಿತು.

ಆ ಶುಭದಿನವೂ ಬಂದೇ ಬಂದಿತು. ರಾಯ ಶಿವಗಂಗೆಗೆ
ುರುವ ಹೊತ್ತಿಗೆ ನಾಡಿನ ಮುಖಂಡರು ಅಲ್ಲಿ ನೆರೆದಿದ್ದರು. ಇಡೀ
ಟ್ಟವೇ ತಳಿರುತೋರಣಗಳಿಂದ ಅಲಂಕೃತವಾಗಿತ್ತು. ಅಲ್ಲಿ
ಾಯ ಗಂಗಾಧರೇಶ್ವರಸ್ವಾಮಿಯನ್ನು ಪೂಜಿಸಿ ಒಂದು ದಿನ
ಂಗಿದು [illegible] ದ ಮಾರ್ಗವಾಗಿ ಬೆಂಗಳೂರನ್ನು ತಲುಪಿ
ನು [illegible] ದ್ದಕ್ಕೂ ನಿಂತಿದ್ದ ಪ್ರಜೆಗಳು ಪ್ರಭುಗಳ ದರ್ಶನ
[illegible] ತುಷ್ಟರಾದರು. ರಾಯ ಪುರದ ಹೆಬ್ಬಾಗಿಲನ್ನು
[illegible] ಲೇ ವಾದ್ಯಘೋಷ ಆಕಾಶವನ್ನೆಲ್ಲ ವ್ಯಾಪಿಸಿತು.
[illegible] ರು ಹೂವಿನ ಹಾರಗಳನ್ನರ್ಪಿಸಿದರು. ನಮಸ್ಕಾರ
ಾಡಿದ ತಮ್ಮಂದಿರನ್ನೂ ಮಕ್ಕಳನ್ನೂ ಅಪ್ಪಿಕೊಂಡನು. ತಲೆ
ುನ್ನು ಬಾಗಿಸಿ ಕಣ್ಣೀರು ಸುರಿಸುತ್ತ ದೂರ ಅಪರಾಧಿಯಂತೆ
ಂತಿದ್ದ ಬಸವಯ್ಯನನ್ನು ರಾಯ ಮತ್ತೊಮ್ಮೆ ಹತ್ತಿರಕ್ಕೆ ಸೆಳೆದು
ಿಗಿಯಪ್ಪಿದನು. ಕ್ಷಮಾವಾತ್ಸಲ್ಯಗಳ ಅಪ್ಪುಗೆಯದು. ರಾಯನ
ಣ್ಣುಗಳಲ್ಲಿಯೂ ನೀರು ತುಳುಕಿತು. ತಲೆಯೆತ್ತಿ ಸುತ್ತುವರಿದಿದ್ದ
ಪ್ರಜಾಸ್ತೋಮವನ್ನು ನೋಡಿದನು ; ಬಿಳಿಯ ಹುಬ್ಬಿನ ಕಣ್ಣು
ಳಿಂದಲೇ ಅವರನ್ನೆಲ್ಲ ಅಪ್ಪಿಕೊಂಡನು. ಮೆರವಣಿಗೆ
ುಂದೆ ಸಾಗಿತು. ಪ್ರತಿಯೊಂದು ಮನೆಯ ಬಾಗಿಲಲ್ಲಿಯೂ
ಂಡೆಯರ ಆರತಿಗಳು ಬೆಳಗುತ್ತಿದ್ದುವು. ಆರತಿಯನ್ನು
ಸ್ವೀಕರಿಸಿ ರಾಯ ಮುಂದುವರಿಯುತ್ತಿದ್ದನು. ಅರಮನೆಯ
ಾಳಿಗೆಯ ಮೇಲೆ ಮುಸುಕುದಲೆಯ ಚೆನ್ನಾಂಬೆ ಪತಿಯನ್ನು
ೋಡಲು ಕಾತರೆಯಾಗಿ ನಿಂತಿದ್ದಳು. ಮೆರವಣಿಗೆ ಹತ್ತಿರ

ಬಂದರೂ ಅವಳ ಮಬ್ಬುನೋಟಕ್ಕೆ ರಾಯನ ಗುರುತು ಸಿಗಲಿಲ್ಲ. ರಾಯ ತೇಜಿಯನ್ನಿಳಿದು ಅರಮನೆಯನ್ನು ಹೊಕ್ಕು ಚೆನ್ನಾಂಬೆಯ ಕೋಣೆಯೆಡೆಗೆ ಬರುವಷ್ಟರಲಿ ಅವಳು ಅಲ್ಲಿ ಕಾದಿದ್ದಳು; ಬಂದ ಕೂಡಲೇ ವಂದಿಸಿದಳು. ಪತಿಯ ಸೊರಗಿದ ಶರೀರವನ್ನು ನೋಡಿ ಕಣ್ಣೀರು ಸುರಿಸಿದಳು. ಕ್ಷಯರೋಗಿಯಂತಿದ್ದ ಸತಿಯನ್ನು ನೋಡಿ ರಾಯನಿಗೆ ಉಸಿರುಕಟ್ಟಿದಂತಾಯಿತು. ಕಡೆಗೆ ರಾಯ ತಾನೇ ಧೈರ್ಯತಂದುಕೊಂಡು ಹೆಂಡತಿಯನ್ನು ಸಮಾಧಾನ ಪಡಿಸಿದನು.

ಮಾರನೆಯ ದಿನದಿಂದಲೇ ರಾಯನೂ [illegible]ರೂ ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾದರು. [illegible]ನ ಪ್ರಜೆಗಳ ಉತ್ಸಾಹ ಮತ್ತೆ ಚಿಗುರಿತು; ಅವರು ಹಿಂ[illegible] ಜೀವನೋದ್ಯಮಗಳಲ್ಲಿ ತೊಡಗಿದರು. ಬಂಜರ[illegible]ಲ ಸಾರವತ್ತಾಯಿತು. ಮೂಲೆಯಲ್ಲಿ ಬಿದ್ದಿದ್ದ ಕೈಗಾರಿಕೆಯ ಉಪಕರಣಗಳಲ್ಲಿ ಪುನಃ ಚೈತನ್ಯ ಸಂಚರಿಸಿತು. ಜಗದೇವರಾಯ ವಿಧಿಸಿದ್ದ ಅನ್ಯಾಯದ ತೆರಿಗೆಗಳನ್ನು ರಾಯ ತಡಮಾಡದೆ ತೆಗೆದುಹಾಕಿದನು. ಪಾಳುಬಿದ್ದು ಹೂತುಹೋಗಿದ್ದ ಕೆರೆಕೊಳಗಳನ್ನು ಉಪಯೋಗಕ್ಕೆ ಬರುವಂತೆ ಮಾಡಿದನು ದೇವಾಲಯ ಮಠಗಳಲ್ಲಿ ಎಂದಿನಂತೆ ನಿತ್ಯಕರ್ಮಗಳು ಆರಂಭವಾದುವು. ಕೆಲವು ದಿನಗಳಲ್ಲಿಯೇ ನಾಡಿನಲ್ಲಿ ಶಾಂತಿ ನೆಲೆಗೊಂಡಿತು.

ವಿಜಯನಗರದ ಆಡಳಿತ ಕ್ರಮವನ್ನು ರಾಯ ಬಹುವಾಗಿ ಮೆಚ್ಚಿದ್ದನು. ಅದನ್ನೇ ಇಲ್ಲಿಯೂ ಅನುಸರಿಸಿ ಸಡಿಲಿಹೋಗಿದ್ದ ಆಡಳಿತಯಂತ್ರವನ್ನು ಸರಿಪಡಿಸಿದನು. ಸಾಮಾಜಿಕಕ್ಷೇತ್ರದಲ್ಲಂತು ಅವನು ಕೈಗೊಂಡ ಮಾರ್ಪಾಡುಗಳು ಕ್ರಾಂತಿಯುತವಾದುವೆಂದೇ ಹೇಳಬೇಕು. ರಾಯನ ವಂಶದ ಹೆಣ್ಣುಮಕ್ಕಳು ಮದುವೆಗೆ

ಮುಂಚೆ ಬಂಡಿದೇವರನ್ನು ಪೂಜಿಸಿ, ತಮ್ಮ ಕಿರುಬೆರಳನ್ನು ಕತ್ತರಿ
ಸುವ ರೂಢಿ ಹಿಂದಿನಿಂದ ಬೆಳೆದು ಬಂದಿತ್ತು. ಅದು ಅನಾಗರಿಕ
ಪದ್ಧತಿಯೆಂದು ಭಾವಿಸಿ ರಾಮ ಅದನ್ನು ತಪ್ಪಿಸಿದನು. ಹಂಪೆಯ
ವಿರೂಪಾಕ್ಷನ ಸಾನ್ನಿಧ್ಯಮಹಿಮೆಯಿಂದ ರಾಯ ಸಾತ್ವಿಕಾರಾಧನೆ
ಯಲ್ಲಿ ತೊಡಗಿದ್ದನು. ತಾಮಸವಿಧಾನವ ಭೈರವಪೂಜೆಯನ್ನು
ನಿಲ್ಲಿಸಿ ಶಿವನೇ ಸರ್ವೋತ್ಕೃಷ್ಟನಾದ ದೇವರೆಂದು ಸಾರಿ ಶಿವಾಲಯ
ಗಳನ್ನು ಕಟ್ಟಿಸಿದನು. ಹೀಗೆ ವಿಜಯನಗರದಲ್ಲಿ ರೂಢಿಯಲ್ಲಿದ್ದ
ಹಲವಾ[illegible] ವ್ಯವಹಾರಗಳನ್ನು ಬಳಕೆಗೆ ತಂದು ಪ್ರಜೆ
ಗಳ[illegible]ನ್ನು ತಿದ್ದಿ ನಾಗರಿಕರನ್ನಾಗಿ ಮಾಡಿದನು.

೯

ಹುಟ್ಟು ಸಾವಿಗೆ ಮೂಲ

ವಿಜಯನಗರದಿಂದ ಹಿಂದಿರುಗಿದಂದಿನಿಂದ ಕೆಂಪರಾಯನ
ಮನಸ್ಸಿನಲ್ಲಿ ಒಂದು ಯೋಚನೆ ಸದಾ ಕೊರೆಯುತ್ತಿತ್ತು. ಬಸ
ಯ್ಯನಿಗೆ ಯೌವರಾಜ್ಯಾಭಿಷೇಕವನ್ನು ಮಾಡುವುದಾಗಿ ಅವನು
ಹಳ ಹಿಂದೆಯೇ ವಾಗ್ದಾನಮಾಡಿದ್ದನು. ಆದರೆ ಸುಸಮಯ
ದಗಿರಲಿಲ್ಲ. ನಾಡಿನಲ್ಲಿ ಶಾಂತಿ ನೆಲಸಿದ ಕೂಡಲೇ ತಮ್ಮನನ್ನು
ರಿಸಿಕೊಂಡು ಆ ಪ್ರಸ್ತಾಪವನ್ನು ಎತ್ತಿದನು. “ಮಾತಿನ ಶೂಲ
ಂದೇಕೆ ಎದೆಯನ್ನು ಇರಿಯುವಿರಿ, ಅಣ್ಣ. ಹಿಂದೊಮ್ಮೆ ಚಾಡಿ
ೋರರ ಮಾತಿಗೆ ಮರುಳಾಗಿ ತಪ್ಪಿ ಆಡಿದುದು ದಿಟ. ಆ

ತಪ್ಪಿಗೆ ಶಿಕ್ಷೆಯನ್ನು ಸಹ ಅನುಭವಿಸಿಯಾಯಿತು. ತಮ್ಮ ಪಾದ ಸೇವಕನಾಗಲು ಯೋಗ್ಯತೆಯಿಲ್ಲದ ಈ ಅಲ್ಪನಿಗೆ ರಾಜನಾಗುವ ಯೋಗ್ಯತೆಯಿದೆಯೇ. ತಂದೆ ತೀರಿಕೊಂಡ ಮೇಲೆ ನಮಗೆ ನೀವೇ ತಂದೆಯಾಗಿದ್ದೀರಿ. ತಂದೆಯಂತೆ ಹಿಂದಿನ ತಪ್ಪುಗಳನ್ನೆಲ್ಲ ಮನ್ನಿಸಿ ಧನ್ಯರನ್ನಾಗಿ ಮಾಡಿರಿ." ಎಂದು ಬಸವಯ್ಯ ಅಂಗಲಾಚಿ ಬೇಡಿಕೊಂಡನು. "ಪ್ರಜೆಗಳ ಸೇವೆಗಾಗಿ ಅಧಿಕಾರವನ್ನು ಬಯಸುವುದಾದರೆ ಅದರಲ್ಲಿ ಎಳ್ಳಷ್ಟೂ ತಪ್ಪಿಲ್ಲ. ಅದ[illegible] ಮರುಗಬೇಕಾಗಿಲ್ಲ. ನಿಮ್ಮ ಭುಜಬಲದಿಂದ ಸಂಪಾದಿಸಿ[illegible] ರಾಜ್ಯಕ್ಕೆ, ಈ ಕೀರ್ತಿಗೆ ನೀವು ಉತ್ತರಾಧಿಕಾರಿಗಳಾಗುವು[illegible]ತ್ತು ನ್ಯಾಯ. ನನಗೆ ವಯಸ್ಸು ಮೀರಿದೆ. ಕೊನೆ[illegible] ಶಿವಗಂಗೆಯಲ್ಲಿ ಕಳೆಯಬೇಕೆಂಬ ಹಾರೈಕೆಯಿದೆ. [illegible] ಸಫಲವಾಗಲು ನಿಮ್ಮ ನೆರವು ಅಗತ್ಯ'' ಎಂದು [illegible]ನು. "ನಿಮ್ಮನ್ನು ಹಿಂಬಾಲಿಸುವ ಪುಣ್ಯವೇ ನನಗೂ ಒದಗಲಿ. ಈ ನಾಡಿನ ಗದ್ದುಗೆಯನ್ನೇರಿ ಪ್ರಜೆಗಳ ಸೇವೆ ಮಾಡುವ ಪುಣ್ಯ ಕುಮಾರರಿಗೆ ಲಭಿಸಲಿ. ನಮ್ಮ ವಂಶದ ಕೀರ್ತಿಯ ಕುಡಿಗಳು ಅವರು. ಅವರಲ್ಲೊಬ್ಬನಿಗೆ ಪಟ್ಟಕಟ್ಟುವುದುಚಿತ. ಇದೇ ತಮ್ಮ ಕೊನೆಯ ನಿರ್ಧಾರವಾಗಲಿ'' ಎಂದು ಬಸವಯ್ಯ ಖಂಡಿತವಾಗಿ ನುಡಿದನು. ಅವನನ್ನು ಒತ್ತಾಯಪಡಿಸುವುದರಿಂದ ಏನೂ ಪ್ರಯೋಜನವಿಲ್ಲವೆಂದು ರಾಯನಿಗೆ ಅರಿವಾಯಿತು. ಕಿರಿಯತಮ್ಮನಾದ ಕೆಂಪಸೋಮಣ್ಣನು ಗದ್ದುಗೆಯನ್ನೇರಲು ಒಡಂಬಡುವಂತಿರಲಿಲ್ಲ.

ಉಳಿದವರು ತನ್ನಿಬ್ಬರು ಮಕ್ಕಳು. ಮೊದಲನೆಯವನಾದ ಸೋಮಯ್ಯನು ತನ್ನ ಹೆಂಡತಿ ಲಕ್ಷ್ಮಮ್ಮನ ಮರಣಾನಂತರ ಪ್ರಪಂಚದ ಹಂಗು ತೊರೆದಿದ್ದನು. ಅವನನ್ನು ನೋಡಿದಾಗಲೆಲ್ಲ ರಾಯನ ಹೃದಯದಲ್ಲಿ ವೇದನೆಯುಂಟಾಗುತ್ತಿತ್ತು. ರಾಜ್ಯದ

ಸೆ ಅವನಿಗೆ ಸ್ವಲ್ಪವೂ ಇರಲಿಲ್ಲ. ತನ್ನ ಹೆಂಡತಿಯಂತೆ ಮಹ
ಕಾರ್ಯಕ್ಕಾಗಿ ಆತ್ಮತ್ಯಾಗವನ್ನು ಮಾಡುವ ಭಾಗ್ಯ ತನಗೂ ದೊರೆ
ರೆ ಸಾಕೆಂದು ಹಾತೊರೆಯುತ್ತಿದ್ದನು. ಅವನನ್ನು ಕೇಳಿದ್ದರೂ
ನ್ಮನಿಗೆ ಪಟ್ಟಕಟ್ಟುವಂತೆ ತಟಕ್ಕನೆ ಹೇಳಿಬಿಡುತ್ತಿದ್ದನು. ಉಳಿ
ವನು ಕಿರಿಯ ಮಗ ಕೆಂಪೇಗೌಡ. ವಿದ್ಯಾಬುದ್ಧಿಗಳಲ್ಲಿ ಶಕ್ತಿ
ಾಮರ್ಥ್ಯಸಳಲ್ಲಿ ಶೀಲಸ್ವಭಾವಗಳಲ್ಲಿ ತಂದೆಯನ್ನು ಹೋಲು
ದ್ದ ಮಗನವನು ಚಿಕ್ಕಂದಿನಿಂದ ತಂದೆಯ ಶಿಕ್ಷಣದಲ್ಲಿ ಬೆಳೆ
ವನು [illegible] ನಾಡಿನ ಪ್ರಭುತ್ವಕ್ಕೆ ಸರ್ವವಿಧಗಳಲ್ಲಿಯೂ
[illegible] ಗಿದ್ದವನು. ರಾಯ ಮಂತ್ರಿಗಳಿಗೂ ವೃದ್ಧ
[illegible] ಣೀನಿಶ್ಚಯವನ್ನು ತಿಳಿಸಿದನು. ಅವರೂ ಒಪ್ಪಿ
[illegible] ಭಿಷೇಕಕ್ಕೆ ಸಾಮಗ್ರಿಗಳನ್ನು ಅಣಿಮಾಡುವಂತೆ
[illegible] ಳಿಗೆ ಸೂಚಿಸಿದನು.

[illegible] ಯಗತಿ ವಿಚಿತ್ರವಾದುದು. ಮಾನವ ನೆನೆಯುವ
ೊಂದು ಆಗುವುದಿನ್ನೊಂದು. ರಾಯ ಪುರೋಹಿತನನ್ನು ಕರೆಸಿ
ಟ್ಟಾಭಿಷೇಕೋತ್ಸವಕ್ಕೆ ಲಗ್ನವನ್ನು ನಿಶ್ಚಯಮಾಡಬೇಕೆಂದಿ
ನು. ಅಷ್ಟರಲ್ಲಿ ವಿಜಯನಗರದ ರಾಮರಾಜನಿಂದ ಒಂದು
ತ್ರ ಬಂದಿತು. ಬಹಮನೀ ದೊರೆಗಳು ಒಟ್ಟುಗೂಡಿ ವಿಜಯ
ಗರವನ್ನು ಮುತ್ತುವುದರಲ್ಲಿದ್ದರೆಂದೂ, ಅಂತಹ ವಿಪತ್ಸಮಯ
ಲ್ಲಿ ಮಾಂಡಲಿಕರೆಲ್ಲರೂ ಸಹಕರಿಸದಿದ್ದರೆ ಸಾಮ್ರಾಜ್ಯ ಹಾಳಾಗು
ದರಲ್ಲಿ ಸಂದೇಹವಿಲ್ಲವೆಂದೂ ರಾಮರಾಜ ಅರಿಕೆಮಾಡಿ ಕಾಗದ
ಬರೆದಿದ್ದನು. ಆ ಕಾಗದವನ್ನು ಓದುತ್ತ ಓದುತ್ತ ಹಣ್ಣಾಗಿದ್ದ
ಯನ ದೇಹದಲ್ಲಿ ಹುರುಪು ಚಿಗುರಿತು. ಒಡನೆಯೇ ಆವೇಶ
ಬಂದಂತಾಯಿತು. ಆ ಕಾಗದ ಚಕ್ರವರ್ತಿ ಬರೆದದ್ದಲ್ಲ, ಕೊಬ್ಬಿ
ದ ಹಾರಾಡುತ್ತಿದ್ದ ರಾಮರಾಜ ಬರೆದದ್ದು, ಅದಕ್ಕೇಕೆ ಬೆಲೆ

ಕೊಡಬೇಕು ಎಂದು ರಾಯನು ಅಂದುಕೊಂಡನು. "ಅಯ್ಯೋ, ಕಾಗದ ಯಾರಿಂದ ಬಂದರೇನು? ವಿಜಯನಗರದ ಸಾಮ್ರಾಜ್ಯ ಲಕ್ಷ್ಮಿಯ ಕರೆಯೋಲೆಯಲ್ಲವೆ ಅದು, ಕೃಷ್ಣರಾಯನ ವಿಜಯ ನಗರಕ್ಕೆ ಹಾನಿ ತಟ್ಟುವುದೇ! ವಿದ್ಯಾರಣ್ಯರ ವಿಜಯನಗರ ಹಾನಿಹೊಂದುವುದೇ" ಎಂದು ಚಿಂತೆಗೊಳಗಾದನು. ಮತ್ತೆ ಅವನ ಹುರುಪು ಹುರಿಯಾಯಿತು. ಅಂದೇ ಮಂತ್ರಿಗಳನ್ನೂ ವೃದ್ಧರನ್ನೂ ಮತ್ತು ಬಸವಯ್ಯನನ್ನೂ ಕರೆಸಿಕೊಂ[illegible] ರಾಮರಾಜನಿಂದ ಬಂದಿದ್ದ ಕಾಗದವನ್ನು ಓದಿದನು. ಬಸ[illegible] [illegible]ಪೂರಿತನಾಗಿ "ಇದಕ್ಕೇಕೆ ನಮ್ಮನ್ನು ಕರೆಸಿದಿರಿ, ಅಣ್ಣ[illegible]

"ವಿಜಯನಗರ ಸಾಮ್ರಾಜ್ಯವನ್ನುಳಿಸಲ[illegible] [illegible]ನು ಸಹಾಯಮಾಡಬಲ್ಲೆವೆಂಬುದನ್ನು ಪರ್ಯಾಲೋಚ[illegible]"

"ಏನು ರಾಮರಾಜನಿಗೆ ಸಹಾಯವೆ" [illegible]ನಗಲಿ.

"ಅಲ್ಲ, ವಿಜಯನಗರಸಾಮ್ರಾಜ್ಯಕ್ಕೆ"

"ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಯೊಳಗೇಕೆ ಕರೆಯುವಿರಿ. ರಾಮರಾಜನಿಗೆ – ಆ ರಾಮರಾಜನಿಗೆ ಆ ಧೂರ್ತನಿಗೆ, ಆ ದುರಹಂಕಾರಿಗೆ, ಚಕ್ರವರ್ತಿಯನ್ನು ಮೂಲೆಗೆ ತಳ್ಳಿ ತಾನೇ ತಾನಾಗಿ ಮೆರೆಯುತ್ತಿರುವ ಆ ಮದಾಂಧನಿಗೆ ಸಹಾಯವೆಂದರೇನು? ಗೆಳೆಯನಂತೆ ನಟಿಸಿ ತನ್ನನ್ನು ಊರಿಗೆ ಬರಮಾಡಿಕೊಂಡು ನಿಷ್ಕಾರಣವಾಗಿ ಸೆರೆಮನೆಗೆ ತಳ್ಳಿ ಯಲಹಂಕನಾಡಿನ ಪ್ರಜೆಗಳನ್ನು ಬಾಯ್‌ಬಾಯ್ ಬಿಡಿಸಿದ ಆ ಪಾಪಿಯ ಪಾಪಕ್ಕೆ ತಕ್ಕ ಫಲ ಕಾದಿದೆ. ಪಾಪಿಯನ್ನು ರಕ್ಷಿಸುವುದು ಪಾಪಕರ್ಮವೇ ಸರಿ."

ಅಷ್ಟರಲ್ಲಿಯೇ ವೀರಣ್ಣನೊಡನೆ ಸಭಾಮಂದಿರವನ್ನು ಪ್ರವೇ

ನ ಸೋಮಯ್ಯನೂ ಚಿಕ್ಕಪ್ಪನ ಅಭಿಪ್ರಾಯವನ್ನೇ ಎತ್ತಿಹಿಡಿ
.

"ದುಡುಕಬೇಡ, ತಮ್ಮ; ದುಡುಕಬೇಡ ಮಗುವೆ. ನಿಧಾನ
ಆಲೋಚಿಸಿ ನೋಡಿ, ನನ್ನ ಬಂಧನಕ್ಕೆ ಕಾರಣರಾರೆಂಬು
."

"ಅಹುದಹುದು, ಪಿಸುಣರ ನುಡಿಕೇಳಿ ವರ್ತಿಸುವವನು
[illegible] ದು ಬಸವಯ್ಯ ಗರ್ಜಿಸಿದನು.

[illegible] ಒಳ್ಳೆಯವನಲ್ಲದಿರಬಹುದು. ಆದರೆ ಸದಾ
[illegible] ಅವರದು ಹೆಂಗರುಳು ನಮ್ಮನ್ನು ಬಂಧಿಸಿದು
[illegible] ಮರುಗ್ಗಿದರು. ಕೊನೆಗೆ ನಮ್ಮ ಬಿಡುಗಡೆಗೆ
[illegible] ಲ್ಲವೆ. ಅನುಭವಿಸಬೇಕಾದುದನ್ನು ಅನುಭವಿಸಿ
[illegible] ಅವರಲಿ ಈಗಿನ ಉತ್ಕಟ ಪರಿಸ್ಥಿತಿಯಲ್ಲಿ ರಾಮ
ನ ಗುಣದೋಷ ವಿಮರ್ಶೆಗೆ ತೊಡಗುವುದು ಯುಕ್ತವಲ್ಲ.
ರಾಮರಾಜನ ಸತ್ವಪರೀಕ್ಷೆಯ ಕಾಲವಲ್ಲ; ಇಡೀ ಜನಾಂ
ಸತ್ತ್ವಪರೀಕ್ಷೆಯ ಕಾಲ. ನಾವೀಗ ವ್ಯಕ್ತಿಯ ದೋಷ
ಗಮನದಲ್ಲಿಟ್ಟುಕೊಂಡು ಇಡೀ ದೇಶದ ಭವಿಷ್ಯವನ್ನು ಮರೆ
ವುದು ಸರಿಯೆ. ವ್ಯಕ್ತಿ ಅಸ್ಥಿರ; ದೇಶ ಧರ್ಮಗಳು ಸುಸ್ಥಿರ.
ಗಳಿಗಾಗಿ ನಾವು ಬಾಳಬೇಕು; ಅವುಗಳಿಗಾಗಿ ನಾವು ಬಾಳನ್ನು
ಯಬೇಕು" ರಾಯನ ಗಂಭೀರವಾಣಿಯಿಂದ ತಮ್ಮನ ರಭಸ
ವಾಯಿತು, ಮಗನ ಕೋಪ ಮಾಯವಾಯಿತು. ವೃದ್ಧರು
ನ ಅಭಿಪ್ರಾಯವನ್ನು ಅನುಮೋದಿಸಿದರು. ಎರಡು ಸಾವಿರ
ಳುಗಳ ಪಡೆಯನ್ನು ಕಳುಹಿಸುವುದೆಂದು ಅವರು ಸೂಚಿಸಿ
ಒಡನೆಯೇ ಸೋಮಯ್ಯ ಮೇಲೆದ್ದು

"ಹಾಗಾದರೆ ನಾನು ಆ ಸೈನ್ಯದ ಮುಖಂಡತ್ವವನ್ನು ವ
ಸುತ್ತೇನೆ" ಎಂದನು.

"ಆ ಪುಣ್ಯ ನನಗಿರಲಿ; ಸೋಮಯ್ಯ ಮನೆಯಲ್ಲಿರ
ಎಂದಿತು ಬಸವಯ್ಯನ ದೃಢ ವಾಣಿ.

"ಅಂತಹ ಪುಣ್ಯಕ್ಕೆ ಭಾಗಿಯಾಗುವ ಭಾಗ್ಯ ನನಗಿ
ನನ್ನಂತೆ ಬಸವಯ್ಯನೂ ವಯಸ್ಸಾದವನು. ಸೋಮಯ್ಯ
ಹೋಗಲಿ."

"ಧರ್ಮಕಾರ್ಯಕ್ಕೆ ಪಂಥಪಕ್ಷ [illegible] ಲ್ಲದ
ಹಾಗೆಯೇ ವಯಸ್ಸಿನ ಗೊಡವೆ ಏಕೆ. [illegible]
ಬೇಡಿ, ಅಣ್ಣ, ಸಂತೋಷದಿಂದ ಕಳುಹಿಸಿಕೊಡಿ. [illegible]

"ನಾನು ಚಿಕ್ಕಪ್ಪನನ್ನಾದರೂ ಹಿಂಬಾಲಿಸ [illegible]

ರಾಯ ಮಾತಾಡಲಿಲ್ಲ. ಸಭೆ ಮುಕ್ತಾ [illegible]

೧೫೬೫ರಲ್ಲಿ ನಡೆದ ರಾಕ್ಷಸತಂಗಡಿ (ತಾ [illegible])
ಯುದ್ಧ ಭರತಖಂಡದ ಚರಿತ್ರೆಯಲ್ಲಿ ಅತಿ ಪ್ರಾಮುಖ್ಯವ
ಸಂಗತಿಯಾಗಿದೆ. ಹಿಂದೂ ಸಂಸ್ಕೃತಿಯ ಉಳಿವಿಗಾಗಿ ಮ
ಉನ್ನತಿಗಾಗಿ ತಲೆಯೆತ್ತಿದ ವಿಜಯನಗರಸಾಮ್ರಾಜ್ಯವನ್ನು ವಿನ
ಗೊಳಿಸಿದ ದುರ್ಘಟನೆಯದು. ಹೊನ್ನು ಹೆಣ್ಣು ಮಣ್ಣುಗಳಿಗ
ನಡೆವ ಯಾದವೀಕಲಹವದು. ಆ ರಣಭೂಮಿ ಮೃತ್ಯುದೇವತೆ
ನಾಟ್ಯರಂಗವಾಯಿತು. ಆಗಿನ ಕಾಲಕ್ಕೆ ಸೈನ್ಯಸಂಪತ್ತಿಯಲ್ಲಿ
ಸಾಮ್ರಾಜ್ಯಕ್ಕೆ ಸರಿಸಾಟಿಯಾದ ರಾಷ್ಟ್ರ ಜಗತ್ತಿನಲ್ಲಿ ಬೇರೊಂ
ಲಿಲ್ಲ. ಒಂಭತ್ತು ಲಕ್ಷ ಕಾಲಾಳುಗಳೂ, ಒಂದು ಲಕ್ಷ ಕು
ಗಳೂ, ಎರಡು ಸಾವಿರ ಆನೆಗಳೂ ಇದ್ದುವೆಂದು ವಿದೇಶಿ
ಯಾತ್ರಿಕರ ಬರೆವಣಿಗೆಗಳಿಂದ ಗೊತ್ತಾಗುತ್ತದೆ. ಮುದುಕನ
ರಾಮರಾಜನು ಕೊನೆಯ ತನಕ ಹೋರಾಡಿದನು. ಅದ

ಲಭಿಸಲಿಲ್ಲ. ವಿಜಯನಗರದ ಸೈನ್ಯಕ್ಕೆ ಸೋಲುಂಟಾಗು
ಮ ಯಾರೂ ಕನಸಿನಲ್ಲಿಯೂ ಎಣಿಸಿರಲಿಲ್ಲ. ತಮಗೆ ಜಯ
ತುದಕ್ಕಾಗಿ ಮುಸಲ್ಮಾನರೂ ಆಶ್ಚರ್ಯಗೊಂಡರು.

ಜಯಾಪಜಯಗಳು ಮಾನವನ ಅಧೀನದಲ್ಲಿಲ್ಲ, ನಿಜ.
ಗೆದ್ದವರು ವಿಜಯದಿಂದ ಉನ್ಮತ್ತರಾಗಿ ಸೋತವರ ಕಡೆಯ
ನ್ನು ಕುರಿಗಳಂತೆ ಕತ್ತರಿಸಿ, ಅವರ ಆಸ್ತಿಪಾಸ್ತಿಗಳನ್ನು ಲೂಟಿ
ುವುದು ಸಂ[illegible]ತಿಯ ಕುರುಹಲ್ಲ, ಮಾನವತೆಯ ಲಕ್ಷಣ
[illegible] ಶತ್ರುಗಳು ಏನೂ ತಿಳಿಯದ ನಾಗರಿಕ
[illegible]ಂದರು ; ಗುಡಿಗಳನ್ನು ಅರಮನೆಗಳನ್ನು
[illegible]ಗಳನ್ನು ಮುರಿದೆಸೆದರು. ವಿಠ್ಠಲಸ್ವಾಮಿಯ
[illegible]ತ್ರ ಮುತ್ತಣ ಕಟ್ಟಡಗಳಿಗೆ ಬೆಂಕಿ ಹಚ್ಚಿದರು.
[illegible]ಸ ಪಟ್ಟಣವೊಂದಿರಲಿಲ್ಲ. ಅಷ್ಟು ಸಂಪತ್ಸಮೃದ್ಧಿ
[illegible]ವೈಭವದಿಂದ ಮೆರೆಯುತ್ತಿದ್ದ ನಗರ ಬೇರೊಂದಿರ
ಅದನ್ನು ಧ್ವಂಸಮಾಡುವ ತನಕ ಆ ಅನಾಗರಿಕರ ಸೇಡು
ಲಿಲ್ಲ. ವಿದ್ಯಾರಣ್ಯರ ವಿಜಯನಗರ, ಆ ವಿಜಯನಗರದ
ಾಜ್ಯ ಬರಿಯ ಹೆಸರಾಗಿಯೇ ಉಳಿದುವು.

ಕೆಂಪರಾಯನ ಸೈನ್ಯದಲ್ಲಿ ಒಂದು ಹಿಳ್ಳೆಯೂ ಹಿಂದಿರುಗಿ
ಲ್ಲ. ಆ ಅಶುಭವಾರ್ತೆ ಅತಿ ಶೀಘ್ರವಾಗಿ ಬೆಂಗಳೂರನ್ನು
ತು. ಅರಮನೆ ಮೌನದ ಮುಸುಕನ್ನು ಹೊದೆಯಿತು.
ಹಾಸುಗೆ ಹಿಡಿದನು-ಮತ್ತೆ ಚೇತರಿಸಿಕೊಳ್ಳಲಿಲ್ಲ....ಅವನ
ನಾಟಕದ ಕೊನೆಯ ಅಂಕ ಕೊನೆಗೊಳ್ಳುವುದರಲ್ಲಿತ್ತು.
ಅವನ ಊಟಸಾಯಿತು, ಉಸಿರಾಯಿತು. ನಿದ್ದೆಯಲ್ಲಿಯೂ
ಮ ಗದ್ದಲವೇ, ಕನಸಿನ ಕೋಲಾಹಲವೇ. ಹಗಲೆಲ್ಲ ಏರಣ್ಣ
ಏನೇನೋ ಮಾತುಗಳನ್ನು ಆಡುತ್ತಿದ್ದನು. ಆದರೆ ಅವು

ಅವನಿಗೂ ತಿಳಿಯುತ್ತಿರಲಿಲ್ಲ. ಚೆನ್ನಾಂಬೆ ಪತಿಯ ಪಾದಮೂಲ
ದಲ್ಲಿ ತಲೆತಗ್ಗಿಸಿಕೊಂಡು ಕುಳಿತಿರುತ್ತಿದ್ದಳು. ಪತಿ ಕರೆದಾಗ
ಓಕೊಳ್ಳುತ್ತಿದ್ದಳು. ಇರುಳೆಲ್ಲ ಆಗಸದ ಚುಕ್ಕಿಗಳನ್ನೆಣಿಸುತ್ತಿ
ದ್ದನು. ಆಗಾಗ್ಗೆ ಅವನ ಸ್ಮೃತಿಯ ತೆರೆಯಮೇಲೆ ಅವನ ಜೀವ
ನದ ಅನುಭವಗಳು ಹಾದು ಹೋಗುತ್ತಿದ್ದುವು. ಆಗ ಬಾಳೊಂದು
ಕನಸು ಎಂದುಕೊಳ್ಳುತ್ತಿದ್ದನು. ರಾಯ ತಂದೆ ಸತ್ತಾಗ ಅತ್ತಿ
ದ್ದನು; ಆದರೆ ಕೂಡಲೆ ಸಮಾಧಾನಗೊ[illegible] ಗುರು ತೀರಿ
ಕೊಂಡಾಗ ಇಳೆಯ ಬಾಳಿಗೆ ಇದೇ [illegible]ಂಡನು.
ಈಗಲೂ ತಮ್ಮನ ಸಾವಿಗಾಗಿ ಅಳಲಿಲ್ಲ, [illegible]ಕ್ಕಾಗಿ
ಗೋಳ್ಗರೆಯಲಿಲ್ಲ. ದೇಶಕ್ಕಾಗಿ ಪ್ರಾಣವನ್ನರ್ಪಿ[illegible]ಳು
ಸಾರ್ಥಕವಾಯಿತು, ತನ್ನ ಹೆಬ್ಬಯಕೆಯನ್ನು [illegible]ಂಡ
ಮಗನ ಬಾಳು ಧನ್ಯತೆಯನ್ನು ಪಡೆಯಿತು ಎಂ[illegible] ತಿಳಿ
ದಿದ್ದನು. ಅವರು ಸತ್ತು ತಾನು ಉಳಿದುದಕ್ಕಾಗಿ, [illegible]ನ್ನ ಬಾಳು
ಅವರ ಬಾಳಿನಂತೆ ಕೊನೆಗೊಳ್ಳದಿದ್ದುದಕ್ಕಾಗಿ ಮರುಗಿದನು.
ವಿಜಯನಗರದ ಪೂರ್ವ ವೈಭವದಲ್ಲಿ ಇಡೀ ಜನಾಂಗದ ಹಿರಿಮೆ
ಯನ್ನು ಕಂಡಿದ್ದನು. ಆ ವೈಭವದ ಸೂರೆಯ ಕತೆಯನ್ನು ಕೇಳಿ
ಕುದಿದನು, ಕೊರಗಿದನು. ಮತ್ತೆ ಆ ವೈಭವ ಎಂದೆಂದಿಗೂ
ಮರಳದೆಂದು ಪರಿತಪಿಸಿದನು. ರಾಮರಾಜನ ತಮ್ಮ ತಿರುಮಲ
ರಾಜ ಪೆನುಗೊಂಡೆಯಲ್ಲಿ ಪುನಃ ವಿಜಯನಗರದ ಬಾವುಟವನ್ನು
ಹಾರಿಸಿದನೆಂಬುದನ್ನು ಕೇಳಿ ರಾಯನಿಗೆ ಸ್ವಲ್ಪ ಸಮಾಧಾನ
ವಾಯಿತು.

ರಾಕ್ಷಸತಂಗಡಿಯ ಯುದ್ಧ ಮುಗಿದು ನಾಲ್ಕು ವರ್ಷಗಳಾ
ದುವು. ರಾಯನಿಗೆ ದಿನೇ ದಿನೇ ನಿಶ್ಶಕ್ತಿ ಹೆಚ್ಚುತ್ತಿತ್ತು. ಆದರೂ
ಎಂದಿನಂತೆ ಆಡಳಿತವನ್ನು ನಡೆಸುತ್ತಿದ್ದನು. ಇದ್ದಕ್ಕಿದ್ದಂತೆ

ಒಂದು ದಿನ ತನ್ನ ನಾಡಿನ ತೀರ್ಥಕ್ಷೇತ್ರಗಳನ್ನೆಲ್ಲ ಸುತ್ತಿ ಬರಬೇಕೆನಿಸಿತು. ನಾಲ್ಕು ವರ್ಷಗಳಿಂದ ಅರಮನೆಯನ್ನು ಬಿಟ್ಟಲುಗಿರಲಿಲ್ಲ. ಅಂದು ಪತ್ನೀಪುತ್ರರನ್ನೂ ವೀರಣ್ಣನನ್ನೂ ಕೂಡಿಕೊಂಡು ಬೆಂಗಳೂರಿನಲ್ಲಿ ತಾನು ಕಟ್ಟಿಸಿದ್ದ ದೇವಾಲಯಗಳನ್ನೆಲ್ಲ ನೋಡಿಕೊಂಡು, ಲಕ್ಷ್ಮಮ್ಮನ ಗುಡಿಯಲ್ಲಿ ಪ್ರಸಾದವನ್ನು ಸ್ವೀಕರಿಸಿ ವಿದ್ಯಾಶ್ರಮವಿದ್ದ ಐಗಂಡಪುರಕ್ಕೆ ಹೋಗಿ ಅದರ ಬಳಿ ಹರಿಯುತ್ತಿದ್ದ ಹೊಳೆ[illegible]ಂದು, ಗುರುವಿನ ಸಮಾಧಿಯನ್ನು ಹೂಗಳಿಂದ[illegible]ಹಂಕಕ್ಕೆ ಹೋಗಿ ಅಲ್ಲಿಯ ಹಿರಿಯರನ್ನೆಲ್ಲ ನ[illegible]ರಾಮಗಿರಿಯಕಡೆಗೆ ಹೊರಟನು.

[illegible] ತುಂಬ ಉಲ್ಲಾಸಕರವಾಗಿತ್ತು. ರಾಯನ [illegible]ಲವಿಕೆ ಕಾಣುತ್ತಿತ್ತು; ಮುಖದಲ್ಲಿ ಉತ್ಸಾಹ [illegible] ಅವನ ನಾಲಗೆ ಚುರುಕಾಗಿತ್ತು. ಒಮ್ಮೆ ಮಗನನ್ನು[illegible]ಕ್ಕೆ ಸೆಳೆದು ತನ್ನ ಜೀವನದ ಅನುಭವಗಳನ್ನು ವರ್ಣಿಸುತ್ತಿದ್ದನು. ಲಕ್ಷ್ಮಮ್ಮ, ಬಸವಯ್ಯ, ಸೋಮಯ್ಯ—ಅವರ ಗುಣಗಾನವನ್ನು ಮಾಡಿ ಮಾನವನಾಗಿ ಹುಟ್ಟಿದಮೇಲೆ ಅವರಂತೆ ಬಾಳಬೇಕು, ಅವರಂತೆ ಬಾಳನ್ನು ಮುಗಿಸಬೇಕು ಎಂದು ಉಪದೇಶಿಸುತ್ತಿದ್ದನು. ಪೆನುಗೊಂಡೆಯ ರಾಜರು ಪುನಃ ವಿಜಯನಗರವನ್ನು ಉದ್ಧರಿಸಲು ತೊಡಗಿದರೆ ಅವರಿಗೆ ನೆರವು ನೀಡಬೇಕೆಂದು ಬೋಧಿಸುತ್ತಿದ್ದನು. ಆಗಾಗ್ಗೆ ವೀರಣ್ಣನ ಕಡೆ ತಿರುಗಿ ತಾನು ಒಬ್ಬಂಟಿಗನಾಗಿ ಬಾಲ್ಯದಲ್ಲಿ ಅಲೆದ ಕಾಡುಮೇಡುಗಳನ್ನೂ ಕುಳಿತು ವಿಶ್ರಮಿಸಿಕೊಂಡ ನೀರ್ದಾಣಗಳನ್ನೂ, ಸುತ್ತಮುತ್ತಣ ಪ್ರದೇಶಗಳನ್ನು ನೋಡಲು ಏರಿ ನಿಂತ ಕೋಡುಗಲ್ಲುಗಳನ್ನೂ ತೋರಿಸುತ್ತಿದ್ದನು. ವೀರಣ್ಣನೊಡಗೂಡಿ ರಾತ್ರಿಯ ಕಾಲದಲ್ಲಿ ಕಾಡಿನಲ್ಲಿ ಕಳೆದ ತಾಣಗಳನ್ನೂ, ಆಗಾಗ್ಗೆ ಮಿಗಗಳನ್ನು ಬೇಟೆ

ಯಾಡಿದ ಪೊದರುಗಳನ್ನೂ ಬೆರಳ್ ನೀಡಿ ಚೆನ್ನಾಂಬೆಗೆ ತೋರಿಸು ತ್ತಿದ್ದನು. ಜಿಂಕೆಯ ಹಸುಳೆಯನ್ನು—ಅದೇ ಅವನ ಕೊನೆಯ ಬೇಟೆ— ಕೊಂದು ನೊಂದು ಕಣ್ಣೀರು ಸುರಿಸಿದ ಕಮರಿಯನ್ನು ಮರೆಯದೆ ತೋರಿಸಿದನು. ಮುಂದೆ ರಾಮಗಿರಿ ಹುತ್ರಿದುರ್ಗ ಗಳನ್ನು ಬಳಸಿಕೊಂಡು ಶಿವಗಂಗೆಯನ್ನು ತಲುಪಿದರು.

ಅಷ್ಟುಹೊತ್ತಿಗೆ ರಾಯ ತುಂಬ ಬಳಲಿದ್ದನು. ಪ್ರಯಾಣ ಕಾಲದ ಉತ್ಸಾಹ ವಿರಾಮ ಕಾಲದಲ್ಲಿ ಕ[illegible] ಏಳೆಂಟು ದಿನಗಳಲ್ಲಿಯೇ ರಾಯನ ದೇಹಸ್ಥಿತಿ ಹದ[illegible]ಸುದ್ದಿ ನಾಡಿನಲ್ಲೆಲ್ಲ ಹರಡಿತು. ಪ್ರಜೆಗಳು ಕಳವಳ[illegible] ದೊರೆಯನ್ನು ತಮ್ಮ ತಂದೆಯನ್ನು ನೋಡು[illegible] ಖ್ಯಾತ ಜನರು ಶಿವಗಂಗೆಯಲ್ಲಿ ಗುಂಪುಕೂಡಿ[illegible] ಕೊನೆಯ ಸಂದರ್ಶನ ಲಭಿಸಿದುದಕ್ಕಾಗಿ ತಾ[illegible] ಕೊಂಡರು ಸಂತುಷ್ಟ ಹೃದಯದ, ಕೃತಾರ್ಥ[illegible]ವನದ ಶಾಂತತೆಯ ತಿಳಿವೆಳಗು ರಾಯನ ಮುಖದಲ್ಲಿ ನಲಿದಾಡುತ್ತಿತ್ತು. ರಾಯ ಕೊನೆಯುಸಿರೆಳೆದಾಗ ಚೆನ್ನಾಂಬೆ ನ್ಯೆಮರೆತಳು, ಜನ ಸಂದಣಿ ಚಿಟ್ಟನೆ ಚೀರಿತು; ಬೆಟ್ಟ ಮಾರ್ದನಿಗೈದಿತು.

* * * *

ರಾಯನ ಶವಸಂಸ್ಕಾರವನ್ನು ಮುಗಿಸಿ ಹಿಂದಿರುಗುವ ವೇಳೆಗೆ ವೀರಣ್ಣನೂ ತನ್ನ ಬಾಳನ್ನು ಮುಗಿಸಿದ್ದನು. ಬಾಳಿನಲ್ಲಿ ಹೇಗೋ ಸಾವಿನಲ್ಲಿಯೂ ಹಾಗೆಯೇ ಅವನು ರಾಯನನ್ನು ಹಿಂಬಾಲಿಸಿದನು.

೧೦

ಆದರೇನ್ ಹಿರಿದಾದುದಳಿಯದು

ಯಲಹಂಕ ವಂಶವೆಂಬ ಅರಸುಮನೆತನವೊಂದು ತುಂಬ
ಪ್ರಸಿದ್ಧವಾಗಿತ್ತು. ಆ ಮನೆತನದಲ್ಲಿ ಅಮಿತಮಹಿಮೆಯುಳ್ಳ
...ರಿಯ ಕೆಂಪರಾಯನೆಂಬ ರಾಜ ಉದಿಸಿದನು. ಅವನ ಪ್ರತಾಪ
...ಾಹಸಗಳು ನಾಡಿನ ಮೂಲೆಮೂಲೆಯಲ್ಲಿಯೂ ಮನೆಮಾತಾ
...ದ್ದುವು. ... ...ಗಳನ್ನೆಲ್ಲ ನಿರ್ಮೂಲಮಾಡಿದನು. ಆತನ
...ೀರ್ತಿ ... ...ಧ್ರ ದ್ರಾವಿಡ ವನಿತೆಯರ ಕರ್ಣಪೂರವೋ
...ನ... ...ತ್ತಿತ್ತು. ಹೀಗೆಂದು ಕೆಂಪೇಗೌಡನ
... ...ಸ್ಥಾನದಲ್ಲಿದ್ದ ಏಕಾಂಬರಶಾಸ್ತ್ರಿಗಳು ತಾವು
... ...ದ ವೀರಭದ್ರವಿಜಯವೆಂಬ ಚಂಪೂಗ್ರಂಥದಲ್ಲಿ
... ...ಹಿಮೆಯನ್ನು ಹೊಗಳಿದ್ದಾರೆ.

... ...ಲ್ಲಿ ಅಶೋಕ ಮತ್ತು ನೆಪೋಲಿಯನ್ನರ ಹೆಸರು
...ಳು ಸು... ...ವಾಗಿವೆ. ಒಬ್ಬ ಕ್ರಿ. ಪೂ. ಮೂರನೆಯ ಶತ
...ಮಾನದಲ್ಲಿ ... ಖಂಡದ ಚಕ್ರವರ್ತಿಯಾಗಿದ್ದವನು; ಮತ್ತೊಬ್ಬ
...ದಿನೆಂಟನೆಯ ಶತಮಾನದಲ್ಲಿ ಫ್ರಾನ್ಸ್ ದೇಶವನ್ನು ಆಳುತ್ತಿದ್ದ
...ನು. ಒಬ್ಬ ರಕ್ತಪಾತವನ್ನು ಸಹಿಸದೆ, ಶಸ್ತ್ರಸಂನ್ಯಾಸವನ್ನು
...ೀಕರಿಸಿ, ಹಿಮಾಚಲದಿಂದ ರಾಮಸೇತುವಿನತನಕ ಅನೇಕ
...ರ್ಮಕಾರ್ಯಗಳನ್ನು ಮಾಡಿಸಿ, ಧರ್ಮವೀರನೆನಿಸಿಕೊಂಡು ಇಡೀ
...ರತಖಂಡಕ್ಕೆ ಏಕ ಚಕ್ರಾಧಿಪತಿಯಾದವನು; ಮತ್ತೊಬ್ಬ ರಕ್ತ
...ಾತವೆಷ್ಟಾದರೂ ತಣಿಯದೆ ಏಸಿಯಾ ಯೂರೋಪು ಖಂಡ
...ಳನ್ನೆಲ್ಲ ಶಕ್ತಿಯಿಂದ ಗೆಲ್ಲಬೇಕೆಂದು ಉದ್ದೇಶಿಸಿ ಸಾಧ್ಯವಾಗದೆ
...ಹುಜನರ ಶಾಪಕ್ಕೆ ಗುರಿಯಾದವನು. ಪ್ರಪಂಚದಲ್ಲಿ ಚಿರ
...ಾವುದು ಅಚಿರ ಯಾವುದು—ಧರ್ಮಬಲವೋ ದೈತ್ಯಬಲವೊ—

ಎಂಬ ತತ್ವ ಇವರಿಬ್ಬರ ಜೀವನಕಥೆಗಳಿಂದ ಸುಸ್ಪಷ್ಟವಾಗಿ ತಿಳಿದುಬರುತ್ತದೆ.

ಕೆಂಪೇಗೌಡ ಅಶೋಕನಷ್ಟು ದೊಡ್ಡ ದೊರೆಯಾಗಿರಲಿಲ್ಲ, ನಿಜ; ಆದರೆ ಅವನಂತೆ ಧರ್ಮವೀರನಾಗಿದ್ದನು. ಅವನು ಯಲಹಂಕ ನಾಡನ್ನು ಬೆಳೆಸಿದುದು ಕತ್ತಿಯ ಬಲದಿಂದಲ್ಲ, ಧರ್ಮದ ಬಲದಿಂದ. ಮೂರು ಹೊತ್ತೂ ಪ್ರಜೆಗಳ ಹಿತಚಿಂತನೆಯಲ್ಲಿಯೇ ಅವನು ಮಗ್ನನಾಗಿರುತ್ತಿದ್ದನು. ತನ್ನ [illegible] ಸದಾಚಾರ ಸಂಪನ್ನರಾಗಿರಬೇಕು, ಭಗವದ್ಭಕ್ತರಾ[illegible]ರ್ವದಾ ಸುಖವಾಗಿರಬೇಕು ಎಂದೇ ಅವನು [illegible]ಗುಡಿ ಗೋಪುರ ಮಠತಟಾಕಗಳನ್ನು ಕಟ್ಟಿಸಿದನು. [illegible]ಷ್ಟ ರಾದರೆ ಈಶ್ವರನು ಸಂತುಷ್ಟನಾಗುತ್ತಾನೆಂದು [illegible]ು.

ಕೆಂಪೇಗೌಡನ ಮನೆದೇವರು ಭೈರ[illegible]ಲ ಕ್ರಮೇಣ ಈಶ್ವರನ ಸಾತ್ತ್ವಿಕ ಪೂಜೆಯಲ್ಲಿ ಅ[illegible]ಟ್ಟ ಶಿವಾಲಯಗಳನ್ನು ಕಟ್ಟಿಸಿದನು ಆದರೆ ಇತರ[illegible]ರುಗಳಲ್ಲಿ ಅಸಡ್ಡೆಯಿರಲಿಲ್ಲ. ದೇವತೆಗಳ ಸಂಬಂಧವಾಗಿ[illegible]ರಲ್ಲಿ ವಾದ ವಿವಾದಗಳು ಮೂಡಿದಾಗ ಅವನು ನಿಷ್ಪಕ್ಷಪಾತವಾದ ತೀರ್ಪಿತ್ತು ಅವುಗಳನ್ನು ಬಗೆಹರಿಸುತ್ತಿದ್ದನು. ಆಗಾಗ್ಗೆ ಐಗಂಡಪುರಕ್ಕೆ ಹೋಗಿ ಅಲ್ಲಿಯ ಹೊಳೆಯಲ್ಲಿ ಮಿಂದು ಚೆನ್ನಕೇಶ್ವರಸ್ವಾಮಿಯನ್ನು ಪೂಜಿಸಿಕೊಂಡು ಬರುತ್ತಿದ್ದನು. ರಾಮಗಿರಿಯಲ್ಲಿ ಶ್ರೀರಾಮದೇವರ ದೇವಾಲಯದ ಕಲ್ಯಾಣಮಂಟಪವನ್ನು ಕಟ್ಟಿಸಿ ಪೂಜೆ, ಉತ್ಸವಗಳು ನಡೆಯುವಂತೆ ಏರ್ಪಡಿಸಿದನು. 'ದೇವರೊಬ್ಬ ನಾಮ ಹಲವು' ಎಂಬ ತತ್ತ್ವವನ್ನು ಅವನು ಚೆನ್ನಾಗಿ ಅರಿತಿದ್ದನು.

ಕೆಂಪೇಗೌಡನ ಹಿರಿಮೆಯನ್ನು ಇಂದಿಗೂ ಸಾರುತ್ತಿರುವ ಶಾಶ್ವತ ಕಾರ್ಯವೆಂದರೆ ಬೆಂಗಳೂರುನಗರನಿರ್ಮಾಣ. ಅದೀಗ

ದಕ್ಷಿಣ ಇಂಡಿಯದ ಕಣ್‌ನೆಲೆಯಾಗಿದೆ, ನಗರಗಳ ರಾಣಿಯಾಗಿದೆ; ಇಡೀ ಪ್ರಪಂಚದ ಹೊಗಳಿಕೆಗೆ ಭಾಜನವಾಗಿದೆ. ಒಮ್ಮೆ ಈ ಊರಿಗೆ ಬಂದವರು, ಹಿಂದಿರುಳು ತಂಗಿದವರು, ಮತ್ತೆ ಅದನ್ನು ಬಿಟ್ಟುಹೋಗಲು ಎಳಸರು. ಚಳಿದೇಶದವರಿಗೆ ಇದರ ವಾಯುಗುಣ ಇಂಪು, ಉಷ್ಣದೇಶದವರಿಗೆ ತಂಪು. ಆದುದರಿಂದ ಪ್ರಪಂಚದ ನಾನಾ ಭಾಗಗಳ, ನಾನಾ ವರ್ಣಗಳ, ನಾನಾ ಅಭಿರುಚಿಸಂ[illegible]ನರು ಇಲ್ಲಿ ಬಂದು ನೆಲೆಗೊಂಡಿದ್ದಾರೆ. ಆದು[illegible]ಜ್ಞಾನಕ್ಕೆ, ಸಂಪತ್ಸಮೃದ್ಧಿಗೆ, ಸಂಸ್ಕೃತಿಗೆ ಕ[illegible]ಗಿದೆ; ಜೀವನೋದ್ಯಮಗಳ ಬೀಡಾಗಿದೆ. [illegible]ಡ ಹಾಕಿಸಿದ್ದ ಗಡಿಗೋಪುರಗಳನ್ನು ಸಹ [illegible]ಸ್ತಾರವಾಗಿ ನಗರ ಬೆಳೆದಿದೆ, ಬೆಳೆಯುತ್ತಿದೆ. [illegible]ಸಂಸ್ಥಾನದ ಆಡಳಿತದ ಕೇಂದ್ರ, ಕಾರ್ಯಾಲಯ ವಾ[illegible]ನಗರ ಸಾಮ್ರಾಜ್ಯವಳಿಯಿತು; ಅದರ ಕೀರ್ತಿ ಮಹಿ[illegible]ಗ್ಯಗಳು ಮೈಸೂರಿನಲ್ಲಿ ನೆಲೆಸಿದುವು. ವಿಜಯನಗರ ವಳಿಯಿತು, [illegible]ದರೂ ಅದರ ಲೋಕಸಂಪೂಜ್ಯವಾದ ಶ್ರೀಮಂತ ಸಂಸ್ಕೃತಿ ಈ ಕಲ್ಯಾಣ ನಗರಿಯಲ್ಲಿ ಇಂದಿಗೂ ರಾರಾಜಿಸುತ್ತಿದೆ, ಎಂದೆಂದಿಗೂ ಪ್ರಜ್ವಲಿಸಲಿದೆ. ಧನ್ಯ ಕೆಂಪೇಗೌಡ!

ವಂದನೆ

ಈ ಗ್ರಂಥವನ್ನು 1952–53 ನೆಯ ಇಸ[illegible]ೀಯರ್ ಸೆಕೆಂಡರಿ ತರಗತಿಗೆ ಪಠ್ಯಪುಸ್ತಕವನ್ನಾಗಿ ಆರಿಸು[illegible]ಭ್ಯಾಸ ಇಲಾಖೆಯ ಅಧಿಕಾರಿಗಳಿಗೂ, ಪಠ್ಯಪುಸ್ತಕ[illegible]ತಾ ಪೂರ್ವಕವಾದ ವಂದನೆಗಳು.

